ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 14 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 89 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಬಿಜೆಪಿ ಆಡಳಿತಾವಧಿಯ ಎಲ್ಲಾ ಹಗರಣಗಳು ಎಸ್‌ಐಟಿ ತನಿಖೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ವರ್ಗಾವಣೆಯಲ್ಲಿ ಲಂಚ ಪಡೆದಿರುವುದು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ: ಸಿಎಂ
- ಹಿಂದೆ ಎಸಿಬಿಯನ್ನು ಸಿಬಿಐ ಮಾದರಿ ಸಂಸ್ಥೆ ಮಾಡುವ ಉದ್ದೇಶವಿತ್ತು



ಬೆಂಗಳೂರು, ಜು.13(ಕೆಎಂಶಿ)– ವರ್ಗಾವಣೆಯಲ್ಲಿ ಲಂಚ ತೆಗೆದುಕೊಂಡಿರುವುದನ್ನು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುವುದಾಗಿ ಘೋಷಣೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಂದಿನ ಬಿಜೆಪಿ ಆಡಳಿತದ ಎಲ್ಲಾ ಹಗರಣಗಳನ್ನು ಎಸ್‌ಐಟಿ ಮೂಲಕ ತನಿಖೆ ನಡೆಸುವುದಾಗಿ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ಈಗಾಗಲೇ ಕೆಲವು ಹಗರಣಗಳನ್ನು ಲೋಕಾಯುಕ್ತಕ್ಕೆ ವಹಿಸಲಾಗಿದ್ದು, ಅವುಗಳನ್ನು ಕೂಡ ಎಸ್‌ಐಟಿಯಿಂದಲೇ ತನಿಖೆ ನಡೆಸಲಾಗುವುದು ಎಂದರು. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿಗಳು ವರ್ಗಾವಣೆಯಲ್ಲಿ ದಂಧೆ ನಡೆದಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಆದರೆ, ಈ ಆರೋಪವನ್ನು ಖಂಡ–ತುಂಡವಾಗಿ ಅಲ್ಲಗಳೆಯುತ್ತೇನೆ. ನನ್ನ ಇಲಾಖೆಯಲ್ಲಿ ಇನ್ನೂ ನಾನು ವರ್ಗಾವಣೆ ಮಾಡಿಲ್ಲ. ಬಜೆಟ್ ಸಿದ್ಧತೆ ಇದ್ದುದ್ದರಿಂದ ಇತ್ತ ಕಡೆ ಗಮನ ಹರಿಸಲಾಗಲಿಲ್ಲ.

ನನ್ನ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯಲು ಸಾಧ್ಯವೇ ಇಲ್ಲ. ಅಧಿಕಾರ ವಹಿಸಿಕೊಂಡ ಮೊದಲ ಸಂಪುಟ ಸಭೆಯಲ್ಲೇ ನನ್ನ ಸಹೋದ್ಯೋಗಿಗಳಿಗೆ ಭ್ರಷ್ಟಾ



ಚಾರ ರಹಿತ ಆಡಳಿತ ನಡೆಸಿ, ವರ್ಗಾವಣೆಯಲ್ಲಿ ಕೈ ಬದಲಾವಣೆಗೆ ಅವಕಾಶ ಮಾಡಿಕೊಡಬೇಡಿ ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಈಗ ದರೋಡೆ ಹೆದ್ದಾರಿ

ರಾಡ್ ಹಿಡಿದು ಬೈಕ್‌ಗಳಲ್ಲಿ ಸಿನಿಮೀಯ ಶೈಲಿಯಲ್ಲಿ ಕಾರು ಚೇಸ್ ಮಾಡಿದ ದರೋಡೆಕೋರರು

- ಬುಧವಾರ ಸರಿ ರಾತ್ರಿ ಸುಮಾರು 8 ಕಿಲೋಮೀಟರ್ ಬೆನ್ನತ್ತಿದ ಖದೀಮರು
- ಕಾರು ಚಾಲಕನ ಧೈರ್ಯ, ಸಾಹಸದಿಂದ ಪ್ರಯತ್ನ ಫಲ ಕೊಡದೆ ಬರಿಗೈಲಿ ಮರಳಿದ ದುಷ್ಕರ್ಮಿಗಳು

ಮೈಸೂರು, ಜು.13(ಬಿಎಲ್‌ಯು)– ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಅಪಘಾತದ ಹೆದ್ದಾರಿ ಮಾತ್ರವಲ್ಲ, ಸುಲಿಗೆ ಹಾಗೂ ದರೋಡೆಕೋರರಿಗೆ ರಹದಾರಿ ಸಿಕ್ಕಂತಹ ದಾರಿಯೂ ಆಗಿದೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನ ಮಂಡ್ಯದ ತೂಬಿನಕೆರೆ ಬಳಿ ಬುಧವಾರ ರಾತ್ರಿ ಖತರ್ನಾಕ್ ದರೋಡೆಕೋರರ ತಂಡ, ಕಾರು ತಡೆದು ದರೋಡೆಗೆ ಯತ್ನಿಸಿದೆ. ಆದರೆ ಚಾಲಕನ ಚಾಕಚಕ್ಯತೆಯಿಂದ ಅವರ ಯತ್ನ ವಿಫಲವಾಗಿದೆ. ಮೈಸೂರಿನ ನಿವಾಸಿಗಳಾದ ಬಾಪುಲಿಂಗರಾಜ್ ಅರಸ್, ಗಿರೀಶ್ ಹಾಗೂ ಶ್ರೀಕಾಂತ್ ಅವರು ರಾತ್ರಿ ಸುಮಾರು 10.30 ಗಂಟೆಗೆ ಹುಂಡೈ ಅಸೆಂಟ್ ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರು ಕಡೆ ಹೊರಟಿದ್ದಾರೆ. ಸುಮಾರು 12 ಗಂಟೆ ಸಮಯದಲ್ಲಿ ಮಂಡ್ಯದ ಕೈಗಾರಿಕಾ ಪ್ರದೇಶ ತೂಬಿನಕೆರೆ ಬಳಿ ಬರುತ್ತಿದ್ದಂತೆ, ಬುಲೆಟ್ ಹಾಗೂ ಹೀರೋ ಹೋಂಡಾ ಬೈಕ್‌ನಲ್ಲಿ ಹಿಂಬಾಲಿಸಿ ಬಂದ ನಾಲ್ವರು, ಕಾರನ್ನು ತಡೆಯಲು ಯತ್ನಿಸಿದ್ದಾರೆ.

ಯಾರೋ ಕುಡಿದ ಮತ್ತಿನಲ್ಲಿ ಹೀಗೆ ವರ್ತಿಸುತ್ತಿರಬಹುದು ಎಂದು ಮೊದಲಿಗೆ ಭಾವಿಸಿದ್ದರು. ಆದರೆ, ಕಾರು ತಡೆಯಲು ಯತ್ನಿಸಿದವರು ಮುಖಕ್ಕೆ ಟವಲ್ ಸುತ್ತಿಕೊಂಡು, ಕೈಯ್ಯಲ್ಲಿ ರಾಡ್ ▶ 6ನೇ ಪುಟಕ್ಕೆ





ದರೋಡೆ ದಾಖಲೆ

- ಫೆಬ್ರವರಿ 6, 2023ರಂದು ಶಸ್ತ್ರ ಸಜ್ಜಿತ ದರೋಡೆಕೋರರಿಂದ ಮೈಸೂರು ದಂಪತಿ ಬೆದರಿಸಿ 3.81 ಲಕ್ಷ ಸುಲಿಗೆ.
- ಮಾರ್ಚ್ 13, 2023ರಂದು ಇಬ್ಬರು ದಂಪತಿಗಳ ಪರಿವಾರಕ್ಕೆ ಚಾಕು ತೋರಿಸಿ 2.58 ಲಕ್ಷ ದರೋಡೆ.
- ಜೂನ್ 30, 2023 ರಂದು ಪೊಲೀಸರ ಸೋಗಿನಲ್ಲಿ ಕೊಡಗು ನಿವಾಸಿಯಿಂದ 3.5 ಲಕ್ಷ ದರೋಡೆ.
- ಜು.7ರಂದು ಚನ್ನಪಟ್ಟಣ–ರಾಮನಗರ ನಡುವೆ ಕಾರು ತಡೆದು 1.50 ಲಕ್ಷ ಚಿನ್ನಾಭರಣ, ನಗದು ಕಳವು.

ಸುಲಿಗೆ, ದರೋಡೆ ತಡೆಗೆ ವಿಶೇಷ ತಂಡ ರಚನೆ: ಡಿಐಜಿಪಿ



ಮೈಸೂರು, ಜು.13(ಬಿಎಲ್‌ಯು)–ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುಲಿಗೆ, ದರೋಡೆ ಸೇರಿದಂತೆ ಇತರೆ ಅಪರಾಧ ಕೃತ್ಯಗಳ ತಡೆಗೆ ವಿಶೇಷ ತಂಡ ರಚನೆ ಮಾಡಲಾಗುವುದು ಎಂದು ದಕ್ಷಿಣ ವಲಯ ಡಿಐಜಿಪಿ ಡಾ.ಬೋರಲಿಂಗಯ್ಯ ತಿಳಿಸಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ತೂಬಿನಕೆರೆ ಬಳಿ ನಿನ್ನೆ ನಡೆದ ದರೋಡೆ ಯತ್ನದ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಎಕ್ಸ್‌ಪ್ರೆಸ್ ವೇನಲ್ಲಿ ಅಪರಾಧ ಕೃತ್ಯ ಜರುಗದಂತೆ ಈ ವಿಶೇಷ ತಂಡ ಕಾರ್ಯ ▶ 6ನೇ ಪುಟಕ್ಕೆ

ಪಕ್ಷಾತೀತವಾಗಿ ಸದಸ್ಯರ ವಿರೋಧದ ಹಿನ್ನೆಲೆ

ಗೃಹ ಬಳಕೆ ನೀರಿನ ಶುಲ್ಕ ಹೆಚ್ಚಳ ಪ್ರಸ್ತಾಪ ಕೈಬಿಟ್ಟ ಪಾಲಿಕೆ





ಮೈಸೂರು, ಜು.13(ಎಸ್‌ಬಿಡಿ)– ಗೃಹ ಬಳಕೆ ನೀರಿನ ಶುಲ್ಕ ಹೆಚ್ಚಿಸುವ ಪ್ರಸ್ತಾವನೆಯನ್ನು ಮೈಸೂರು ಮಹಾನಗರ ಪಾಲಿಕೆ ಕೈಬಿಟ್ಟಿದೆ.

ನಗರ ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಕೌನ್ಸಿಲ್ ಸಭೆಯಲ್ಲಿ ನೀರಿನ ಶುಲ್ಕ ಪರಿಷ್ಕರಣೆಗೆ ಸದಸ್ಯರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರಸ್ತಾವನೆ ಕೈಬಿಡಲು ನಿರ್ಣಯ ಕೈಗೊಳ್ಳಲಾಯಿತು.

ಮೂರು ವರ್ಷಗಳ ಹಿಂದೆ ಗೃಹೇತರ ಬಳಕೆ ನೀರಿನ ಶುಲ್ಕ ಹೆಚ್ಚಿಸಲಾಯಿತಾದರೂ ನಿರೀಕ್ಷಿತ ಆದಾಯ ಸಂಗ್ರಹ ಸಾಧ್ಯವಾಗಿಲ್ಲ. ವಿದ್ಯುಚ್ಛಕ್ತಿ, ರಾಸಾಯನಿಕ ಸಾಮಗ್ರಿ ವೆಚ್ಚ, ಸಿಬ್ಬಂದಿ ವೇತನ, ಮೇಳಾಪುರ ಯೋಜನೆ ಸಾಲದ ಮರುಪಾವತಿ ಬಾಬ್ತು ಪರಿಗಣಿಸಿ, ಕನಿಷ್ಠ ದರ 200 (ಈಗಿರುವುದು 125) ಸೇರಿದಂತೆ ನೀರಿನ ಬಳಕೆ ಪ್ರಮಾಣದ ಆಧಾರದಡಿ ವಿವಿಧ ಹಂತಗಳಲ್ಲಿ ಶುಲ್ಕ ಹೆಚ್ಚಿಸುವ ಸಂಬಂಧ ಕಾರ್ಯಸೂಚಿಯನ್ನು ಕೌನ್ಸಿಲ್‌ನಲ್ಲಿ ಮಂಡಿಸಲಾಯಿತು. ಈ ಬಗ್ಗೆ ಮಾತನಾಡಿದ ಕಾಂಗ್ರೆಸ್ ಸದಸ್ಯ ಅಯೂಬ್ ಖಾನ್, ಮೇಯರ್ ಅವರು ಜನರ ಮೇಲೆ ನೀರಿನ ▶ 6ನೇ ಪುಟಕ್ಕೆ

15 ದಿನದಲ್ಲಿ ಸಭೆ; ಅಧಿಕಾರಿಗಳು ಸಿದ್ಧವಿರಿ

ಮೈಸೂರು ನಗರಕ್ಕೆ ನಿತ್ಯ 325 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ. ಆದರೆ ಈಗಿನ ಜನಸಂಖ್ಯೆಗೆ 240 ಎಂಎಲ್‌ಡಿ ಸಾಕಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹಾಗಾದರೆ ಉಳಿದ ನೀರು ಹೇಗೆ ಬಳಕೆಯಾಗುತ್ತಿದೆ. ಯಾವ ಮೂಲದಿಂದ ಎಷ್ಟು ಪ್ರಮಾಣದ ನೀರು ಪೂರೈಕೆಯಾಗುತ್ತಿದೆ. ಎಷ್ಟು ಬಲ್ಕ್ ಮೀಟರ್ ಅಳವಡಿಸಲಾಗಿದೆ. ವಾರ್ಡ್‌ವಾರು ಬೇಡಿಕೆ ಹಾಗೂ ಪೂರೈಸಲಾಗುತ್ತಿರುವ ನೀರಿನ ಪ್ರಮಾಣ, ಎಷ್ಟು ಸಂಪರ್ಕಗಳಿಗೆ ಮೀಟರ್ ಅಳವಡಿಸಲಾಗಿದೆ ಎನ್ನುವ ಸ್ಪಷ್ಟ ಮಾಹಿತಿಯೇ ಇಲ್ಲ. ನೀರು ಸರಬರಾಜು ವ್ಯವಸ್ಥೆಯಲ್ಲಿ ಉತ್ತರದಾಯಿತ್ವ(ಅಕೌಂಟೆಬಿಲಿಟಿ)ವೇ ಇಲ್ಲವಾಗಿದೆ. ಹಾಗಾಗಿ ಈ ಸಂಬಂಧ ಇನ್ನು 15 ದಿನದೊಳಗೆ ವಿಶೇಷ ಸಭೆ ನಡೆಸಿ, ಸಮಗ್ರ ಚರ್ಚೆ ನಡೆಸಲಾಗುವುದು. ಅಧಿಕಾರಿಗಳು ಎಲ್ಲಾ ಮಾಹಿತಿಯೊಂದಿಗೆ ಹಾಜರಾಗಬೇಕು ಎಂದು ಮೇಯರ್ ಶಿವಕುಮಾರ್ ಸೂಚನೆ ನೀಡಿದರು.

ಫುಟ್‌ಪಾತ್ ತೆರವಿಗೆ ಮುಹೂರ್ತ ನಿಗದಿ

ಜು.17 ಮೇಯರ್ ನಗರ ಪ್ರದಕ್ಷಿಣೆ

ಮೈಸೂರು, ಜು.13(ಎಸ್‌ಬಿಡಿ)– ಮೈಸೂರಿನಲ್ಲಿ ಫುಟ್‌ಪಾತ್ ಅತಿಕ್ರಮಣ ತೆರವು ಕಾರ್ಯಾಚರಣೆಗೆ ಮೇಯರ್ ಶಿವಕುಮಾರ್ ಮುಹೂರ್ತ ನಿಗದಿಪಡಿಸಿದ್ದಾರೆ.

ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಫುಟ್‌ಪಾತ್ ಹಾಗೂ ರಸ್ತೆಯಲ್ಲೇ ವ್ಯಾಪಾರ ವಹಿವಾಟು ನಿಯಂತ್ರಿಸಲು ಯಾವುದೇ ಕ್ರಮ ವಹಿಸದಿರುವ ಬಗ್ಗೆ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಜು.17ರಂದು ನಗರ ಪ್ರದಕ್ಷಿಣೆ ನಡೆಸುವುದಾಗಿ ಮೇಯರ್ ನಿರ್ಣಯ ಪ್ರಕಟಿಸಿದರು.

ಫುಟ್‌ಪಾತ್ ಅತಿಕ್ರಮಣದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ದೂರುಗಳು ಕೇಳಿಬರುತ್ತಿವೆ. ಉಪ ಮೇಯರ್, ಆಯುಕ್ತರು, ಎಲ್ಲಾ ಪಕ್ಷಗಳ ನಾಯಕರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳೊಂದಿಗೆ ಜು.17ರಂದು ಸಂಜೆ 4 ಗಂಟೆಗೆ ನಗರ ಪ್ರದಕ್ಷಿಣೆ ನಡೆಸಲಾಗುವುದು. ಆಸಕ್ತ ಸದಸ್ಯರೂ ಜೊತೆಗೂಡಬಹುದು. ಸ್ಥಳ ಪರಿಶೀಲನೆ ನಡೆಸಿ, ಅನಧಿಕೃತ ಬೀದಿಬದಿ ವ್ಯಾಪಾರಿಗಳು ಹಾಗೂ ▶ 8ನೇ ಪುಟಕ್ಕೆ

ಪೇ ಅಂಡ್ ಪಾರ್ಕ್‌ಗೆ ಟೆಂಡರ್

"ಮೈಸೂರಿನ ಪ್ರಮುಖ ವಾಣಿಜ್ಯ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸುವ ನಿರ್ಣಯವನ್ನು ಕೈಬಿಟ್ಟಿಲ್ಲ, ಈ ಸಂಬಂಧ ರೀಡ್ ಅಂಡ್ ರೆಕಾರ್ಡ್ ಆದ ಬಳಿಕ ಟೆಂಡರ್ ಕರೆಯಲಾಗುವುದು ಎಂದು ಮೇಯರ್ ಶಿವಕುಮಾರ್ ಹೇಳಿದರು. ಸದಸ್ಯ ಕೆ.ವಿ.ಶ್ರೀಧರ್ ಪ್ರಶ್ನೆಗೆ ಸ್ಪಷ್ಟೀಕರಣ ನೀಡಿದರು. ಡಿ.ದೇವರಾಜ ಅರಸು ರಸ್ತೆ, ಅಶೋಕ ರಸ್ತೆ, ಟೌನ್‌ಹಾಲ್ ಆವರಣ, ಸಯ್ಯಾಜಿರಾವ್ ರಸ್ತೆ, ವಿನೋಬಾ ರಸ್ತೆ, ಹರ್ಷ ರಸ್ತೆ ಹಾಗೂ ಧನ್ವಂತ್ರಿ ರಸ್ತೆಯಲ್ಲಿ ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸಲು ಜೂ.9ರ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಂಡು, ಡಿ.ದೇವರಾಜ ಅರಸು ರಸ್ತೆ ಅಶೋಕ ರಸ್ತೆ ಹಾಗೂ ಟೌನ್‌ಹಾಲ್ ಆವರಣದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲು ತೀರ್ಮಾನಿಸಲಾಗಿತ್ತು. ಪೇ ಅಂಡ್ ಪಾರ್ಕ್ ವ್ಯವಸ್ಥೆ ಜಾರಿಗೊಳಿಸದಂತೆ ಆಕ್ಷೇಪವೂ ವ್ಯಕ್ತವಾಗಿತ್ತು.

ಗುಂಪು ಘರ್ಷಣೆಯಲ್ಲಿ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕನ ಹತ್ಯೆಯಾಗಿದೆ

ನಾಯಕನ ಮನೆಗೆ ಭೇಟಿ ನೀಡಿ, ಪರಿಹಾರ ವಿತರಿಸಿದ ನಂತರ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ದುರಂತ ಸಂಬಂಧ ಪ್ರತಿಕ್ರಿಯೆ

- ಪ್ರಕರಣಕ್ಕೆ ಧರ್ಮ, ರಾಜಕೀಯ ಲೇಪನ ಸರಿಯಲ್ಲ
- ನನ್ನ ಪುತ್ರನಿಗೂ ಈ ಘಟನಾವಳಿಗೂ ಯಾವುದೇ ಸಂಬಂಧವಿಲ್ಲ

ತಿ.ನರಸೀಪುರ ಜು.13–ಗುಂಪು ಗಲಭೆಯಿಂದಾಗಿ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕನ ಹತ್ಯೆಯಾಗಿದೆ. ಅಮಾಯಕ ಯುವಕನ ಹತ್ಯೆ ಪ್ರಕರಣ ಧರ್ಮ ಅಥವಾ ರಾಜಕೀಯ ವ್ಯಾಪ್ತಿಗೆ ನಿಲುಕದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಪಟ್ಟಣದ ಶ್ರೀರಾಂಪುರ ಬೀದಿಯಲ್ಲಿರುವ ವೇಣುಗೋಪಾಲ ನಾಯಕ ನಿವಾಸಕ್ಕೆ ಗುರುವಾರ ಜಿಲ್ಲಾಡಳಿತದೊಂದಿಗೆ ಭೇಟಿ ನೀಡಿ, ಸರ್ಕಾರದ ಪರಿಹಾರದ ಹಣ 4,12,500 ರೂ.ಗಳ ಚೆಕ್ ಅನ್ನು ಆತನ ಪತ್ನಿ ಪೂರ್ಣಿಮಾ ಅವರಿಗೆ ವಿತರಿಸಿ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಅಮಾಯಕ ಯುವಕನ ಕೊಲೆಯ ಪ್ರಕರಣದಲ್ಲಿ ಧರ್ಮ ರಾಜಕಾರಣ ಮಾಡುವುದು ಬೇಡ. ಹತ್ಯೆಗೆ ಧರ್ಮದ ಬಣ್ಣ ಹಚ್ಚೋರು ಸಾರ್ವಜನಿಕ ಜೀವನಕ್ಕೆ ಯೋಗ್ಯರಲ್ಲ ಎಂದು ಬಿಜೆಪಿ ನಾಯಕರ ವರ್ತನೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಯಾರ ಅಡ್ಡಿ ಆತಂಕವೂ ಇಲ್ಲದೆ ಸಂಭ್ರಮ ಸಡಗರದಿಂದ ಶಾಂತಿಯುತವಾಗಿ ನಡೆದ ಹನುಮ ಜಯಂತಿ ಉತ್ಸವದ ವೇಳೆ ದೇವಸ್ಥಾನದ ಆವರಣಕ್ಕೆ ಬೈಕನ್ನು ಬಿಡುವುದು ಮತ್ತು ಪೋಸ್ಟರ್ ಹಾಕುವ ವಿಚಾರವಾಗಿ ಬ್ರಿಗೇಡ್ ಗುಂಪುಗಳ ನಡುವೆ ಜಗಳ ಆಗಿದೆ. ಬಾಳಿ ಬದುಕಬೇಕಿದ್ದ ಯುವಕನ ಬರ್ಬರ ಹತ್ಯೆಯಾಗಿರುವುದನ್ನು ತೀವ್ರವಾಗಿ ಖಂಡಿಸುತ್ತೇವೆ. ಇಂತಹ ಸಂದರ್ಭದಲ್ಲಿ ಇಲ್ಲದಿರುವ ವಿಷಯವನ್ನು ಹುಡುಕಿ ರಾಜಕೀಯ ಪಿತೂರಿ ಮಾಡುವುದು ಖಂಡನೀಯ ಎಂದರು. ಬಿಜೆಪಿ ಸಂವಿಧಾನಿಕವಾದ ▶ 8ನೇ ಪುಟಕ್ಕೆ



ಸಾವಲ್ಲಿಯೂ ಧರ್ಮ ರಾಜಕಾರಣಕ್ಕೆ ಆಸ್ಪದ ಬೇಡಮ್ಮ...


"ಬದುಕಲ್ಲಿ ಮಡದಿ, ಮಗಳೊಂದಿಗೆ ಬಾಳಿ ಬದುಕಬೇಕಿದ್ದ ವೇಣುಗೋಪಾಲ ಹತ್ಯೆಯಿಂದ ನನಗೂ ವೈಯಕ್ತಿಕವಾಗಿ ತುಂಬಾ ನೋವಾಗಿದೆ. ಹಾಗಾಗಿ ಪತಿಯ ಸಾವಲ್ಲಿಯೂ ಧರ್ಮ ರಾಜಕಾರಣಕ್ಕೆ ಆಸ್ಪದ ಮಾಡಿಕೊಡಬೇಡಮ್ಮ. ನೋಡಮ್ಮ, ಮುಂದಿನ ಜೀವನದ ಹಿತದೃಷ್ಟಿಯಿಂದ ಅನುಕಂಪದ ಆಧಾರದ, ವಿದ್ಯಾರ್ಹತೆ ಆಧಾರದ ಮೇಲೆ ನಿನಗೊಂದು ಉದ್ಯೋಗ ನೀಡುತ್ತೇವೆ. ಕೊಲೆಗಡುಕರಿಗೆ ಕಾನೂನಿನನ್ವಯ ಕಠಿಣ ಶಿಕ್ಷೆಯಾಗಲಿದೆ. ಸರ್ಕಾರ ನಿಮಗೆ ನ್ಯಾಯವನ್ನು ಒದಗಿಸಲು ಬದ್ಧವಾಗಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ



ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಅಯೋಧ್ಯೆಯ ರಾಮಲಲ್ಲಾ ದೇವರ ದರ್ಶನ ಮಾಡುವುದರೊಂದಿಗೆ ಅಲ್ಲಿ ನಿರ್ಮಾಣವಾಗುತ್ತಿರುವ ಶ್ರೀರಾಮಮಂದಿರದ ಕಾಮಗಾರಿ ವೀಕ್ಷಿಸಿದರು. ಉದ್ದಿಮೆದಾರ ಸೌರವ್ ಶರ್ಮಾ, ಎಸ್.ಪಿ.ಮಂಜುನಾಥ್, ವಿಹೆಚ್‌ಪಿ ಕೇಂದ್ರ ಸಮಿತಿ ಸಹ ಕಾರ್ಯದರ್ಶಿ ಗೋಪಾಲ್‌ಜೀ, ಇತರ ಶ್ರೀಗಳು, ಜೆಎಸ್‌ಎಸ್ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ನಾಳೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶನೈಶ್ಚರ ಮಹಾಯಾಗ



ಮೈಸೂರು: ಮೈಸೂರಿನ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜು.15ರಂದು ಶನಿತ್ರಯೋದಶಿ ಪ್ರಯುಕ್ತ ಶನೈಶ್ಚರ ಮಹಾಯಾಗವು ನಡೆಯಲಿದೆ. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ದಿವ್ಯ ಆಶೀರ್ವಾದಗಳೊಂದಿಗೆ ಶನೈಶ್ಚರ ಮಹಾಯಾಗವು ನಡೆಯಲಿದೆ.

ಕಾರ್ಯಕ್ರಮದ ಪ್ರಯುಕ್ತ ಶನೈಶ್ಚರ ವ್ರತ, ಶನಿಸ್ವಾಮಿಗೆ ತೈಲಾಭಿಷೇಕ, ಶನಿಗ್ರಹ ಜಪ, ಆಂಜನೇಯ ಜಪ, ಶನಿಗ್ರಹ ಹೋಮ, ಶನಿಗ್ರಹ ದಾನಗಳು ಹಾಗೂ ಸುಂದರ ಕಾಂಡ ಪಾರಾಯಣಗಳು ನಡೆಯಲಿವೆ.

ಕಾರ್ಯಕ್ರಮದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ (ಆನ್‌ಲೈನ್ ಮೂಲಕ) ಭಾಗವಹಿಸುವ ಭಕ್ತರೆಲ್ಲರಿಗೂ ಪ್ರಸಾದವನ್ನು ತಲುಪಿಸಲಾಗುವುದು. ಪ್ರತ್ಯಕ್ಷವಾಗಿ ಭಾಗವಹಿಸುವವರು ಸಂಕಲ್ಪ ಮಾಡಿಸಿಕೊಂಡು ತೈಲಾಭಿಷೇಕವನ್ನು ಮಾಡಬಹುದು. ಮಕರ, ಕುಂಭ, ಮೀನ ರಾಶಿಗಳವರಿಗೆ ಏಳರಾಟದ ಶನಿ, ಕರ್ಕಾಟಕ ರಾಶಿಯವರಿಗೆ ಅಷ್ಟಮಶನಿ, ವೃಶ್ಚಿಕ ರಾಶಿಯವರಿಗೆ ಅರ್ಧಾಷ್ಟಮಶನಿ ನಡೆಯುತ್ತಿದೆ. ಆಯಾ ರಾಶಿಗಳವರು ಈ ಅವಕಾಶವನ್ನು ಸದ್ವಿನಿಯೋಗಪಡಿಸಿಕೊಂಡು ಶನಿದೋಷವನ್ನು ಪರಿಹರಿಸಿಕೊಳ್ಳಬಹುದಾಗಿದೆ. ಜಾತಕದಲ್ಲಿ ಶನಿಯು ಬಲಹೀನವಾಗಿ ಇರುವವರೂ ಸಹ ಇದರಲ್ಲಿ ಭಾಗವಹಿಸಬಹುದು. ಕೀಲು ನೋವುಗಳಿಂದ ಬಳಲುತ್ತಿರುವವರು, ಸೋಮಾರಿತನದಿಂದ ನಿಗದಿತ ಸಮಯದಲ್ಲಿ ಕೆಲಸಗಳನ್ನು ಮಾಡಲಾಗದೆ ಆಲಸ್ಯ ಮಾಡುವವರು ಸಹ ಈ ಪರಿಹಾರ ಪೂಜಾದಿಗಳಲ್ಲಿ ಭಾಗವಹಿಸಬಹುದಾಗಿದೆ.

ಮೈಸೂರು ನಗರಪಾಲಿಕೆಯಿಂದ ಕಲಾವಿದರಿಗೆ ಆರ್ಥಿಕ ನೆರವು

254 ಕಲಾವಿದರಿಗೆ ತಲಾ 10 ಸಾವಿರ ಧನ ಸಹಾಯ



ಮೈಸೂರು,ಜು.13(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿರುವ ಕಲಾವಿದರಿಗೆ ಆರ್ಥಿಕ ನೆರವು ನೀಡುವ ಯೋಜನೆಯನ್ನು ಮೈಸೂರು ಮಹಾನಗರ ಪಾಲಿಕೆ ಪುನರಾರಂಭಿಸಿದ್ದು, ಗುರುವಾರ 254 ಕಲಾವಿದರಿಗೆ ತಲಾ 10 ಸಾವಿರ ರೂ. ಆರ್ಥಿಕ ನೆರವು ನೀಡಲಾಯಿತು.

ಮೈಸೂರಿನ ಪುರಭವನದಲ್ಲಿ ಪಾಲಿಕೆ ವತಿಯಿಂದ ಆಯೋಜಿಸಿದ್ದ ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಫಲಾನುಭವಿ ಕಲಾವಿದರಿಗೆ ಮೇಯರ್ ಶಿವಕುಮಾರ್ ಆರ್ಥಿಕ ನೆರವು ವಿತರಿಸಿದರು.

ಬಳಿಕ ಮೇಯರ್ ಶಿವಕುಮಾರ್ ಮಾತನಾಡಿ, ಮೈಸೂರಲ್ಲಿ ಕಲಾವಿದರಿಗೆ ಉತ್ತೇಜನ ನೀಡಲು ಮಹಾನಗರ ಪಾಲಿಕೆ ವತಿಯಿಂದ ಆರ್ಥಿಕ ನೆರವು ನೀಡುವ ಕಾರ್ಯಕ್ರಮವನ್ನು ಈ ಹಿಂದೆಯೇ ಜಾರಿಗೊಳಿಸಲಾಗಿತ್ತು. ಆದರೆ, ಕೆಲ ವರ್ಷಗಳಿಂದ ಇದು ಸ್ಥಗಿತಗೊಂಡಿತ್ತು. ಇದೀಗ ಈ ವರ್ಷದಿಂದ ಮತ್ತೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಈ ಬಾರಿ 144 ಹೊಸ ಕಲಾವಿದರು ಹಾಗೂ 110 ಹಿರಿಯ ಕಲಾವಿದರನ್ನು ಗುರುತಿಸಿ ತಲಾ 10 ಸಾವಿರ ರೂ. ಪ್ರೋತ್ಸಾಹಧನ ವಿತರಿಸಲಾಗುತ್ತಿದೆ. ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿರುವ ಕಲಾವಿದರನ್ನು ಗುರುತಿಸಿ ನೆರವು ನೀಡಲಾಗುತ್ತಿದೆ. ಹೊಸದಾಗಿ 144 ಕಲಾವಿದರಿಗೆ ನೇರವಾಗಿ ಚೆಕ್ ವಿತರಿಸಿದರೆ, 110 ಮಂದಿ ಹಿರಿಯ ಕಲಾವಿದರಿಗೆ ಆರ್‌ಟಿಜಿಎಸ್ ಮೂಲಕ ನೇರವಾಗಿ ಅವರ ಖಾತೆಗೆ ಜಮಾ ಮಾಡಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಹಲವು ಕಾರಣಗಳಿಂದ ಕಲಾವಿದರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಇದರಿಂದ ಕಲಾವಿದರ ಸಂಖ್ಯೆ ಕ್ಷೀಣಿಸುತ್ತಿದೆ. ಆ ಕಾರಣದಿಂದ ಪಾಲಿಕೆ ವತಿಯಿಂದ ಆರ್ಥಿಕ ನೆರವು ನೀಡಿ, ಕಲಾವಿದರಿಗೆ ಮಾನ್ಯತೆ ನೀಡಲಾಗುತ್ತಿದೆ. ಇದಕ್ಕಾಗಿ ಪಾಲಿಕೆಯಲ್ಲಿ 25 ಲಕ್ಷ ರೂ. ಮೀಸಲಿಡಲಾಗಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಕಲಾವಿದರಾದ ಎಂ.ಎನ್.ಯದುಗಿರಿ, ಇಂದ್ರಾಣಿ, ವಸಂತಕೃಷ್ಣ, ಸತ್ಯವತಿ, ರಾಮಪ್ಪ, ಗುರುಸ್ವಾಮಿ, ವೀರಭದ್ರ ಸ್ವಾಮಿ ಅವರಿಗೆ ಆರ್ಥಿಕ ನೆರವಿನ ಚೆಕ್ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜಿ.ರೂಪಾ, ಉಪ ಮೇಯರ್ ಡಾ.ರೂಪಾ ಯೋಗೇಶ್, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷ ನಾಗರಾಜು, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷ ವಿ.ರಮೇಶ್, ಪಟ್ಟಣ ಸುಧಾರಣಾ ಸ್ಥಾಯಿ ಸಮಿತಿ ಅಧ್ಯಕ್ಷೆ ಹೆಚ್.ಎಂ.ಶಾಂತಕುಮಾರಿ, ಪಾಲಿಕೆ ಸದಸ್ಯರಾದ ಮ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.


ಜು.16ರಂದು ನಟರ ಆಯ್ಕೆ ಸಂದರ್ಶನ

ಮೈಸೂರು,ಜು.13(ಎಂಕೆ)– ರಂಗಭೂಮಿ ಪ್ರತಿಷ್ಠಾನ ವತಿಯಿಂದ ಒಂದು ವರ್ಷದ ಪೂರ್ಣಾವಧಿ ನಾಟಕ ಪ್ರಯೋಗ ಯೋಜನೆಗೆ ನಟರ ಆಯ್ಕೆ ಸಂದರ್ಶನಕ್ಕೆ ಆಸಕ್ತರನ್ನು ಆಹ್ವಾನಿಸಲಾಗಿದೆ. ಮೈಸೂರಿನ ಮಾಧವ ಕೃಪಾದಲ್ಲಿ ಜು.16ರಂದು ಬೆಳಗ್ಗೆ 11 ರಿಂದ ಸಂದರ್ಶನ ನಡೆಯಲಿದೆ. ಸಂದರ್ಶನದಲ್ಲಿ ಭಾಗವಹಿಸಲು ಕನಿಷ್ಠ ವಿದ್ಯಾರ್ಹತೆ 10ನೇ ತರಗತಿ ಪಾಸಾಗಿರಬೇಕು. 18ರಿಂದ 35 ವರ್ಷದೊಳಗಿನ ವಯೋಮಿತಿ ಹಾಗೂ ರಂಗಭೂಮಿ ಶಿಕ್ಷಣ ಪಡೆದವರಿಗೆ ಮೊದಲ ಆದ್ಯತೆ. ಅಭಿನಯದ ಅನುಭವವಿರುವವರನ್ನು ಪರಿಗಣಿಸಲಾಗುವುದು. ಆಯ್ಕೆಯಾದ ಕಲಾವಿದರಿಗೆ ಮಾಸಿಕ 15 ಸಾವಿರ ರೂ.ಗೌರವ ಸಂಭಾವನೆ ನೀಡಲಿದ್ದು, ಆಧಾರ್ ಕಾರ್ಡ್, ಅಂಕಪಟ್ಟಿ, ರಂಗಭೂಮಿ ದಾಖಲಾತಿಗಳೊಂದಿಗೆ ಮುಕ್ತ ಸಂದರ್ಶನಕ್ಕೆ ಹಾಜರಾಗುವಂತೆ ಪ್ರತಿಷ್ಠಾನದ ಸಂಚಾಲಕ ಅಡ್ಡಂಡ ಸಿ.ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ರಕ್ಷಣಾ ಅಧಿಕಾರಿ ಮಹದೇವಪ್ಪ ನಿಧನ

ಮೈಸೂರು, ಜು.13– ಮೈಸೂರಿನ ಕುವೆಂಪುನಗರ ನಿವಾಸಿ ಹಾಗೂ ನಿವೃತ್ತ ರಕ್ಷಣಾ ಅಧಿಕಾರಿ ಮಹದೇವಪ್ಪ ಬುಧವಾರ ರಾತ್ರಿ ನಿಧನರಾದರು.

ಮಹದೇವಪ್ಪ ಅವರು ನಿವೃತ್ತರಾಗುವ ಮುನ್ನ ಮಹಾರಾಷ್ಟ್ರದ ಪಿಂಪ್ರಿಯಲ್ಲಿರುವ ಮದ್ದುಗುಂಡು (Ammunition) ಫ್ಯಾಕ್ಟರಿಯಲ್ಲಿ ಸೇವೆ ಸಲ್ಲಿಸಿದ್ದರು. ಮೂಲತಃ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆಯವರಾದ ಮಹದೇವಪ್ಪನವರು, ಪತ್ನಿ ದಾಕ್ಷಾಯಿಣಿ, ಪುತ್ರ, ಅಳಿಯ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ.



ಬರಹಗಾರರು, ದಾನಿಗಳು, ಸಲಹೆಗಾರರು ಮತ್ತು ಸಮಾಜ ಸೇವಕರಾದ ಮಹದೇವಪ್ಪನವರು, ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪ್ರಶಸ್ತಿ, ಬುದ್ಧ ಭಾರತ್ ರತ್ನ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಅವರ ಇಚ್ಛೆಯಂತೆ ದೇಹವನ್ನು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆದಾಯ ತೆರಿಗೆ ಪಾವತಿದಾರರ ಅನುಕೂಲಕ್ಕಾಗಿ ಬೋಗಾದಿಯ ಐಸಿಎಐನಲ್ಲಿ ಟ್ಯಾಕ್ಸ್ ಕ್ಲಿನಿಕ್

ರಾಷ್ಟ್ರ ನಿರ್ಮಾಣದಲ್ಲಿ ಯುವ ತೆರಿಗೆದಾರರ ಪಾತ್ರ ಪ್ರಮುಖ: ಕೆ.ದೇವರತ್ನಕುಮಾರ್

ಮೈಸೂರು, ಜು. 13 (ಆರ್‌ಕೆ)– ರಾಷ್ಟ್ರ ನಿರ್ಮಾಣದಲ್ಲಿ ಯುವ ತೆರಿಗೆದಾರರ ಪಾತ್ರ ಪ್ರಮುಖವಾದುದು ಎಂದು ಆದಾಯ ತೆರಿಗೆ ಪ್ರಧಾನ ಆಯುಕ್ತ (ಅಸೆಸ್‌ಮೆಂಟ್ ಯೂನಿಟ್–1, ಮೈಸೂರು) ಕೆ. ದೇವರತ್ನ ಕುಮಾರ್ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಮೈಸೂರು ಶಾಖೆಯಿಂದ ಮೈಸೂರಿನ ಬೋಗಾದಿಯ ಬ್ಯಾಂಕ್ ನೌಕರರ ಕಾಲೋನಿಯಲ್ಲಿರುವ ಐಸಿಎಐ ಭವನದಲ್ಲಿ ಇಂದಿನಿಂದ ಆರಂಭಿಸಿರುವ ಎರಡು ದಿನಗಳ ಟ್ಯಾಕ್ಸ್ ಕ್ಲಿನಿಕ್ ಆದಾಯ ತೆರಿಗೆ ಪಾವತಿಸುವವರಿಗೆ ಅಗತ್ಯ ಮಾಹಿತಿ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಆದಾಯ ತೆರಿಗೆ ಪಾವತಿಸುವುದು ನಾಗರಿಕ ಸಮಾಜದ ಜವಾಬ್ದಾರಿಯಾಗಿದೆ. ಸರ್ಕಾರ ರೂಪಿಸಿರುವ ನಿಯಮಾನುಸಾರ ತೆರಿಗೆ ವ್ಯಾಪ್ತಿಗೆ ಬರುವವರು ಆದಾಯ ತೆರಿಗೆ ಪಾವತಿಸುವುದು, ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದು ಎಂದು ತಿಳಿ ಹೇಳಿದರು.





ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಮೈಸೂರು ಶಾಖೆಯಿಂದ ಮೈಸೂರಿನ ಬೋಗಾದಿಯ ಬ್ಯಾಂಕ್ ನೌಕರರ ಕಾಲೋನಿಯಲ್ಲಿರುವ ಐಸಿಎಐ ಭವನದಲ್ಲಿ ಇಂದಿನಿಂದ ಆರಂಭಿಸಿರುವ ಎರಡು ದಿನಗಳ ಟ್ಯಾಕ್ಸ್ ಕ್ಲಿನಿಕ್ ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಪ್ರಧಾನ ಆಯುಕ್ತ ಕೆ.ದೇವರತ್ನಕುಮಾರ್ ಮಾತನಾಡಿದರು.

ಇತ್ತೀಚೆಗೆ ಯುವಕರು ತೆರಿಗೆ ಪಾವತಿಸಲು ಮುಂದೆ ಬರುತ್ತಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷ ತೆರಿಗೆ ಪಾವತಿಸುವವರ ಸಂಖ್ಯೆ ಹೆಚ್ಚಾಗಿದ್ದು, ಶೇ.16.61 ರಷ್ಟು ಆದಾಯ ತೆರಿಗೆ ಸಂದಾಯವಾದಂತಾಗಿದೆ ಎಂದ ಅವರು, 25ರಿಂದ 35 ವರ್ಷದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ತೆರಿಗೆ ಪಾವತಿಸಲು ಮುಂದಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಇ–ವೆರಿಫಿಕೇಷನ್ ಮಾಡುವಾಗ 1ರಿಂದ 6ರವರೆಗೆ ಯಾವ ಸಂಖ್ಯೆಯ ನಮೂನೆಯಲ್ಲಿ ಮಾಹಿತಿ ಭರ್ತಿ ಮಾಡಿ ಐಟಿ ರಿಟರ್ನ್ಸ್ ಫೈಲ್ ಮಾಡಬೇಕು. ಆಧಾರ್ ಲಿಂಕ್ ಮಾಡುವುದು, ಹೊಸ ಮತ್ತು ಹಳೇ ತೆರಿಗೆ ನಿಯಮಗಳಲ್ಲಿ ಯಾವುದನ್ನು ಅನುಸರಿಸಬೇಕು. ಟ್ಯಾಕ್ಸ್ ಬೆನಿಫಿಟ್‌ಗಳೇನು ಎಂಬುದರ ಬಗ್ಗೆ ಕಾರ್ಯಕ್ರಮದಲ್ಲಿ ತೆರಿಗೆ ಪಾವತಿದಾರರಿಗೆ ಮಾಹಿತಿ ನೀಡಲಾಗುತ್ತಿದೆ. ಆದಾಯ ತೆರಿಗೆ ಜಂಟಿ ಆಯುಕ್ತೆ ಕಲ್ಪಲತಾ ರಾಜನ್, ವಲಯ–2ರ ಜಂಟಿ ಆಯುಕ್ತೆ ಸಂಗೀತಾ ಅನಂತ, ಜಂಟಿ ಆಯುಕ್ತೆ (ಅಪೀಲುಗಳು) ಸತೀಶ ಮೆರಿನ್, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಮೈಸೂರು ಶಾಖೆ ಅಧ್ಯಕ್ಷ ವಿ.ರಘು ನಂದನರಾವ್, ಕಾರ್ಯದರ್ಶಿ ಉತ್ತಮ್ ಪಡಿವಾಳ್ ಟ್ಯಾಕ್ಸ್ ಕ್ಲಿನಿಕ್ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ತೆರಿಗೆ ತಜ್ಞರಾದ ಟಿ.ಎಸ್.ಸತ್ಯನಾರಾಯಣ, ಎಂ.ಜಿ.ಕುಮಾರ್, ತರುಣ್ ಕೊಠಾರಿ ಟ್ಯಾಕ್ಸ್ ಕ್ಲಿನಿಕ್‌ನಲ್ಲಿ ತೆರಿಗೆದಾರರ ಕುಂದುಕೊರತೆ ಆಲಿಸಿ ಆದಾಯ ತೆರಿಗೆ ಪಾವತಿಸಲು ಎದುರಾಗುವ ಸಮಸ್ಯೆಗಳಿಗೆ ಪರಿಹಾರೋಪಾಯದ ಬಗ್ಗೆ ಮಾಹಿತಿ ನೀಡುವರು. ಇಂದು ಮತ್ತು ನಾಳೆ (ಜು. 14) ಬೆಳಗ್ಗೆ 11ರಿಂದ ಸಂಜೆ 6ರವರೆಗೆ ಟ್ಯಾಕ್ಸ್ ಕ್ಲಿನಿಕ್‌ನಲ್ಲಿ ಅಗತ್ಯ ಮಾಹಿತಿ, ಅರಿವು–ನೆರವು ನೀಡಲಾಗುವುದು.

ಕುಮಾರಸ್ವಾಮಿ-ಚಲುವರಾಯಸ್ವಾಮಿ ನಡುವೆ ವಾಕ್ಸಮರ

ಲಂಚದ ವಿಚಾರವಾಗಿ ಸಾಚಾತನ ಸಾಬೀತಿಗೆ ಪೈಪೋಟಿ

ಬೆಂಗಳೂರು, ಜು.13–ಕೆಲ ವರ್ಷಗಳ ಹಿಂದೆ ಅತ್ಯಂತ ಆಪ್ತರಾಗಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಇದೀಗ ಹಾವು–ಮುಂಗುಸಿಯಂತಾಗಿದ್ದಾರೆ.

ಬಜೆಟ್ ಅಧಿವೇಶನ ಆರಂಭವಾದಾಗಿನಿಂದ ಕುಮಾರಸ್ವಾಮಿಯವರು ಚಲುವರಾಯಸ್ವಾಮಿ ವಿರುದ್ಧ ಆರೋಪಗಳ ಸುರಿಮಳೆಗೈದು ಒಂದು ಹಂತದಲ್ಲಿ ರಾಜೀನಾಮೆಗೆ ಆಗ್ರಹಿಸಿದರೆ, ಮತ್ತೊಂದೆಡೆ ಚಲುವರಾಯಸ್ವಾಮಿ ಕೂಡ ತಾವೇನೂ ಕಡಿಮೆ ಇಲ್ಲ ಎಂಬಂತೆ ಕುಮಾರಸ್ವಾಮಿ ವಿರುದ್ಧ ಮುಗಿ ಬಿದ್ದಿದ್ದಾರೆ.

ವಿಧಾನಸಭೆಯಲ್ಲಿ ಕುಮಾರಸ್ವಾಮಿಯವರು ರೇಟ್ ಕಾರ್ಡ್ ಎಂದು ಭಿತ್ತಿಪತ್ರವೊಂದನ್ನು ಪ್ರದರ್ಶಿಸಿ ಚಲುವರಾಯಸ್ವಾಮಿ ಅವರ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ವರ್ಗಾವಣೆಗಾಗಿ ಲಂಚ ಪಡೆಯಲಾಗುತ್ತಿದೆ ಎಂದು ಆರೋಪಿಸಿದ್ದರು. ನಂತರ ಅದನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಇಂದು ವಿಧಾನಸಭೆಯಲ್ಲಿ ಚಲುವರಾಯಸ್ವಾಮಿ ಮಾತನಾಡುತ್ತಾ, ಮೊದಲಿಗೆ ಕುಮಾರಸ್ವಾಮಿ ನನ್ನನ್ನು ಸ್ನೇಹಿತರು ಎಂದಿರುವುದರಿಂದ ನಾನೂ ಕೂಡ ಅವರನ್ನು ಹಳೇ ಸ್ನೇಹಿತ ಎಂದೇ ಕರೆಯಬೇಕಾಗುತ್ತದೆ ಎಂದು ಮಾತು ಆರಂಭಿಸಿದರು. ಕುಮಾರಸ್ವಾಮಿ ರೇಟ್ ಕಾರ್ಡ್ ಎಂದು ತೋರಿಸಿದ ಪತ್ರವನ್ನು ವಿಧಾನಸಭಾಧ್ಯಕ್ಷರಿಗೂ ಕೊಟ್ಟಿಲ್ಲ, ಮುಖ್ಯಮಂತ್ರಿಗಳಿಗೂ ಕೊಟ್ಟಿಲ್ಲ. ಆದರೆ ಮಾಧ್ಯಮದ ಮುಂದೆ ಹೋಗಿ ನನ್ನ ತೇಜೋವಧೆಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ನಮ್ಮ ಸರ್ಕಾರ ಬಂದು ಒಂದು ತಿಂಗಳು ಇಪ್ಪತ್ತು ದಿನ ಆಗಿದೆ ಅಷ್ಟೇ. 5 ಗ್ಯಾರಂಟಿಗಳ ಜಾರಿ, ಮಳೆ ಇಲ್ಲದಿರುವುದರಿಂದ ರೈತರ ಸಮಸ್ಯೆ ಬಗೆಹರಿಸುವುದು ಹೇಗೆ, ಮುಂತಾದವುಗಳ ಬಗ್ಗೆ ಗಮನಹರಿಸುತ್ತಿದ್ದೇವೆ. ನಾನಾಗಲೀ, ನಮ್ಮ ಇತರ ಸಚಿವರಾಗಲೀ ಯಾವುದೇ ರೇಟ್ ಕಾರ್ಡ್ ಮಾಡಿಲ್ಲ. 2018ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಕಾರ್ಯದರ್ಶಿಗೆ 10 ಕೋಟಿ, ಮುಖ್ಯ ಇಂಜಿನಿಯರ್‌ಗೆ 10 ಕೋಟಿ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ 1 ಕೋಟಿ, ಹೆದ್ದಾರಿ ಪ್ರಾಧಿಕಾರದ ಕಾರ್ಯಪಾಲಕ ಇಂಜಿನಿಯರ್‌ಗೆ 1.25 ಕೋಟಿ ಎಂದು ಪತ್ರಿಕೆಯೊಂದರಲ್ಲಿ ರೇಟ್ ಕಾರ್ಡ್ ಪ್ರಕಟವಾಗಿತ್ತು ಎಂದು ಪತ್ರಿಕೆಯನ್ನು ಪ್ರದರ್ಶಿಸಿದ ಚಲುವರಾಯಸ್ವಾಮಿ, ಈಗ ಕುಮಾರಸ್ವಾಮಿ ತೋರಿಸಿದ ರೇಟ್ ಕಾರ್ಡ್ ಅವರ ಕಾಲದ್ದೇ ಇರಬೇಕು ಎಂದು ಚುಚ್ಚಿದರು. ಡಾ.ವಿಜಯಕುಮಾರ್ ಎಂಬ ಹಿರಿಯ ಐಎಎಸ್ ಅಧಿಕಾರಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೇ ಆತ್ಮಹತ್ಯೆ ಮಾಡಿಕೊಂಡರು. ಅವರನ್ನು ಕೆಪಿಎಸ್‌ಸಿ ಕಾರ್ಯದರ್ಶಿಯನ್ನಾಗಿ ಮಾಡುತ್ತೇನೆ ಎಂದು ಕುಮಾರಸ್ವಾಮಿ ಹೇಳಿದ್ದರು. ನಂತರ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೇನಿತ್ತೋ? ಎಂದು ಪ್ರಶ್ನಿಸಿದರಲ್ಲದೇ, ಹಿರಿಯ ಕೆಎಎಸ್ ಅಧಿಕಾರಿಯಾಗಿದ್ದವರು, ಈಗ ನಿವೃತ್ತಿಯಾಗಿದ್ದಾರೆ. ಅವರೂ ಮಂಡ್ಯದವರೇ. ಮೈಸೂರು ಮುಡಾದಲ್ಲಿ ಕಾರ್ಯದರ್ಶಿಯಾಗಿದ್ದರು. ಅವರನ್ನು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ 7 ಬಾರಿ ವರ್ಗಾವಣೆ ಮಾಡಿದ್ದರು ಎಂದು ನನಗೆ ಆ ಅಧಿಕಾರಿಯೇ ತಿಳಿಸಿದ್ದಾರೆ ಎಂದು ವಿಧಾನಸಭೆಯಲ್ಲಿ ಹೇಳಿದರು. ಚಲುವರಾಯಸ್ವಾಮಿ ನಂತರ ಮಾಧ್ಯಮದೊಂದಿಗೆ ಮಾತನಾಡುತ್ತಾ, ನಾನು ಒಕ್ಕಲಿಗನೆಂಬ ಕಾರಣಕ್ಕಾಗಿ ಕುಮಾರಸ್ವಾಮಿ ತೇಜೋವಧೆ ಮಾಡುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗ 150 ಕೋಟಿ ರೂ. ಹಗರಣ ಕೇಳಿಬಂದಿತ್ತು. ಆಗ ಸೂಟ್‌ಕೇಸ್ ಅನ್ನೂ ತೋರಿಸಿದ್ದರು, ಚರ್ಚೆ ಮಾಡುವುದನ್ನೂ ತೋರಿಸಿದ್ದರು. ಆದರೆ ಅದರ ಬಗ್ಗೆ ಕುಮಾರಸ್ವಾಮಿ ಚರ್ಚೆಯೂ ಮಾಡಿಲ್ಲ, ರಾಜೀನಾಮೆಯನ್ನೂ ಕೊಟ್ಟಿಲ್ಲ. ಯಾವುದೋ ಒಂದು ರೇಟ್ ಕಾರ್ಡ್ ತಯಾರಿಸಿಕೊಂಡು ಬಂದು ತೇಜೋವಧೆ ಮಾಡುತ್ತಿದ್ದಾರೆ ಎಂದರು.



ಚಲುವರಾಯಸ್ವಾಮಿ ಅವರಿಗೆ ಹೇಳಿಕೆ ಬಗ್ಗೆ ಮಾಧ್ಯಮದೊಂದಿಗೆ ಮಾತನಾಡಿದ ಕುಮಾರಸ್ವಾಮಿ, ನನ್ನ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿರುವುದಕ್ಕೆ ದಾಖಲೆ ಇದ್ದರೆ ತನಿಖೆ ನಡೆಸಿ ಶಿಕ್ಷೆ ಕೊಡಲಿ ಎಂದು ಸವಾಲು ಹಾಕಿದರು. ಒಕ್ಕಲಿಗನೆಂಬ ಕಾರಣಕ್ಕೆ ತುಳಿಯುತ್ತಿದ್ದೇನೆ ಅನ್ನುತ್ತಿದ್ದಾರಲ್ಲಾ, ಭ್ರಷ್ಟಾಚಾರಕ್ಕೆ ಜಾತಿ ವ್ಯವಸ್ಥೆ ಎಲ್ಲಿಂದ ಬರುತ್ತೆ? ಬಿಜೆಪಿ ಸರ್ಕಾರ ವಿದ್ದಾಗ ಭ್ರಷ್ಟಾಚಾರದ ಧ್ವನಿ ಎತ್ತಿದಾಗ ಒಂದು ಬಣ್ಣ ಕೊಟ್ಟಿದ್ದರು. ಈಗ ಕಾಂಗ್ರೆಸ್ ಸರ್ಕಾರದಲ್ಲಿ ಇನ್ನೊಂದು ಬಣ್ಣ ಕೊಡುತ್ತಿದ್ದಾರೆ. 150 ಕೋಟಿ ಆರೋಪ ನನ್ನ ಮೇಲೆ ಬಂದಾಗ ಗೃಹ ಕಚೇರಿ ಕೃಷ್ಣಾದಲ್ಲಿ ನಮ್ಮ ಶಾಸಕರನ್ನೆಲ್ಲಾ ಸೇರಿಸಿ ಆ ವಿಷಯವನ್ನು ಮುಂದಿಟ್ಟು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದೆ. ಆದರೆ ಯಾರೂ ಒಪ್ಪಲಿಲ್ಲ. ಈ ರೇಟ್ ಕಾರ್ಡ್ ನಾನು ಮಾಡಿರುವುದಲ್ಲ, ಇವರು ದುಡ್ಡು ತೆಗೆದುಕೊಳ್ಳುವುದನ್ನೆಲ್ಲಾ ದಾಖಲೆಯಾಗಿ ಕೊಡಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಕಾರು ತಡೆದು ಚಿನ್ನಾಭರಣ, ನಗದು ಸುಲಿಗೆ

ಚನ್ನಪಟ್ಟಣ,ಜು.13–ಪೊಲೀಸರ ಸೋಗಿನಲ್ಲಿ ಕಾರನ್ನು ತಡೆದ ದುಷ್ಕರ್ಮಿಗಳು ಚಾಲಕನ ಮೇಲೆ ಹಲ್ಲೆ ನಡೆಸಿ ಚಿನ್ನಾಭರಣ ಹಾಗೂ ನಗದು ಲೂಟಿ ಮಾಡಿದ ಘಟನೆ ಚನ್ನಪಟ್ಟಣ ಸಮೀಪದ ಕನ್ನಮಂಗಲ ಬ್ರಿಡ್ಜ್ ಬಳಿ ನಡೆದಿರುವುದು ತಡವಾಗಿ ವರದಿಯಾಗಿದೆ. ಬೆಂಗಳೂರಿನಲ್ಲಿ ಸಂಬಂಧಿಕರ ಅಂತ್ಯಕ್ರಿಯೆಗಾಗಿ ಜು.7ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಮೈಸೂರಿನಿಂದ ತೆರಳುತ್ತಿದ್ದ ಧನುಷ್ ಎಂಬುವರ ಕಾರನ್ನು 2 ಬೈಕ್‌ಗಳಲ್ಲಿ ಬಂದ ಖದೀಮರು ಅಡ್ಡಗಟ್ಟಿ ತಾವು ಪೊಲೀಸರೆಂದು ಹೇಳಿಕೊಂಡು ಕಾರು ತಪಾಸಣೆ ಮಾಡಬೇಕು ಎಂದಿದ್ದಾರೆ. ಈ ವೇಳೆ ಧನುಷ್ ಕಾರು ನಿಲ್ಲಿಸಿದಾಗ ಅವರ ಮುಖದ ಮೇಲೆ ಕೈನಿಂದ ಗುದ್ದಿ ಚಾಕು ತೋರಿಸಿ ಅವರ ಬಳಿ ಇದ್ದ 28 ಗ್ರಾಂ ತೂಕದ ಚಿನ್ನಾಭರಣ ಹಾಗೂ ನಗದು ದೋಚಿದ್ದಾರೆ. ಈ ಸಂಬಂಧ ರಾಮನಗರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ಸರ್ವೀಸ್ ರಸ್ತೆಗೆ ಹಾರಿದ ಕಂಟೇನರ್

ಚನ್ನಪಟ್ಟಣ, ಜು.13–ಎಕ್ಸ್‌ಪ್ರೆಸ್‌ವೇನಲ್ಲಿ ಅತೀ ವೇಗವಾಗಿ ಚಲಿಸುತ್ತಿದ್ದ ಕಂಟೇನರ್ ಲಾರಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕ ಹಾರಿ ಒಂದು ಪಥದಿಂದ ಮತ್ತೊಂದು ಪಥಕ್ಕೆ ನುಗ್ಗಿದ್ದಲ್ಲದೇ ತಂತಿ ಬೇಲಿಯನ್ನು ಭೇದಿಸಿಕೊಂಡು ಸರ್ವೀಸ್ ರಸ್ತೆಗೆ ಇಳಿದು ನಿಂತಿದೆ. ಮೈಸೂರು ಕಡೆಯಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಕಂಟೇನರ್ ರಸ್ತೆ ವಿಭಜಕವನ್ನು ದಾಟಿ ಬೆಂಗಳೂರಿನಿಂದ ಮೈಸೂರಿಗೆ ಬರುವ ಪಥಕ್ಕೆ ನುಗ್ಗಿತಾದರೂ, ಆ ಸಂದರ್ಭದಲ್ಲಿ ಯಾವುದೇ ವಾಹನಗಳು ಬಾರದ ಕಾರಣ ಅನಾಹುತ ತಪ್ಪಿದಂತಾಗಿದೆ. ಅಷ್ಟಕ್ಕೇ ನಿಲ್ಲದ ಕಂಟೇನರ್ ಎಕ್ಸ್‌ಪ್ರೆಸ್ ವೇ ಮತ್ತು ಸರ್ವೀಸ್ ರಸ್ತೆ ನಡುವೆ ಅಳವಡಿಸಿದ್ದ ತಂತಿ ಬೇಲಿಯನ್ನೂ ಕೂಡ ಮುರಿದು ನುಗ್ಗಿದೆ.



ಮೈಸೂರಿನ ನೈಪುಣ್ಯ ಶಾಲೆ ಆವರಣದಲ್ಲಿ ವಿದ್ಯಾರ್ಥಿಪರಿಷತ್ತಿನ ಸದಸ್ಯರ ಪದಗ್ರಹಣ ಸಮಾರಂಭ ನಡೆಯಿತು. ಸಾಹಿತಿ ಹಾಗೂ ನಿವೃತ್ತ ಪ್ರಾಧ್ಯಾಪಕ ಕಾಳೇಗೌಡ ನಾಗವಾರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಕೌಟಿಲ್ಯ, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶೋಭಿತ ಎಸ್.ಆರಾಧ್ಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಗೆ ಪದಕ ಧಾರಣೆ ಮಾಡಿ, ಪ್ರಮಾಣವಚನ ಬೋಧಿಸಿದರು. ಸಮಾರಂಭದಲ್ಲಿ ವಿದ್ಯಾರ್ಥಿಗಳು ಏರೋಬಿಕ್ಸ್, ಡಂಬಲ್ಸ್, ಲೇಜಿಮ್ಸ್, ಹೋಪ್ಸ್‌ಗಳನ್ನು ಪ್ರದರ್ಶಿಸಿದರು.

ಇಂದು ವಿಶೇಷ ಪೂಜೆ, ಪ್ರಸಾದ

ಮೈಸೂರು, ಜು.13–ಆಷಾಢ ಮಾಸದ ಕೊನೆಯ ಶುಕ್ರವಾರದ ಪ್ರಯುಕ್ತ ಜು.14 ರಂದು ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಚಾಮುಂಡಿಬೆಟ್ಟದ ಪಾದದ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಪ್ರಸಾದ (ಅನ್ನದಾಸೋಹ) ವ್ಯವಸ್ಥೆ ಮಾಡಲಾಗಿದೆ. ಭಕ್ತಾದಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಮಾಡಿ, ಪ್ರಸಾದ ಸ್ವೀಕರಿಸಿ ಭಗವಂತನ ಕೃಪೆಗೆ ಪಾತ್ರರಾಗಲು ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.7.2023 ಶುಕ್ರವಾರ, ಮಳೆ ನಕ್ಷತ್ರ: ಭರಣಿ 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರ ವಿಕಾರಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ
- **ಮಹಾರಾಜ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್:** ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯ ಎಸ್.ಬಿ.ಎಂ. ಮಂಜು, ಆದಿತ್ಯ ಆಸ್ಪತ್ರೆ ವ್ಯವಸ್ಥಾಪಕ ಟ್ರಸ್ಟಿ ಡಾ.ಚಂದ್ರಶೇಖರ್, ಪತ್ರಕರ್ತ ಸತೀಶ್‌ಕುಮಾರ್, ಅಧ್ಯಕ್ಷತೆ: ಅಸೋಸಿಯೇಷನ್ ಅಧ್ಯಕ್ಷ ಶ್ರೀಧರರಾಜ್ ಅರಸ್, ಸ್ಥಳ: ಮಹಾರಾಜ ಪ್ರೌಢಶಾಲೆ ಆವರಣ, ಬೆಳಗ್ಗೆ 10ಕ್ಕೆ.
- **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಇಂಡಸ್ಟ್ರಿಯಲ್ ಅಂಡ್ ಪ್ರೊಡಕ್ಷನ್ ಇಂಜಿನಿಯರಿಂಗ್ ವಿಭಾಗ :** KSCST ಪ್ರಾಯೋಜಿತ ಯೋಜನೆಗಾಗಿ ಕಾಲೇಜು ವಾಹನದೊಂದಿಗೆ ಜೈವಿಕ ಡೀಸೆಲ್ ಪ್ರದರ್ಶನ, ಗೌರವ ಅತಿಥಿಗಳು: ಎನ್‌ಐಇ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ.ವೈ.ಎಸ್.ವರದರಾಜನ್, ಡಾ.ಕೆ.ಎಂ.ಸುಬ್ಬಯ್ಯ, ಡಾ.ಎಂ.ಮೋಹನ್‌ರಾಮ್, ಅಧ್ಯಕ್ಷತೆ: ಎನ್‌ಐಇ ಪ್ರಭಾರ ಪ್ರಾಂಶುಪಾಲ ಡಾ.ಕೆ.ಸಿ.ಮಂಜುನಾಥ್, ಉಪಸ್ಥಿತರು: ಸಹಾಯಕ ಪ್ರಾಧ್ಯಾಪಕ ಪ್ರೊ.ಎಸ್. ಶ್ಯಾಮಸುಂದರ್, ಸ್ಥಳ: ಗೇಟ್ 1, ಶೆಲ್ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 11.30ಕ್ಕೆ.
- **ನಟನ ರಂಗಶಾಲೆ :** ನೀನಾಸಂ ನಿರ್ಮಾತೃ ಕೆ.ವಿ. ಸುಬ್ಬಣ್ಣ ಅವರ ನೆನಪಿನ ನಾಟಕೋತ್ಸವ, ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ 'ಕೃಷ್ಣೇಗೌಡರ ಆನೆ' ನಾಟಕ ಪ್ರದರ್ಶನ, ನಿರ್ದೇಶನ : ಚಲನಚಿತ್ರ ನಟ ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.
- **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಮಾಸದ ಅಲಂಕಾರಗಳ ಪೂಜೆ, ನವನೀತ (ಬೆಣ್ಣೆ) ಅಲಂಕಾರ, ಸ್ಥಳ: ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ.
- **ಲಯನ್ಸ್ ಕ್ಲಬ್ ಆಫ್ ಮೈಸೂರು ಮಿಲೇನಿಯಂ:** ನೂತನ ಅಧ್ಯಕ್ಷ ಲಯನ್ ಎ.ಸಿ.ರವಿ ಅವರ ತಂಡದ ಪದಗ್ರಹಣ ಸಮಾರಂಭ, ಸೇವಾ ದೀಕ್ಷೆ ಬೋಧಿಸುವವರು : ಲಯನ್ ಡಾ. ನಾಗರಾಜ ವಿ. ಬೈರಿ, ಹೊಸ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸುವವರು : ಮಾಜಿ ಜಿಲ್ಲಾ ರಾಜ್ಯಪಾಲ ಲಯನ್ ಎಂ.ವಿ. ದೇವಿಪ್ರಸಾದ್, ಅಧ್ಯಕ್ಷತೆ : ಮಿಲೇನಿಯಂ ಅಧ್ಯಕ್ಷ ಲಯನ್ ಡಿ.ಎನ್. ಚಂದ್ರಶೇಖರ್, ಅತಿಥಿಗಳು : ಪ್ರಾಂತೀಯ ಅಧ್ಯಕ್ಷ ಲಯನ್ ಹೇಮಂತಕುಮಾರ್ ಬನ್ಸಾಲಿ, ವಲಯ ಅಧ್ಯಕ್ಷ ಲಯನ್ ಸಿ.ಎಂ. ಲವ, ಸ್ಥಳ: ಒಂಟಿಕೊಪ್ಪಲ್ ಕ್ಲಬ್. ವಿ.ವಿ. ಪುರಂ ಪೊಲೀಸ್ ಸ್ಟೇಷನ್ ಪಕ್ಕ, ಸಂಜೆ 6.30ಕ್ಕೆ.
- **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶ್ರೀ ರಾಜರಾಜೇಶ್ವರಿ ದೇವತಾ ಆಷಾಢ ಮಾಸ ಪೂಜಾ ಮಹೋತ್ಸವ, ಬೆಳಗ್ಗೆ 7.30 ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6 ರಿಂದ ಶ್ರೀಮತಿ ವಿಜಯಲಕ್ಷ್ಮಿ ಸುದರ್ಶನ್ ಮತ್ತು ವೃಂದ, ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿ, ರಾಜರಾಜೇಶ್ವರಿನಗರ ಇವರಿಂದ ಭಕ್ತಿಗೀತೆಗಳು, ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ.
- **ರಾಗ ಮಾಲಿಕಾ ಸ್ನೇಹ ಬಳಗ :** ಚಿತ್ರಗೀತೆಗಳ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತಾ ಸಭಾ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದ ಸಂಸ್ಕೃತಿ–ಟಿ.ಎಸ್. ಗೋಪಾಲ್, 7.15 ಬೆಂಗಳೂರಿನ ಹೊಸಮಟ್ ಆಸ್ಪತ್ರೆಯ ಚೀಫ್ ಆಪರೇಟಿಂಗ್ ಆಫೀಸರ್ ಡಾ.ಆರ್.ಸಂದೀಪ್ ಅವರೊಂದಿಗೆ ಸಂದರ್ಶನ–ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಮೈಸೂರು ಎಸ್.ರಾಜಲಕ್ಷ್ಮಿ –ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಡಿ. ಪುರುಷೋತ್ತಮ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಕೆ.ಪಿ. ರೇವತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 4.00 ಮಹಿಳಾರಂಗ–ಸಖೀ ಸಂವಾದ, 4.30 ವೃತ್ತಿ ಮಾರ್ಗದರ್ಶನ–ಆರ್ಕಿಟೆಕ್ಚರ್, ಪ್ಲಾನಿಂಗ್ ಮತ್ತು ಡಿಸೈನ್ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ. ಸಪ್ನಾ ಶಿವಕುಮಾರ್ ಅವರೊಂದಿಗೆ ಮಾತುಕತೆ, 6.50ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುವವರು ಹೊಂಬೇಗೌಡ ಹಾಗೂ ಎಸ್. ಸೌಮ್ಯ, ಪ್ರಸ್ತುತಿ– ಎನ್. ಕೇಶವಮೂರ್ತಿ, 8.00ಕನ್ನಡ ಭಾರತಿ–ಸಾಹಿತ್ಯ ಸಂಗೀತಗಳ ಸುಗಮ ಸಂಯೋಜನೆ–ರವೀಂದ್ರ ಮುರೂರು ಅವರೊಡನೆ ಸಂಗೀತ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30ಗಾನ ಲಹರಿ–ಪ್ರಸ್ತುತಿ ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.00 ವಾದ್ಯವೃಂದ–ನಿಲಯದ ಕಲಾವಿದರಿಂದ, 10.30 ಸವಿನೆನಪು

ಇಂದು ಕಡೇ ಆಷಾಢ ಶುಕ್ರವಾರ
ಚಾಮುಂಡೇಶ್ವರಿಗೆ ವಿಶೇಷ ಪೂಜೆ



ಮೈಸೂರು,ಜು.13(ಆರ್‌ಕೆ)–ಆಷಾಢ ಮಾಸದ ಕಡೇ ಶುಕ್ರವಾರದ ಅಂಗವಾಗಿ ನಾಳೆ(ಜು.14) ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿವೆ. ಕಡೇ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆಯಲು ಸಹಸ್ರಾರು ಭಕ್ತಾದಿಗಳು ಚಾಮುಂಡಿಬೆಟ್ಟಕ್ಕೆ ತೆರಳಲಿದ್ದು, ಜಿಲ್ಲಾಡಳಿತದ ವತಿಯಿಂದ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ. ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೆಲಿಪ್ಯಾಡ್‌ನಿಂದ ಭಕ್ತರನ್ನು ಕರೆದೊಯ್ಯಲು ಉಚಿತ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡಲಾಗಿದ್ದು, ಸಾರ್ವಜನಿಕರ ವಾಹನಗಳು ಚಾಮುಂಡಿಬೆಟ್ಟ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ದೇವಸ್ಥಾನವನ್ನು ತಳಿರು–ತೋರಣ, ನಾನಾ ಪುಷ್ಪಗಳಿಂದ ಅಲಂಕರಿಸಲಾಗಿದ್ದು, ದೇವರ ದರ್ಶನ ಪಡೆಯಲು ಭಕ್ತರಿಗೆ ಎಲ್ಲಾ ವ್ಯವಸ್ಥೆ ಕಲ್ಪಿಸಲಾಗಿದೆ. ಕಡೇ ಆಷಾಢ ಶುಕ್ರವಾರವಾದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿ ಇನ್ನಿಲ್ಲದ ಭಾರೀ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದ ಅಧಿಕಾರಿಗಳು ಇಂದು ಬಂದೋಬಸ್ತ್ ಸ್ಕೀಂ ಬಗ್ಗೆ ಸಮಾಲೋಚನೆ ನಡೆಸಿ, ಪೂರ್ವ ಸಿದ್ಧತೆ ಮಾಡಿಕೊಂಡಿದ್ದಾರೆ.

ಮಣಿಪುರದಲ್ಲಿ ಕ್ರೈಸ್ತರ ಮೇಲೆ ದಾಳಿ ಖಂಡಿಸಿ ಮೈಸೂರಲ್ಲಿ
ಎಸ್‌ಡಿಪಿಐ, ಕ್ರೈಸ್ತ ಪ್ರಗತಿಪರರ ಪ್ರತಿಭಟನೆ

ಮೈಸೂರು, ಜು.13(ಎಂಕೆ)– ಮಣಿಪುರ ರಾಜ್ಯದಲ್ಲಿ ಕ್ರೈಸ್ತರ ಮೇಲೆ ನಡೆಯುತ್ತಿರುವ ದಾಳಿ ಖಂಡಿಸಿ ಎಸ್‌ಡಿಪಿಐ ಹಾಗೂ ಕ್ರೈಸ್ತ ಪ್ರಗತಿಪರ ಸಂಸ್ಥೆ ವತಿಯಿಂದ ಗುರುವಾರ ಕ್ಯಾಂಡಲ್ ಲೈಟ್ ಬೆಳಗಿಸಿ, ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಂತ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಜಮಾವಣೆ ಗೊಂಡ ಪ್ರತಿಭಟನಾಕಾರರು ಕಳೆದ 3 ತಿಂಗಳಿಂದ ಮಣಿಪುರದಲ್ಲಿ ಜನಾಂಗೀಯ ಹತ್ಯೆ, ಗಲಭೆ ನಡೆಯುತ್ತಿದೆ. ಚರ್ಚ್, ಮನೆಗಳ ಮೇಲೆ ದಾಳಿ ನಡೆಸಿ ನೂರಾರು ಕ್ರೈಸ್ತರನ್ನು ಹತ್ಯೆ ಮಾಡಲಾಗಿದೆ. ಇಷ್ಟೆಲ್ಲಾ ದುರ್ಘಟನೆಗಳು ನಡೆಯುತ್ತಿದ್ದರೂ ಶಾಂತಿ–ಸುವ್ಯವಸ್ಥೆ ಸ್ಥಾಪಿಸುವಲ್ಲಿ ಮಣಿಪುರ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ವಿಫಲವಾಗಿವೆ ಎಂದು ಧಿಕ್ಕಾರ ಕೂಗಿದರು.

ಮಣಿಪುರ ಗಲಭೆಯಲ್ಲಿ ಈಗಾಗಲೇ 142 ಮಂದಿ ಕೊಲ್ಲಲ್ಪಟ್ಟಿದ್ದು, 50 ಸಾವಿರಕ್ಕೂ ಹೆಚ್ಚು ಜನರು ಸಂತ್ರಸ್ತರ ಶಿಬಿರದಲ್ಲಿ ಇದ್ದಾರೆಂದು ಸ್ವತಃ ಮಣಿಪುರ ಸರ್ಕಾರವೇ ಸುಪ್ರೀಂಕೋರ್ಟ್‌ಗೆ ವರದಿ ಸಲ್ಲಿಸಿದೆ. ಒಟ್ಟು 5995 ಎಫ್‌ಐಆರ್ ದಾಖಲಾಗಿದ್ದು, 5053 ಬೆಂಕಿ ಹಚ್ಚಿದ ಪ್ರಕರಣ ದಾಖಲಾಗಿದೆ. ರಾಜ್ಯ ಒಂದರಲ್ಲಿ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಜನಾಂಗೀಯ ಹತ್ಯೆ, ಗಲಭೆ ನಡೆಯುತ್ತಿದ್ದರೂ ಮೋದಿ ಅವರು ಮಾತ್ರ ಮಣಿಪುರಕ್ಕೆ ಭೇಟಿ ನೀಡಿದೆ, ವಿದೇಶಗಳಿಗೆ ನಿರಂತರ ಪ್ರವಾಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹತ್ಯೆ, ಗಲಭೆ ತಕ್ಷಣ ತಡೆಯಬೇಕು.



ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ದೇಶದೆಲ್ಲೆಡೆ ರಾಜಕೀಯ ಲಾಭಕ್ಕಾಗಿ ದ್ವೇಷದ ಬೆಂಕಿ ಹಚ್ಚಲಾಗುತ್ತಿದೆ. ಮಣಿಪುರದಲ್ಲಿ ಮೇ3 ರಿಂದ ಆರಂಭವಾದ ಕೋಮುಗಲಭೆ ಇಂದಿಗೂ ನಿಂತಿಲ್ಲ. ಕಳೆದ 3 ತಿಂಗಳಿಂದ ಸುಮಾರು 240 ಚರ್ಚ್‌ಗಳನ್ನು ಹಾಗೂ 17 ದೇವಸ್ಥಾನಗಳನ್ನು ನಾಶ ಮಾಡಲಾಗಿದೆ. ಸಾವಿರಾರು ಮಂದಿ ಬೀದಿಗೆ ಬಿದ್ದಿದ್ದಾರೆ. ಡಬಲ್ ಇಂಜಿನ್ ಸರ್ಕಾರ ಇದ್ದರೂ ಶಾಂತಿ ಕಾಪಾ ಡಲು ಸಾಧ್ಯವಾಗಿಲ್ಲ. ವಿದೇಶಗಳನ್ನು ಸುತ್ತಾಡಲು ಪ್ರಧಾನಿಗಳಿಗೆ ಟೈಂ ಇದೆ. ಆದರೆ ಮಣಿಪುರಕ್ಕೆ ಭೇಟಿ ಮಾಡಲು ಟೈಂ ಇಲ್ಲ ಹಾಗೂ ಅವರ ಮನ್ ಕೀ ಬಾತ್‌ನಲ್ಲೂ ಮಾತನಾಡಿಲ್ಲ ಎಂದು ಕಿಡಿಕಾರಿದರು.

ಮಣಿಪುರದಲ್ಲಿ ಶಾಂತಿ ನೆಲೆಸಲು ಒತ್ತಾಯಿಸಿ ದೇಶದಾದ್ಯಂತ ಎಸ್‌ಡಿಪಿಐ ಪ್ರತಿಭಟನೆ ನಡೆಸಲಿದ್ದು, ಈ ಮೂಲಕ ಮಣಿಪುರದಲ್ಲಿ ನೊಂದ ಜನರ ಪರವಾಗಿ ಹೋರಾಟ ಮಾಡಲಿದೆ. ಎಲ್ಲಾ ಧರ್ಮಗಳನ್ನು ಗೌರವಿಸಬೇಕಾದ ಜಾತ್ಯಾತೀತ ದೇಶದಲ್ಲಿ ಕೋಮುಗಲಭೆಗಳು ಹೆಚ್ಚಾಗುತ್ತಿವೆ. ರಾಷ್ಟ್ರಪತಿಗಳು ಮಣಿಪುರದಲ್ಲಾಗುತ್ತಿರುವ ಕೋಮುಗಲಭೆ ಕುರಿತು ಗಮನಹರಿಸಿ, ಅಲ್ಲಿನ ಸಂಸ್ತರನ್ನು ರಕ್ಷಣೆ ಮಾಡುವಂತೆ ಮನವಿ ಮಾಡಲಾಗುವುದು ಎಂದರು.

ಅಚ್ಛೇ ದಿನ್ ಎಲ್ಲಿ?: ಎಸ್‌ಡಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅಲ್ಫೋನ್ಸ್ ಫ್ರಾಂಕೋ ಮಾತನಾಡಿ, ಪ್ರಧಾನಿ ಮೋದಿಯವರು ಹೇಳಿದ್ದ ಅಚ್ಛೇ ದಿನ್ ಎಲ್ಲಿ ಎಂದು ಹುಡುಕಾಟ ನಡೆಸುವ ಪರಿಸ್ಥಿತಿಯಲ್ಲಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗಾಗಿ, ಜನರಿಗೋಸ್ಕರ ಇರಬೇಕಾಗಿರುವ ಕೇಂದ್ರ ಸರ್ಕಾರ ಬಿಜೆಪಿಗಾಗಿ, ಬಿಜೆಪಿಗೋಸ್ಕರ ಮಾತ್ರ ಇದೆ. ಬರೀ ಬೊಗಳೇ ಬಿಜೆಪಿಗೆ ಕರ್ನಾಟಕದ ಮತದಾರರು ಬುದ್ಧಿ ಕಲಿಸಿದ್ದು, ಲೋಕಸಭಾ ಚುನಾವಣೆಯಲ್ಲಿಯೂ ತಕ್ಕಪಾಠ ಕಲಿಸಲಿದ್ದಾರೆ ಎಂದು ಹೇಳಿದರು. ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ಖಾನ್, ಪ್ರಧಾನ ಕಾರ್ಯದರ್ಶಿ ಶಫಿ, ಉಪಾಧ್ಯಕ್ಷ ಎಸ್.ಸ್ವಾಮಿ, ಕ್ರೈಸ್ತ ಪ್ರಗತಿಪರ ಸಂಘದ ಅಧ್ಯಕ್ಷ ಜ್ಞಾನಪ್ರಕಾಶ್ ಮತ್ತಿತರರಿದ್ದರು.

ಕೂಡಲೇ ಬ್ಯಾನ್ ಮಾಡಿ...

“ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಕೋಮುಗಲಭೆ ಹೆಚ್ಚಾಗಿದೆ. ಅದೇ ರೀತಿ ಮಣಿಪುರದಲ್ಲಿ ಕಣ್ಣೀರಿನ ಕೋಡಿ ಹರಿಸುತ್ತಿದ್ದಾರೆ. ಮಣಿಪುರ ರಕ್ಷಣೆ ಮಾಡದ ಪ್ರಧಾನಿ ಮೋದಿಯವರಿಂದ ದೇಶದ ರಕ್ಷಣೆ ಸಾಧ್ಯವಿಲ್ಲ. ಆದ್ದರಿಂದ ಕೋಮುಗಲಭೆ ಸೃಷ್ಟಿಸುವ ಸಂಘಟನೆಗಳನ್ನು ಕೂಡಲೇ ಬ್ಯಾನ್ ಮಾಡಬೇಕು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಹೇಳಿದಂತೆ ನಡೆದುಕೊಳ್ಳಲಿ.

– ಸ್ಟಾನಿ ಪಿಂಟೋ, ಅಧ್ಯಕ್ಷ, ಕರ್ನಾಟಕ ಕ್ರಿಶ್ಚಿಯನ್ ಅಸೋಸಿಯೇಷನ್

ಕೆ.ಆರ್.ಆಸ್ಪತ್ರೆಯಲ್ಲಿ ಹೊರ ಗುತ್ತಿಗೆ ನೌಕರರ ಕುಂದು–ಕೊರತೆ ವಿಚಾರಣೆ



ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡಸ್ವಾಮಿ ಹಾಗೂ ಅಧಿಕಾರಿಗಳು ಗುರುವಾರ ಗುತ್ತಿಗೆ ಆಧಾರದ ಸ್ವಚ್ಛತೆ, ಭದ್ರತೆ, ನೌಕರರ ಕುಂದು–ಕೊರತೆ ಆಲಿಸಿದರು.

ಮೈಸೂರು, ಜು.13(ಆರ್‌ಕೆ)–ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಇಂದು ಸ್ವಚ್ಛತೆ, ಭದ್ರತೆ, ಅಟೆಂಡರ್‌ಗಳು ಹಾಗೂ ಸಫಾಯಿ ಕರ್ಮಚಾರಿ ಹೊರ ಗುತ್ತಿಗೆ ನೌಕರರ ಕುಂದು–ಕೊರತೆ ವಿಚಾರಣೆ ನಡೆಯಿತು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಆದೇಶದಂತೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ. ಕೆಆರ್.ದಾಕ್ಷಾಯಿಣಿ ನಿರ್ದೇಶನದಂತೆ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಬಿ.ಎನ್. ನಂಜುಂಡಸ್ವಾಮಿ ತಮ್ಮ ಕಚೇರಿಯಲ್ಲಿ ಹೊರ ಗುತ್ತಿಗೆ ನೌಕರರ ಕುಂದು–ಕೊರತೆಗಳ ವಿಚಾರಿಸಿ ಅವರ ಸಮಸ್ಯೆ, ದೂರುಗಳನ್ನು ದಾಖಲಿಸಿಕೊಂಡರು.

ಬ್ಯಾಂಕ್ ಖಾತೆಗಳಿಗೆ ಸಂಬಳ, ಇಎಸ್‌ಐ, ಪಿಎಫ್ ಹಣ ಜಮಾ ಆಗುತ್ತಿದೆಯೇ? ಸಮವಸ್ತ್ರ ಷೂಗಳು, ರಕ್ಷಣಾ ಸಾಮಗ್ರಿ ಸೇರಿದಂತೆ ಕೆಲಸಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಗುತ್ತಿಗೆದಾರರು ಪೂರೈಸುತ್ತಿದ್ದಾರೆಯೇ, ಕೆಲಸ ಮಾಡುವ ಸ್ಥಳದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ವಿಚಾರಣೆ ನಡೆಸಲಾಯಿತು.

ಶ್ರೀರಾಮ ಎಂಟರ್ ಪ್ರೈಸಸ್‌ನ 111 ಸ್ವಚ್ಛತಾ ಸಿಬ್ಬಂದಿ, ಶ್ರೀರಂಗನಾಥ ಎಂಟರ್ ಪ್ರೈಸಸ್‌ನ 60 ಭದ್ರತಾ ಸಿಬ್ಬಂದಿ, ಸುರಭಿ ಎಂಟರ್ ಪ್ರೈಸಸ್‌ನ 45 ಅಟೆಂಡರ್‌ಗಳು ಹಾಗೂ 34 ಸಫಾಯಿ ಕರ್ಮಚಾರಿ ಸಿಬ್ಬಂದಿ ವೈದ್ಯಕೀಯ ಅಧೀಕ್ಷಕರ ಬಳಿ ತಮ್ಮ ಕುಂದು–ಕೊರತೆಗಳನ್ನು ಹೇಳಿಕೊಂಡರು. ಈ ಸಂದರ್ಭದಲ್ಲಿ ಕೆ.ಆರ್. ಆಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್, ಆಡಳಿತಾಧಿಕಾರಿ ಚಂದ್ರಕಲಾ, ಕಚೇರಿ ಅಧೀಕ್ಷಕ ಶಶಿಕುಮಾರ್, ಕೇಸ್ ವರ್ಕರ್ ಶ್ರೀನಿವಾಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪರಮಬ್ರಹ್ಮ ಚಕ್ರಧರರ ಪ್ರವಚನ ಕೇಳಲು ಮನವಿ

ಮೈಸೂರು,ಜು.13(ಪಿಎಂ)– ಪರಮ ಬ್ರಹ್ಮ ಚಕ್ರಧರರ ಪ್ರವಚನ ಕೇಳುವ ಮೂಲಕ ಸತ್ಯಯುಗ ಮತ್ತು ಧರ್ಮ ಸಂಸ್ಥಾಪನೆಯ ಪುಣ್ಯ ಕಾರ್ಯ ಮಾಡಬೇಕೆಂದು ಸಾರ್ವಜನಿಕರಲ್ಲಿ ಕುವೆಂಪುನಗರದ ಪದ್ಮ ಸಂಜೀವಿನಿ ಕೋರಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಮ ಬ್ರಹ್ಮ ಚಕ್ರಧರರು ಸರ್ವ ಧರ್ಮ ಗುರುಗಳನ್ನು ಉದ್ದೇಶಿಸಿ 'ಸತ್ಯಯುಗ ಮತ್ತು ಧರ್ಮಸಂಸ್ಥಾಪನಾ' ಕಾರ್ಯದ ಬಗ್ಗೆ ಪ್ರವಚನ ನೀಡಿದ್ದಾರೆ. ಆಧ್ಯಾತ್ಮ ಕುರಿತು ಹಲವು ಪ್ರವಚನ ನೀಡಿದ್ದಾರೆ. ಯೂಟ್ಯೂಬ್‌ನಲ್ಲಿ ಪ್ರವಚನಗಳು ಲಭ್ಯವಿವೆ ಎಂದರು.

ಚೀಟಿ ಅವ್ಯವಹಾರ: ಹೆಡ್‌ಕಾನ್‌ಸ್ಟೇಬಲ್ ದಂಪತಿ ನೂರಾರು ಮಂದಿಗೆ ಪಂಗನಾಮ

ಮೈಸೂರು,ಜು.13–ಮೈಸೂರಿನ ಹೆಡ್ ಕಾನ್‌ಸ್ಟೇಬಲ್ ಮತ್ತು ಅವರ ಪತ್ನಿ ನೂರಾರು ಮಂದಿಯಿಂದ ಚೀಟಿ ಹಣ ಕಟ್ಟಿಸಿಕೊಂಡು ಕೋಟ್ಯಾಂತರ ರೂ. ವಂಚನೆ ಎಸಗಿದ್ದಾರೆ ಎಂದು ಮೈಸೂರಿನ ಕೆ.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಡ್ ಕಾನ್‌ಸ್ಟೇಬಲ್ ಸೋಮಶೇಖರ್ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿರುವ ಅವರ ಪತ್ನಿ ದಾಕ್ಷಾಯಿಣಿ ಆರೋಪಕ್ಕೆ ಗುರಿಯಾದವರಾಗಿದ್ದು, ಇವರಿಬ್ಬರೂ ಚೀಟಿ ನಡೆಸುತ್ತಿದ್ದು, 2019ರ ಫೆ.5ರಿಂದ ಈವರೆಗೆ ಪೊಲೀಸ್ ಸಿಬ್ಬಂದಿ, ಆಸ್ಪತ್ರೆ ಸಿಬ್ಬಂದಿ ಹಾಗೂ ಸಾರ್ವಜನಿಕರಿಂದ ಸುಮಾರು ಕೋಟ್ಯಾಂತರ ರೂ. ಚೀಟಿ ಕಟ್ಟಿಸಿಕೊಂಡು ಹಣ ಹಿಂತಿರುಗಿಸದೇ ವಂಚಿಸಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ.

ನೂರಾರು ಮಂದಿಯ ಚೀಟಿ ಹಣದಿಂದ ಸೋಮಶೇಖರ್ ಸ್ವಗ್ರಾಮವಾದ ಚನ್ನಪಟ್ಟಣದಲ್ಲಿ 70ರಿಂದ 80 ಎಕರೆ ಜಮೀನನ್ನು ಪತ್ನಿ ಹಾಗೂ ಅತ್ತೆ ಹೆಸರಿನಲ್ಲಿ ಖರೀದಿಸಿದ್ದಾರೆ. ಚೀಟಿ ಹಣ ಕೇಳಲು ಹೋದರೆ ಪತ್ನಿಯನ್ನು ಮುಂದೆ ಬಿಟ್ಟು ಹೆದರಿಸುತ್ತಾರೆ. ಅಲ್ಲದೇ ನಿಮ್ಮ ಹೆಸರನ್ನು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕುತ್ತಾರೆ. ಈಗಾಗಲೇ ಈ ದಂಪತಿ ವಿರುದ್ಧ ಕೆಲವರು ಪ್ರಕರಣ ದಾಖಲಿಸಿದ್ದು, ಇವರು ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ ಎಂದು ಮೈಸೂರಿನ ರಾಮಾನುಜ ರಸ್ತೆಯ ವರ್ತಕ ಬಿ.ಎನ್. ಪ್ರಶಾಂತ್ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್. ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ದೂರುದಾರ ಪ್ರಶಾಂತ್ ಅವರು ಕಾನ್‌ಸ್ಟೇಬಲ್ ಹಾಗೂ ಅವರ ಪತ್ನಿಯಿಂದ ವಂಚನೆಗೊಳಗಾಗಿರುವವರ ಪಟ್ಟಿಯೊಂದನ್ನು ತನ್ನ ದೂರಿನಲ್ಲಿ ಲಗತ್ತಿಸಿದ್ದಾರೆ.

ಇಂದಿನಿಂದ ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿಯಲ್ಲಿ ಹಲಸಿನ ಹಬ್ಬ

ಮೈಸೂರು,ಜು.13(ಎಂಕೆ)– ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್(ಫೋರಂ ಮಾಲ್)ನಲ್ಲಿ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ, ನೆಕ್ಸಸ್ ಸೆಂಟರ್ ಸಿಟಿ ವತಿಯಿಂದ ಜು.14ರಿಂದ 16 ರವರೆಗೆ 'ಹಲಸಿನ ಹಬ್ಬ' ಏರ್ಪಡಿಸಿದ್ದಾರೆ.



3 ದಿನಗಳ 'ಹಲಸಿನ ಹಬ್ಬ'ದಲ್ಲಿ ಕೆಂಪು, ಹಳದಿ ಮತ್ತು ಬಿಳಿ ಹಲಸಿನ ತಳಿಯ ಹಣ್ಣುಗಳು ತಿನ್ನಲು ಮತ್ತು ಕೊಳ್ಳಲು ಸಿಗಲಿವೆ. ಹಲಸಿನ ಹೋಳಿಗೆ, ಐಸ್ ಕ್ರೀಂ, ಚಿಪ್ಸ್, ಚಾಕೋಲೇಟ್, ಹಪ್ಪಳ, ಹಲ್ವಾ, ಕಬಾಬ್, ವಡೆ, ದೋಸೆ, ಪಲ್ಯ, ಬಿರಿಯಾನಿ ಸೇರಿದಂತೆ ಹಲವು ಬಗೆ ತಿನಿಸುಗಳು ಲಭ್ಯವಿರಲಿದ್ದು, ಹಲಸಿನ ಅಡುಗೆಗಳ ಪುಸ್ತಕಗಳನ್ನು ಮಾರಾಟ ಮಾಡಲಾಗುವುದು. ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕು ಪ್ರಾಧಿಕಾರದಲ್ಲಿ ನೊಂದಣಿಯಾಗಿರುವ ರಾಜ್ಯದ ಮೊದಲ ಕೆಂಪು ಹಲಸಿನ ತಳಿಗಳಾದ ಸಿದ್ದು ಹಲಸು ಮತ್ತು ಶಂಕರ ಗಿಡಗಳು ಲಭ್ಯವಿದ್ದು, ಕರ್ನಾಟಕದ ವಿವಿಧ ಭಾಗಗಳಿಂದ ಬರುವ 12 ಗ್ರಾಮೀಣ ಉದ್ದಿಮೆದಾರರು, ರೈತ ಕಂಪನಿಗಳು, ರೈತ ಮತ್ತು ಮಹಿಳಾ ಗುಂಪುಗಳು ಹಲಸಿನ ಮೌಲ್ಯವರ್ಧಿತ ಪದಾರ್ಥಗಳು, ಸಿರಿಧಾನ್ಯ, ಸಾವಯವ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳನ್ನು ಮಾರಾಟಕ್ಕೆ ತರಲಿದ್ದಾರೆ. ಹಲಸಿನ ಸ್ಪರ್ಧೆಗಳು ನಡೆಯಲಿದ್ದು, ಭಾನುವಾರ ಬೆಳಗ್ಗೆ 10.30 ರಿಂದ 12 ಘಂಟೆಯವರೆಗೆ 5–12 ವಯಸ್ಸಿನ ಮಕ್ಕಳಿಗೆ 'ನಾ ಕಂಡಂತೆ ಹಲಸು' ಚಿತ್ರಕಲಾ ಸ್ಪರ್ಧೆ ಹಾಗೂ ಶನಿವಾರ ಮತ್ತು ಭಾನುವಾರ ಸಂಜೆ ಹಲಸಿನ ಹಣ್ಣು ತಿನ್ನುವ ಮತ್ತು ಎತ್ತುವ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ.ನಂ. 9880908608 ಸಂಪರ್ಕಿಸುವಂತೆ ಕೋರಲಾಗಿದೆ.

ಧರ್ಮಸ್ಥಳದ ಸೌಜನ್ಯ ಸಾವಿನ ಪ್ರಕರಣ: ಪೋಷಕರ ಜೊತೆ ಸಂವಾದ



ಮೈಸೂರು,ಜು.13(ಬಿಎಲ್‌ಯು)– ಧರ್ಮಸ್ಥಳದಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ ನಡೆದ ಸೌಜನ್ಯಳ ಅನುಮಾನಾಸ್ಪದ ಸಾವಿನ ಪ್ರಕರಣ ಸಂಬಂಧ ಸಂತ್ರಸ್ತೆಯ ಪೋಷಕರ ಜೊತೆ ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಸಂವಾದ ಏರ್ಪಡಿಸಲಾಗಿತ್ತು.

ಮೈಸೂರಿನ ಒಡನಾಡಿ ಸಂಸ್ಥೆ, ಪ್ರಗತಿಪರ ಸಂಘಟನೆಗಳ ಒಕ್ಕೂಟ ಹಾಗೂ ಜನತಂತ್ರ ಜಾಗೃತಿ ವೇದಿಕೆ ಆಯೋಜಿಸಿದ್ದ ಸಂವಾದದಲ್ಲಿ ಸೌಜನ್ಯಳ ತಾಯಿ ಕುಸುಮ, ಮಗಳ ನೆನೆದು ಕಣ್ಣೀರಿಟ್ಟರು. ಧರ್ಮಸ್ಥಳದಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ ನಡೆದಿರುವ ಮಗಳ ಸಾವು ಹಾಗೂ ನಂತರ ನಡೆದ ಘಟನೆಗಳನ್ನು ಕುಸುಮ ಅವರು ಎಳೆ ಎಳೆಯಾಗಿ ಬಿಡಿಸಿಟ್ಟರು.

ಮಗಳ ಸಾವಿನ ಸತ್ಯಾಂಶ ಮುಚ್ಚಿ ಹಾಕುವ ಉದ್ದೇಶದಿಂದ ನನಗೆ ಮಾನಸಿಕ ಅಸ್ವಸ್ಥೆ ಎಂಬ ಹಣೆ ಪಟ್ಟಿ ಕಟ್ಟಿದರು. ನನ್ನ ಮಗಳ ಸಾವಿನ ಬಗ್ಗೆ ಇದ್ದ ಹಲವು ಸಾಕ್ಷ್ಯಗಳನ್ನು ನಾಶಪಡಿಸಿದರು. ನನ್ನ ಮಗಳನ್ನು ಕೊಲೆ ಮಾಡಿರುವ ಆರೋಪಿಗಳನ್ನು ವ್ಯವಸ್ಥಿತವಾಗಿ ರಕ್ಷಿಸಿದರು ಎಂದು ದೂರಿದರು.

ನನಗೆ ಅನ್ನ ಬೇಡ, ಬದಲಿಗೆ ನನ್ನ ಮಗಳ ಸಾವಿಗೆ ನ್ಯಾಯ ಬೇಕು ಎಂದು ಕುಸುಮಾ ಅಂಗಲಾಚಿದರು. ಇದೇ ವೇಳೆ ಮಾತನಾಡಿದ ವಕೀಲ ಶ್ರೀನಿವಾಸ್, ಪ್ರಭಾವಿಗಳು ಸೌಜನ್ಯಳ ಸಾವಿನ ಸಾಕ್ಷಿಗಳನ್ನು ನಾಶಪಡಿಸಿದ್ದಾರೆ. ದೇಶದ ಜನರು ತುಂಬಾ ನಂಬಿಕೆ ಇಟ್ಟಿರುವ ತನಿಖಾ ಸಂಸ್ಥೆ ಸಿಬಿಐನಿಂದಲೂ ನಮಗೆ ನ್ಯಾಯ ಸಿಕ್ಕಿಲ್ಲ. ಈಗ ನ್ಯಾಯಾಲಯ ನೀಡಿರುವ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದರೆ. ಮತ್ತೆ ಅಮಾಯಕ ವ್ಯಕ್ತಿಯೇ ಶಿಕ್ಷೆಗೆ ಗುರಿಯಾಗುವ ಸಾಧ್ಯತೆ ಇದೆ. ಇದರಿಂದ ಸೌಜನ್ಯ ಸಾವಿಗೆ ಮೂಲ ಕಾರಣರಾದ ಆರೋಪಿಗಳಿಗೆ ಶಿಕ್ಷೆಯಾಗುವುದಿಲ್ಲ. ಸೌಜನ್ಯ ಸಾವಿನ ಬಗ್ಗೆ ಈಗಾಗಲೇ ಪೊಲೀಸ್ ಹಾಗೂ ಸಿಬಿಐ ತನಿಖೆ ಆಗಿರುವ ಕಾರಣ ಬೇರೆ ರೀತಿಯ ತನಿಖೆಯಿಂದ ನ್ಯಾಯ ಪಡೆಯುವ ಬಗ್ಗೆ ಹೋರಾಟ ರೂಪಿಸಬೇಕಿದೆ. ಈ ನಿಟ್ಟಿನಲ್ಲಿ ನನ್ನ ವಕೀಲರ ತಂಡದ ಜೊತೆ ಚರ್ಚೆ ಮಾಡುತ್ತೇನೆ ಎಂದು ಹೇಳಿದರು.

ಸೌಜನ್ಯಳ ಸಹೋದರಿ, ಮಾವ ವಿಠಲ್ ಗೌಡ, ಧರ್ಮಸ್ಥಳದ ಹೋರಾಟಗಾರ ಮಹೇಶ್ ಶೆಟ್ಟಿ, ಒಡನಾಡಿ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ, ಪರುಶು, ಪ್ರಗತಿಪರ ಚಿಂತಕರಾದ ಸಿ.ಬಸವಲಿಂಗಯ್ಯ, ನಾ.ದಿವಾಕರ, ಪ್ರೊ.ಕಾಳೇಗೌಡ ನಾಗವಾರ, ಸವಿತಾ ಪ.ಮಲ್ಲೇಶ್ ಸೇರಿದಂತೆ ಹಲವರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಬಂಡೀಪುರ ಪಶುವೈದ್ಯ ವಸೀಂ ಮಿರ್ಜಾಗೆ ಗಜ ಗೌರವ ಪ್ರಶಸ್ತಿ

ಬೆಂಗಳೂರು, ಜು.13– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ (ಬಿಟಿಆರ್) ಕೆಲಸ ಮಾಡುತ್ತಿರುವ ಪಶುವೈದ್ಯ ಡಾ.ವಸೀಂ ಮಿರ್ಜಾ ಅವರು ಕೇಂದ್ರ ಸರ್ಕಾರದ ಪ್ರತಿಷ್ಠಿತ ಗಜ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಆಗಸ್ಟ್ 12ರಂದು ವಿಶ್ವ ಆನೆ ದಿನದಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮಿರ್ಜಾ ಅವರಿಗೆ ಗಜ ಗೌರವ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.




ಡಾ.ವಸೀಂ ಮಿರ್ಜಾ

ಕರ್ನಾಟಕದ ಅಧಿಕಾರಿಯೊಬ್ಬರು ಇಂತಹ ಪ್ರಶಸ್ತಿಯನ್ನು ಪಡೆಯುತ್ತಿರುವುದು ಇದೇ ಮೊದಲು. ಇದು ತುಂಬಾ ಉತ್ತೇಜನಕಾರಿಯಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಲ್ಖಾಡೆ ತಿಳಿಸಿದ್ದಾರೆ.

ಫೆಬ್ರವರಿ 2023ರಲ್ಲಿ ಬಿಟಿಆರ್ ಬಳಿ ವಿದ್ಯುತ್ ತಗುಲಿದ ಆನೆಯ ಜೀವ ಉಳಿಸಲು ಶ್ರಮಿಸಿದ್ದನ್ನು ಗುರುತಿಸಿ ಡಾ.ವಸೀಂ ಮಿರ್ಜಾ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ. ಹೆಚ್ಚುವರಿ ಪಿಸಿಸಿಎಫ್, ವನ್ಯಜೀವಿ, ಕುಮಾರ್ ಪುಷ್ಕರ್ ವನ್ಯಜೀವಿಗಳ ಸಂರಕ್ಷಣೆ, ವಿಶೇಷವಾಗಿ ಆನೆಗಳ ಸಂರಕ್ಷಣೆಯಲ್ಲಿ ತೊಡಗಿರುವ ಡಾ.ಮಿರ್ಜಾ ಅವರ ಹೆಸರನ್ನು ಪ್ರಶಸ್ತಿಗೆ ಸೂಚಿಸಿದ್ದರು. ಈ ವರ್ಷ ಆಗಸ್ಟ್ 12ರಂದು ಒಡಿಶಾದ ಮಹಾನದಿ ಆನೆ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಅಂಗುಲ್‌ನಲ್ಲಿ ವಿಶ್ವ ಆನೆ ದಿನ ಕಾರ್ಯಕ್ರಮ ನಡೆಯಲಿದೆ.

ಚಲಿಸುತ್ತಿದ್ದ ಎಲೆಕ್ಟ್ರಿಕಲ್ ಸ್ಕೂಟರ್‌ಗೆ ಬೆಂಕಿ: ಸವಾರ ಪಾರು
ಕ್ಷಣಾರ್ಧದಲ್ಲಿ ಸ್ಫೋಟಗೊಂಡು ಭಸ್ಮ

ಮೈಸೂರು,ಜು.13(ಎಂಟಿವೈ)–ಚಲಿಸುತ್ತಿದ್ದ ಎಲೆಕ್ಟ್ರಿಕಲ್ ಸ್ಕೂಟರ್ ವೊಂದು ಬೆಂಕಿಗೆ ಸುಟ್ಟು ಭಸ್ಮವಾದ ಘಟನೆ ಗನ್‌ಹೌಸ್ ಸಮೀಪದ ಕೋಟೆ ಮಾರಮ್ಮ ದೇವಾಲಯದ ಬಳಿ ಗುರುವಾರ ರಾತ್ರಿ ಸಂಭವಿಸಿದ್ದು, ಸವಾರ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.



ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಚಾಮರಾಜ ಜೋಡಿ ರಸ್ತೆಯ ಪ್ರಿಂಟಿಂಗ್ ಪ್ರೆಸ್ ಸಿಬ್ಬಂದಿ ಗುಂಡ್ಲುಪೇಟೆಯ ಬಸವರಾಜು ಎಂಬುವರು ರಾಮಸ್ವಾಮಿ ವೃತ್ತದಿಂದ ಹಾರ್ಡಿಂಜ್ ವೃತ್ತದ ಕಡೆಗೆ ಜಾಗ್ವಾರ್ ಕಂಪನಿ ಎಲೆಕ್ಟ್ರಿಕಲ್ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಗನ್‌ಹೌಸ್ ಬಳಿ ಬೆಂಕಿ ಕಾಣಿಸಿಕೊಂಡಿದೆ. ಅದೇ ರಸ್ತೆಯಲ್ಲಿ ಬರುತ್ತಿದ್ದ ಇತರೆ ವಾಹನ ಸವಾರರು ಬೆಂಕಿ ಗಮನಿಸಿ ಸವಾರ ಬಸವರಾಜುಗೆ ಸ್ಕೂಟರ್ ನಿಲ್ಲಿಸುವಂತೆ ಸೂಚಿಸಿದ್ದಾರೆ. ಸ್ಕೂಟರ್ ನಿಲ್ಲಿಸಿದ ಕೆಲವೇ ಕ್ಷಣಗಳಲ್ಲಿ ಬೆಂಕಿ ಕೆನ್ನಾಲಿಗೆ ಆವರಿಸಿ, ಸ್ಕೂಟರ್‌ನ ಬ್ಯಾಟರಿ ಸ್ಫೋಟಗೊಂಡಿದೆ. ವಿಷಯ ತಿಳಿದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ದೇವರಾಜ ಸಂಚಾರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಎಂ.ಎಸ್.ಬಂಡಿ ಸ್ಥಳಕ್ಕೆ ಬಂದು ಆ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿದರು. ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ಆರಂಭಿಸಿದರಾದರೂ, ಅಷ್ಟರಲ್ಲಾಗಲೇ ಸ್ಕೂಟರ್ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿ ಭಸ್ಮಗೊಂಡಿತ್ತು. ಬೆಂಕಿಗೆ ಆಹುತಿಯಾದ ಎಲೆಕ್ಟ್ರಿಕಲ್ ಸ್ಕೂಟರ್ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕ ನಿಂಗರಾಜು ಎರಡು ವರ್ಷದ ಹಿಂದೆ ಖರೀದಿಸಿದ್ದರು.

ಚಾಲನೆ ವೇಳೆ ಎಚ್ಚರವಿರಲಿ

ವ್ಯಕ್ತಿಯೊಬ್ಬರು ಚಾಲನೆ ಮಾಡುತ್ತಿದ್ದ ಎಲೆಕ್ಟ್ರಿಕಲ್ ಸ್ಕೂಟರ್ ಬೆಂಕಿಗೆ ಆಹುತಿಯಾಗಿದ್ದು, ಸವಾರ ಪಾರಾಗಿದ್ದಾರೆ. ಆಹುತಿಯಾದ ಸ್ಕೂಟರ್ 2 ವರ್ಷದ ಹಿಂದೆ ಖರೀದಿಸಿದ್ದು ಎಂದು ಅದರ ಮಾಲೀಕ ತಿಳಿಸಿದ್ದು, ಎಲೆಕ್ಟ್ರಿಕಲ್ ಸ್ಕೂಟರ್ ಹೊಂದಿರುವ ಸಾರ್ವಜನಿಕರು ಚಾಲನೆ ವೇಳೆ ಎಚ್ಚರಿಕೆಯಿಂದ ಇರಬೇಕು. ಅಲ್ಲದೆ, ಬ್ಯಾಟರಿಯನ್ನು ತಪಾಸಣೆ ಮಾಡಿಸಿಕೊಂಡು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು.

–ಪರಶುರಾಮಪ್ಪ, ಸಂಚಾರ ವಿಭಾಗದ ಎಸಿಪಿ

ಮನಾಲಿ ಪ್ರವಾಸದಲ್ಲಿದ್ದ 19 ಮಂದಿ ಮೈಸೂರಿನತ್ತ ಪಯಣ

ಮೈಸೂರು, ಜು.13(ಆರ್‌ಕೆ)–ನೆರೆ ಹಾವಳಿಗೆ ತುತ್ತಾಗಿರುವ ಮನಾಲಿಗೆ ತೆರಳಿದ್ದ ಮೈಸೂರಿನ 19 ಮಂದಿ ಪ್ರವಾಸಿಗರು ಇಂದು ರಾತ್ರಿ ದೆಹಲಿಯಿಂದ ವಾಪಸ್ಸಾಗುತ್ತಿದ್ದಾರೆ. ಸುರಕ್ಷಿತವಾಗಿರುವ ಎಲ್ಲಾ 19 ಮಂದಿ ನಾಳೆ(ಜು.14) ಬೆಳಗ್ಗೆ ಮೈಸೂರು ತಲುಪುವರು ಎಂದು ಪ್ರವಾಸ ಆಯೋಜಿಸಿದ್ದ ಧರ್ಮೇಶ್ ಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಇಂದು ರಾತ್ರಿಯೇ ಮೈಸೂರಿಗೆ ತಲುಪಬೇಕಿತ್ತು. ಆದರೆ, ದೆಹಲಿಯಿಂದ ಹೊರಡಲು ವಾತಾವರಣ ಪೂರಕವಾಗಿರದ ಕಾರಣ ಇಂದು ರಾತ್ರಿ ಹೊರಟು ಶುಕ್ರವಾರ ಬೆಳಗ್ಗೆ ಮೈಸೂರಿಗೆ ಬರುತ್ತೇವೆ ಎಂದು ತಿಳಿಸಿದರು.

ಆದರೆ ಉತ್ತರಪ್ರದೇಶದ ತೋಷ್ ನಗರಕ್ಕೆ ಹೋಗಿರುವ ಮೈಸೂರಿನ ಸಿದ್ಧಾರ್ಥ ನಗರದ ಅಂಕುಶ ಮತ್ತು ನೇಹಾ ನವದಂಪತಿ ಇನ್ನೂ ಸಂಪರ್ಕಕ್ಕೆ ಸಿಕ್ಕಿಲ್ಲ. ನಿನ್ನೆವರೆಗೆ ಅವರ ಮೊಬೈಲ್ ಫೋನ್‌ಗಳು ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಇಂದು ಮಧ್ಯಾಹ್ನದಿಂದ ಸ್ವಿಚ್ ಆಫ್ ಆಗಿವೆ ಎಂದು ಸಂಬಂಧಿಕರು ತಿಳಿಸಿದ್ದಾರೆ.

ಮತ್ತೊಂದೆಡೆ ಮೈಸೂರು ಜಿಲ್ಲಾಡಳಿತದ ಅಧಿಕಾರಿಗಳೂ ಬೆಂಗಳೂರಿನಲ್ಲಿರುವ ರಾಜ್ಯ ವಿಪತ್ತು ನಿರ್ವಹಣಾ ಕೋಶದ ಅಧಿಕಾರಿಗಳ ಮೂಲಕ ಮನಾಲಿಗೆ ತೆರಳಿರುವ 19 ಮಂದಿ ಪ್ರವಾಸಿಗರು ಹಾಗೂ ಉತ್ತರಪ್ರದೇಶಕ್ಕೆ ತೆರಳಿರುವ ನವದಂಪತಿಗಳನ್ನು ಸುರಕ್ಷಿತವಾಗಿ ಕರೆತರಲು ನಿರಂತರ ಪ್ರಯತ್ನದಲ್ಲಿದ್ದಾರೆ. ಅಂಕುಶ ಮತ್ತು ನೇಹಾ ಬಗ್ಗೆ ಯಾವುದೇ ಮಾಹಿತಿ ಸಿಗದಿರುವುದರಿಂದ ಅವರ ಪೋಷಕರು, ಸಂಬಂಧಿಕರು ಆತಂಕ ಹೆಚ್ಚಾಗಿದ್ದು, ಸಂಪರ್ಕಿಸಲು ನಿರಂತರ ಪ್ರಯತ್ನದಲ್ಲಿದ್ದಾರೆ.

ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ
ಕಳೆದ ಐದೂವರೆ ವರ್ಷಗಳಲ್ಲಿ 10,883 ಪ್ರಕರಣ ದಾಖಲು

- 8,357 ಪ್ರಕರಣಗಳಿಗೆ ಚಾರ್ಜ್ ಶೀಟ್, 1,542 ಪ್ರಕರಣಗಳಿಗೆ ಬಿ–ರಿಪೋರ್ಟ್ ಸಲ್ಲಿಕೆ
- ವಿಧಾನಪರಿಷತ್‌ನಲ್ಲಿ ಸದಸ್ಯ ಡಾ.ಡಿ.ತಿಮ್ಮಯ್ಯರ ಪ್ರಶ್ನೆಗೆ ಗೃಹಸಚಿವರ ಮಾಹಿತಿ

ಮೈಸೂರು,ಜು.13(ಪಿಎಂ)–ರಾಜ್ಯದಲ್ಲಿ ಕಳೆದ ಐದೂವರೆ ವರ್ಷಗಳಲ್ಲಿ (2018–23) ಪರಿಶಿಷ್ಟ ಜಾತಿ ಮತ್ತು ಪಂಗಡ ದೌರ್ಜನ್ಯ ತಡೆ ಕಾಯ್ದೆಯಡಿ 10,883 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 8,357 ಪ್ರಕರಣಗಳ ಸಂಬಂಧ ಚಾರ್ಜ್ ಶೀಟ್ ಸಲ್ಲಿಸಿದ್ದರೆ, 1,542 ಪ್ರಕರಣಗಳ ಸಂಬಂಧ ಬಿ ರಿಪೋರ್ಟ್ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು.



ವಿಧಾನ ಪರಿಷತ್ತಿನಲ್ಲಿ ಗುರುವಾರ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಪ್ರಶ್ನೆಗಳಿಗೆ ಗೃಹಸಚಿವರು ಉತ್ತರಿಸಿದರು. 2018ರಲ್ಲಿ 1,752 ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 1,388 ಪ್ರಕರಣಗಳಿಗೆ ಚಾರ್ಜ್ ಶೀಟ್ ಹಾಗೂ 347 ಪ್ರಕರಣಗಳಿಗೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ. ಅಂತೆಯೇ 2019ರಲ್ಲಿ 1,807 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 1,505 ಪ್ರಕರಣಗಳಿಗೆ ಚಾರ್ಜ್ ಶೀಟ್ ಹಾಗೂ 281 ಪ್ರಕರಣಗಳಲ್ಲಿ ಬಿ ರಿಪೋರ್ಟ್ ಸಲ್ಲಿಸಲಾಗಿದೆ. 2020ರಲ್ಲಿ 1,785 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 1,511 ಪ್ರಕರಣಗಳಿಗೆ ಚಾರ್ಜ್ ಶೀಟ್ ಹಾಗೂ 245 ಪ್ರಕರಣಗಳಿಗೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ.

2021ರಲ್ಲಿ 2,072 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 1,718 ಪ್ರಕರಣಗಳಿಗೆ ಚಾರ್ಜ್‌ಶೀಟ್ ಹಾಗೂ 308 ಪ್ರಕರಣಗಳಿಗೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ. 2022ರಲ್ಲಿ ದಾಖಲಾದ 2,377 ಪ್ರಕರಣಗಳಲ್ಲಿ 1,822 ಪ್ರಕರಣಗಳಿಗೆ ಚಾರ್ಜ್‌ಶೀಟ್, 313 ಪ್ರಕರಣಗಳಿಗೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ.

2023ರಲ್ಲಿ 1,089 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 413 ಪ್ರಕರಣಗಳಿಗೆ ಚಾರ್ಜ್ ಶೀಟ್ ಹಾಗೂ 48 ಪ್ರಕರಣಗಳಿಗೆ ಬಿ ರಿಪೋರ್ಟ್ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಾಹಿತಿ ನೀಡಿದರು.

ಈ ದೌರ್ಜನ್ಯ ಪ್ರಕರಣಗಳಲ್ಲಿ ಸಾಕ್ಷಿದಾರರಿಗೆ ಸರಿಯಾದ ಸಮಯಕ್ಕೆ ಪ್ರಯಾಣ ಭತ್ಯೆ, ದಿನಭತ್ಯೆ ನೀಡದೇ ಸಾಕ್ಷಿದಾರರು ನ್ಯಾಯಾಲಯದ ವಿಚಾರಣೆಗೆ ಗೈರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಡಾ.ಡಿ. ತಿಮ್ಮಯ್ಯ ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಗೃಹ ಸಚಿವರು, ಎಲ್ಲಾ ಜಿಲ್ಲೆಗಳಿಂದ ಪಡೆಯಲಾದ ಮಾಹಿತಿ ಪ್ರಕಾರ ಸಾಕ್ಷಿದಾರರು ವಿಚಾರಣೆಗೆ ನ್ಯಾಯಾಲಯಕ್ಕೆ ಗೈರಾಗುತ್ತಿರುವ ಬಗ್ಗೆ ಪ್ರಕರಣಗಳು ಕಂಡು ಬಂದಿಲ್ಲ ಎಂದು ಹೇಳಿದರು. ಈ ಸಾಕ್ಷಿದಾರರಿಗೆ ಸರಿಯಾದ ಸಮಯದಲ್ಲಿ ಭತ್ಯೆಗಳನ್ನು ಸರಳ ಮಾರ್ಗದಲ್ಲಿ ನೀಡಲು ಸರ್ಕಾರ ಕೈಗೊಂಡ ಅಗತ್ಯ ಕ್ರಮಗಳೇನು ಎಂದು ಡಾ.ಡಿ.ತಿಮ್ಮಯ್ಯ ಪ್ರಶ್ನಿಸಿದರು.

ಉತ್ತರಿಸಿದ ಗೃಹ ಸಚಿವರು, ದೌರ್ಜನ್ಯ ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗುವ ಸಂತ್ರಸ್ತರು ಹಾಗೂ ಸಾಕ್ಷಿದಾರರಿಗೆ ಪ್ರಯಾಣ ಭತ್ಯೆ, ದಿನಭತ್ಯೆ, ಸಾಕ್ಷಿದಾರರಿಗೆ ಆಹಾರ ಭತ್ಯೆ ಹಾಗೂ ವಿಶೇಷ ವೈದ್ಯಕೀಯ ಔಷಧ ಇತರ ವೆಚ್ಚದ ದರಗಳನ್ನು ಸರ್ಕಾರದ ಆದೇಶದಂತೆ 2022ರ ಅ.13ರಂದು ಪರಿಷ್ಕರಿಸಲಾಗಿದೆ. ಸದರಿ ಆದೇಶದಂತೆ ಸಾಕ್ಷಿದಾರರಿಗೆ ಭತ್ಯೆಗಳನ್ನು ಒದಗಿಸಲು ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು ಮತ್ತು ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ 46,149 ರೌಡಿಶೀಟರ್‌ಗಳಿದ್ದಾರೆ

- ವಿಧಾನಪರಿಷತ್ತಿನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾಹಿತಿ
- 65 ವರ್ಷ ಮೇಲ್ಪಟ್ಟವರು, ಮರಣ ಹೊಂದಿದ್ದರೆ, ಅಂಗವಿಕಲ, ಮಾನಸಿಕ ಅಸ್ವಸ್ಥನಾದ ರೌಡಿಶೀಟರ್ ಪಟ್ಟಿಯಿಂದ ಮುಕ್ತಿ

ಬೆಂಗಳೂರು,ಜು.13(ಕೆಎಂಶಿ)– ವಿವಿಧ ಅಪರಾಧ ಪ್ರಕರಣಗಳ ಆರೋಪದಡಿ ರಾಜ್ಯದಲ್ಲಿ 46,149 ರೌಡಿಶೀಟರ್‌ಗಳಿದ್ದಾರೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ವಿಧಾನಪರಿಷತ್ತಿನಲ್ಲಿ ತಿಳಿಸಿದ್ದಾರೆ.



ಕಳೆದ 5 ವರ್ಷಗಳಲ್ಲಿ ಹೊಸದಾಗಿ 14,163 ಮಂದಿಯನ್ನು ರೌಡಿಶೀಟರ್ ಪಟ್ಟಿಗೆ ಸೇರಿಸಲಾಗಿದೆ ಎಂದರು.

ಪ್ರಶ್ನೋತ್ತರ ಅವಧಿಯಲ್ಲಿ ಅರವಿಂದ್‌ಕುಮಾರ್ ಅರಳಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರೌಡಿಶೀಟರ್‌ಗಳ ಪಟ್ಟಿಯನ್ನು ತೆಗೆಯುವುದು ಮತ್ತು ಅಳಿಸಿ ಹಾಕುವ ಪ್ರಕ್ರಿಯೆ ಕಾಲಕಾಲಕ್ಕೆ ನಡೆಯುತ್ತಲೇ ಇರುತ್ತದೆ. ರೌಡಿಶೀಟರ್ ಪಟ್ಟಿ ತೆರೆಯುವಾಗ ಯಾವುದೇ ಜಾತಿ, ಧರ್ಮ ನೋಡುವುದಿಲ್ಲ. ರೌಡಿ ಆಗಿದ್ದರೆ ರೌಡಿಶೀಟರ್ ಪಟ್ಟಿ ತೆರೆಯಲಾಗುವುದು ಎಂದರು.

ಕಳೆದ ಆರು ವರ್ಷಗಳಲ್ಲಿ 27,294 ಮಂದಿಯನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗಿದೆ. ರೌಡಿ ಹಿನ್ನೆಲೆ ಇರುವ 65 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿದ್ದವರು, ಅಥವಾ ಮರಣ ಹೊಂದಿದ್ದರೆ, ಅಂಗವಿಕಲ ಅಥವಾ ಮಾನಸಿಕ ಅಸ್ವಸ್ಥರಾಗಿದ್ದರೆ ಅವರನ್ನು ರೌಡಿಶೀಟರ್ ಪಟ್ಟಿಯಿಂದ ಕೈಬಿಡಲಾಗುವುದು ಎಂದು ಹೇಳಿದರು.

ರೌಡಿಶೀಟರ್ ತೆರೆಯಲು ಪೊಲೀಸ್ ಮ್ಯಾನ್ಯುಯಲ್ ಪ್ರಕಾರ ಕೆಲವೊಂದು ನಿಯಮಗಳಿವೆ. ಅವುಗಳ ಪ್ರಕಾರವೇ ರೌಡಿಶೀಟರ್ ತೆರೆಯಲಾಗುವುದು ಎಂದು ಪರಮೇಶ್ವರ್ ಹೇಳಿದರು.

ರೌಡಿಶೀಟರ್ ಪಟ್ಟಿಯಲ್ಲಿರುವವರು ಯಾವುದೇ ಜಾತಿ, ಧರ್ಮದವರ ಮಾಹಿತಿ ನೀಡಲು ಸಾಧ್ಯವಿಲ್ಲ. ಅದನ್ನು ಬಹಿರಂಗಪಡಿಸುವುದೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದ 54 ಕಾರಾಗೃಹಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಖೈದಿಗಳಿದ್ದಾರೆ ಎಂದು ಪ್ರತಾಪ್‌ಸಿಂಹ ನಾಯಕ್ ಅವರ ಪ್ರತ್ಯೇಕ ಪ್ರಶ್ನೆಗೆ ಉತ್ತರಿಸಿದ ಸಚಿವರು, 54 ಕಾರಾಗೃಹಗಳಲ್ಲಿ 14,237 ಖೈದಿಗಳಿಗೆ ಅಧಿಕೃತ ಅವಕಾಶಗಳಿದ್ದು, ಸದ್ಯ ಈ ಕಾರಾಗೃಹಗಳಲ್ಲಿ 16,053 ಖೈದಿಗಳಿದ್ದಾರೆ ಎಂದು ಹೇಳಿದರು.

ರಾಜ್ಯದಲ್ಲಿನ ಕಾರಾಗೃಹಗಳಲ್ಲಿ ಅಧಿಕೃತ ಸಾಮರ್ಥ್ಯಕ್ಕಿಂತ ಹೆಚ್ಚು ಖೈದಿಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರು, ವಿಜಯಪುರ, ಮಂಗಳೂರು, ಬೀದರ್, ಅರಸೀಕೆರೆ, ವಿರಾಜಪೇಟೆ ಸೇರಿದಂತೆ ಮತ್ತಿತರ 6 ಕಡೆ ಬಂಧಿಖಾನೆಗಳನ್ನು ತೆರೆದು 3475 ಖೈದಿಗಳಿಗೆ ಹೆಚ್ಚಿನ ಸ್ಥಳಾವಕಾಶ ಮಾಡಿಕೊಡಲಾಗಿದೆ. ಖೈದಿಗಳ ಮನಪರಿವರ್ತನೆ ಮಾಡಲು ಅನುಕೂಲವಾಗುವಂತೆ ಜೈಲಿನಲ್ಲಿ ಆಪ್ತ ಸಮಾಲೋಚಕರನ್ನು ನಿಯೋಜಿಸಲಾಗಿದೆ. ಜತೆಗೆ ಸನ್ನಢತೆ ಆಧಾರದ ಕೈದಿಗಳನ್ನು ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಬಿಡುಗಡೆ ಮಾಡಲಾಗುತ್ತಿದೆ ಎಂದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ನಿದ್ದೆ ಮಾತ್ರೆ ತಿಂದರೆ ನಿದ್ದೆ ಬರುತ್ತೆ
ಗಂಡ : ಹೌದು!?
ಹೆಂಡತಿ : ಜ್ವರದ ಮಾತ್ರೆ ತಿಂದರೆ ಜ್ವರ ಬರುತ್ತಾ?

ಮೈಸೂರು ಮಿತ್ರ

ಶುಕ್ರವಾರ, 14 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದುಡಿಯಲು ಕಲಿಯಬೇಕು ಹಾಗೂ ಫಲಕ್ಕಾಗಿ ಕಾಯಬೇಕು.

– ಲಾಂಗ್‌ಫೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜೇನು ತುಪ್ಪ ಬೇಕು, ಜೇನು ನೊಣಕ್ಕೆ ಹೆದರುವುದೇ?

ನಿಮ್ಮ ಪತ್ರಗಳು

ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೃತ್ಯಗಳಿಗೆ ಕೊನೆ ಎಂದು...!?

ಮಾನ್ಯರೆ,

ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಏಳು ದಶಕಗಳೇ ಕಳೆದಿದ್ದರೂ ದೇಶದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯವಂತೂ ಕಡಿಮೆ ಆಗಿಲ್ಲ...!

ಅದಕ್ಕೆ ನಿದರ್ಶನವೆಂಬಂತೆ ಇತ್ತೀಚೆಗೆ ಕೋಲಾರ ಜಿಲ್ಲೆಯ, ಬಂಗಾರಪೇಟೆ ತಾಲೂಕಿನ "ಬೋಡಗುರ್ಕಿ" ಎಂಬ ಗ್ರಾಮ ಒಂದರಲ್ಲಿ ತಂದೆಯೊಬ್ಬ ತನ್ನ ಮಗಳು ದಲಿತ ಯುವಕನನ್ನು ಪ್ರೀತಿಸಿದಳೆಂಬ ಒಂದೇ ಒಂದು ಕಾರಣಕ್ಕೆ ಮರ್ಯಾದೆಯ ಹೆಸರಿನಲ್ಲಿ ತನ್ನ ಮಗಳನ್ನೇ ಕೊಂದು ಹಾಕಿದ ಅಮಾನವೀಯ ಕೃತ್ಯವೊಂದು ಜರುಗಿದೆ. ಇದರಿಂದ ಮನನೊಂದು ಆ ಪ್ರೇಮಿಯೂ ಸಹ ಆತ್ಮಹತ್ಯೆ ಮಾಡಿಕೊಂಡಿರುವ ಕರಾಳ ಘಟನೆಯೊಂದು ಘಟಿಸಿ ಹೋಗಿದೆ. ಹಾಗೆಯೇ ಮಧ್ಯಪ್ರದೇಶದ ಸೀಧೀ ಜಿಲ್ಲೆಯಲ್ಲಿ ಪ್ರವೇಶ್ ಶುಕ್ಲಾ ಎಂಬ ನಾಗರಿಕನೆನಿಸಿಕೊಂಡ ವ್ಯಕ್ತಿ ಬುಡಕಟ್ಟು ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬನ ಮೇಲೆ ಮೂತ್ರ ವಿಸರ್ಜನೆ ಮಾಡಿ ಅನಾಗರಿಕನಂತೆ ವರ್ತಿಸಿದ್ದಾನೆ. ಉತ್ತರ ಪ್ರದೇಶದಲ್ಲಿ ಕೆಲವು ಲಜ್ಜೆಗೆಟ್ಟವರು ದಲಿತ ಯುವಕರಿಗೆ ಮಲ ತಿನ್ನಿಸಿದ್ದಾರೆ. ಮತ್ತೊಂದು ಕಡೆ ದಲಿತ ಯುವಕನ ಕೈಯಿಂದ ಮೇಲ್ವರ್ಗದವನು ತನ್ನ ಬೂಟು ನೆಕ್ಕಿಸಿಕೊಳ್ಳುವಂತಹ ಘಟನೆಗಳು ವರದಿಯಾಗಿವೆ. ಹೀಗೆ ಪ್ರತಿ ದಿನ, ಪ್ರತಿ ಕ್ಷಣವು ದಲಿತರ ಮೇಲೆ ಹೀಗೆ ಒಂದಿಲ್ಲೊಂದು ದೌರ್ಜನ್ಯ, ಹಲ್ಲೆ ನಡೆಯುತ್ತಲೇ ಇದೆ.

ಮನುಷ್ಯ ಏಕೆ ಇಷ್ಟೊಂದು ಕ್ರೂರಿಯಾಗುತ್ತಿದ್ದಾನೆ...!? ಅದು ಜಾತಿಯ ವಿಚಾರ ಬಂದಾಗಲಂತೂ ಅತ್ಯಂತ ಮೃಗೀಯ ರೀತಿಯಲ್ಲಿ ವರ್ತಿಸುವಷ್ಟು ಕ್ರೂರಿಯಾಗುವುದಕ್ಕೆ ಕಾರಣವಾದರೂ ಏನು? ಹಾಗಾದರೆ ಈ ದೇಶದಲ್ಲಿ ವಾಸಿಸುವ ದಲಿತರು, ಆದಿವಾಸಿಗಳು ಮನುಷ್ಯರಲ್ಲವೆ..!? ಅವರುಗಳ ಜೀವಕ್ಕೆ ಬೆಲೆ ಇಲ್ಲವೆ?

ನಾಗರಿಕ ಸಮಾಜದಲ್ಲಿ ಯಾವುದೇ ಎಗ್ಗಿಲ್ಲದೆ ನಡೆಯುತ್ತಿರುವ ಇಂತಹ ಅನಾಗರಿಕ, ಅಮಾನವೀಯ ಕೃತ್ಯಗಳನ್ನು ಮುಂದಿನ ದಿನಗಳಲ್ಲಾದರೂ ಎಲ್ಲಾ ಸೇರಿ ಒಕ್ಕೊರಲಿನಿಂದ ಖಂಡಿಸುವಂತಾಗಲಿ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ಟೊಮೆಟೊ ದರ ಏರಿಕೆಗೇಕೆ ಹೊಟ್ಟೆ ಉರಿ?!

ಮಾನ್ಯರೆ,



ರೈತ ಬೆಳೆದ ಬೆಳೆಗೆ ಸೂಕ್ತ ದರ ಸಿಗುತ್ತಿಲ್ಲ ಎನ್ನುವ ಸಮಸ್ಯೆ ಅನಾದಿ ಕಾಲದಿಂದಲೂ ಇರುವಂತಹದ್ದು. ಲಾಟರಿ ಹೊಡೆದಂತೆ ಒಮ್ಮೊಮ್ಮೆ ಒಂದು ಬೆಳೆಗೆ ನಿರೀಕ್ಷೆಗೂ ಮೀರಿದ ಬೆಲೆ ಸಿಗುವುದುಂಟು. ಪ್ರಸ್ತುತ ಟೊಮೆಟೊ ದರ ಗಗನಕ್ಕೇರಿದೆ. ಇಳಿಸಬೇಕೆನ್ನುವುದು ಜನಸಾಮಾನ್ಯರ ಇಂದಿನ ಬೇಡಿಕೆ. ನಿರಂತರವಾಗಿ ಚಿನ್ನದ ದರ ಏರುತ್ತಲೇ ಇದೆ. ಎಂದಾದರೂ ಚಿನ್ನದ ದರವನ್ನು ಇಳಿಸಬೇಕೆಂದು ಹೋರಾಟಗಳು ನಡೆದಿವೆಯೇ? ಚಿನ್ನದ ದರ ಗಗನಕ್ಕೇರಿದರೂ ನಗರಗಳಲ್ಲಿ ಚಿನ್ನದ ಅಂಗಡಿಗಳು ಇರುವಷ್ಟು ದಿನಸಿ ಅಂಗಡಿಗಳು ಇಲ್ಲ. ಹಾಗೆಯೇ ಎಲ್ಲಾ ಅಂಗಡಿಗಳಲ್ಲೂ ಕೊಳ್ಳುವುದಕ್ಕೆ ಜನರ ನೂಕುನುಗ್ಗಲು ಸದಾ ಇರುತ್ತದೆ. ಕಾರ್ಖಾನೆಗಳಲ್ಲಿ ಉತ್ಪಾದಿಸುವ ವಸ್ತುಗಳಿಗೆ ಅವರು ನಿಗದಿಪಡಿಸಿದ ದರ ಕೊಟ್ಟು ಕೊಳ್ಳುವ ನಾವು, ರೈತ ಬೆಳೆದ ಬೆಳೆಗಳಿಗೆ ಲಾಭದಾಯಕ ದರ ಸಿಗಲಿ ಬಿಡಿ. ಮಧ್ಯವರ್ತಿಗಳನ್ನು ನಿಯಂತ್ರಿಸಿ ಆಗುತ್ತಿರುವ ಮೋಸವನ್ನು ತಡೆಯಬೇಕಿದೆ. ಆಗ ಮಾತ್ರ ದರ ಕಡಿಮೆ ಆಗುವುದಲ್ಲದೆ ಅನ್ನದಾತನಿಗೂ ನ್ಯಾಯ ದೊರಕಿಸಿಕೊಟ್ಟಂತೆ ಆಗುವುದು.

ರೈತರಲ್ಲಿ ವಿನಂತಿ: ಈಗ ಟೊಮೆಟೊಗೆ ಚಿನ್ನದಂತಹ ಬೆಲೆ ಇದೆಯೆಂದು ಮುಂದಿನ ಸಾಲಿಗೆ ಎಲ್ಲರೂ ಹೆಚ್ಚೆಚ್ಚು ಟೊಮೆಟೊ ಬೆಳೆದರೆ ಈ ಹಿಂದೆ ರಸ್ತೆಗೆ ಸುರಿದು ಕಣ್ಣೀರು ಹಾಕಿದ ಪರಿಸ್ಥಿತಿ ಮತ್ತೇ ಮರುಕಳಿಸಬಹುದು (ಆಗುವುದು ಬೇಡ). ಈ ನಿಟ್ಟಿನಲ್ಲಿ ಕೃಷಿ ಇಲಾಖೆಯು ಮಾರುಕಟ್ಟೆಯ ಬೇಡಿಕೆಯನ್ವಯ ಬೆಳೆ ಬೆಳೆಯುವಂತೆ ರೈತರಿಗೆ ಸಲಹೆ ನೀಡುವುದು ಸೂಕ್ತ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು

ಪೆನ್‌ಡ್ರೈವ್ ಸಮರ

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಈಗ ನಡೆಯುತ್ತಿರುವ ರಾಜ್ಯ ವಿಧಾನ ಸಭೆಯ ಅಧಿವೇಶನದಲ್ಲಿ ಇತ್ತೀಚೆಗೆ ಮಾತನಾಡಿ, ರಾಜ್ಯ ಸರ್ಕಾರದ ವಿರುದ್ಧ ವರ್ಗಾವಣೆಗೆ ಸಂಬಂಧಿಸಿದಂತೆ ಬಾಂಬ್ ಸಿಡಿಸಿದ್ದಾರೆ. ಒಂದು ಪೆನ್ ಡ್ರೈವ್ ಅನ್ನು ಸದನದಲ್ಲಿ ಪ್ರದರ್ಶಿಸಿ, ಅಕ್ರಮ ವರ್ಗಾವಣೆಗಳಿಗೆ ಸಂಬಂಧಪಟ್ಟ ಹಾಗೆ ಮಹತ್ವದ ದಾಖಲೆಗಳು ಆ ಪೆನ್‌ಡ್ರೈವ್‌ನಲ್ಲಿ ಇದ್ದು ಇದನ್ನು ಬಹಿರಂಗ ಪಡಿಸುವ ಬೆದರಿಕೆ ಹಾಕಿದ್ದಾರೆ. ಕಲಾಪದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಇಂಧನ ಸಚಿವ ಕೆ.ಕೆ.ಜಾರ್ಜ್ ಪೆನ್‌ಡ್ರೈವ್ ಅನ್ನು ಸಭಾಧ್ಯಕ್ಷರಿಗೆ ನೀಡಿ, ಬಹಿರಂಗ ಮಾಡಿ ಎಂದು ಹೇಳಿದರೂ ಸಹ, ಸೂಕ್ತ ಸಮಯದಲ್ಲಿ ಅದನ್ನು ಬಿಡುಗಡೆಗೊಳಿಸುವುದಾಗಿ ಹೇಳಿ ನುಣುಚಿಕೊಂಡಿದ್ದಾರೆ.

ಒಂದು ವೇಳೆ ಅದರಲ್ಲಿರುವುದು ನಿಜವೇ ಆಗಿದ್ದರೆ, ಕುಮಾರಸ್ವಾಮಿಗಳು ಸಾರ್ವಜನಿಕವಾಗಿ ಅದನ್ನು ಬಿಡುಗಡೆಗೊಳಿಸಿ, ರಾಜ್ಯ ಸರ್ಕಾರದ ವಿರುದ್ಧ ತಾವು ಸಾರಿರುವ ಪೆನ್ ಡ್ರೈವ್ ಯುದ್ಧ ಸಾಚಾತನದ್ದು ಎಂದು ದೃಢಪಡಿಸಬಹುದಾಗಿತ್ತು. ಸಾಕ್ಷ್ಯವನ್ನು ಬಚ್ಚಿಡುವುದು ಕೂಡ ಒಂದು ಅಪರಾಧವಾಗುತ್ತದೆ. ಆದ್ದರಿಂದ ಕುಮಾರಸ್ವಾಮಿಯವರು ಪ್ರಚಾರ ಪಡೆಯುವ ಸಲುವಾಗಿ ಈ ರೀತಿ ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇನ್ನು ವರ್ಗಾವಣೆ ವಿಷಯಕ್ಕೆ ಬರುವುದಾದರೆ, ಪ್ರತಿ ವರ್ಷ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡುವುದು ಒಂದು ಸರ್ವೇ ಸಾಮಾನ್ಯ ಪ್ರಕ್ರಿಯೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗಲೂ ಸಹ, ಹಿರಿಯ ಅಧಿಕಾರಿಗಳ ವರ್ಗಾವಣೆ ಆಗುತ್ತದೆ. ಒಂದು ವೇಳೆ ವರ್ಗಾವಣೆಗಳಲ್ಲಿ ಅಕ್ರಮ ಅಥವಾ ಭ್ರಷ್ಟಾಚಾರ ನಡೆದಿದ್ದರೆ, ಸೂಕ್ತ ದಾಖಲೆಗಳೊಂದಿಗೆ ಅವುಗಳ ವಿರುದ್ಧ ಧ್ವನಿ ಎತ್ತುವುದು ಸರಿಯಾದ ಕ್ರಮ. ಕುಮಾರಸ್ವಾಮಿಯವರು ವಿರೋಧ ಪಕ್ಷದ ನಾಯಕರಲ್ಲದೇ ಹೋದರೂ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿರುವುದರಿಂದ ಸರ್ಕಾರ ದಾರಿ ತಪ್ಪಿದಾಗ ಅವುಗಳನ್ನು ಎತ್ತಿ ತೋರಿಸುವುದು ಸರಿಯಾದ ಕ್ರಮವೆನ್ನಬಹುದು. ಆದರೆ ಕುಮಾರಸ್ವಾಮಿಯವರು ತಾವು ರಾಜ್ಯ ಸರ್ಕಾರದ ವಿರುದ್ಧ ಮಾಡಿದ್ದ ಆರೋಪಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯದಿರುವುದು ಸರಿಯಲ್ಲವೆಂದು ಹೇಳಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶಿವಾನಂದ ಲಹರೀ

ಶ್ರೀ ಶಂಕರಾಚಾರ್ಯರು ಭಾರತದ ದಾರ್ಶನಿಕರಲ್ಲಿ ಅಗ್ರಗಣ್ಯರು. ಅದ್ವೈತ ಸಿದ್ಧಾಂತದ ಪ್ರತಿಪಾದಕರು. ಆದರೆ ಅವರು ದರ್ಶನ ಗ್ರಂಥಗಳನ್ನಷ್ಟೇ ಬರೆದು ವಿರಮಿಸಲಿಲ್ಲ. ಸಾಮಾನ್ಯ ಜನರಿಗಾಗಿ ಅನೇಕ ದೇವತಾ ಸ್ತೋತ್ರಗಳನ್ನು ಬರೆದರು. ಶಿವ, ವಿಷ್ಣು, ಗಣೇಶ, ಶಕ್ತಿ, ಸ್ಕಂದ ಮುಂತಾದ ಅನೇಕ ದೇವತೆಗಳ ಅದ್ವೈತ ಸ್ತೋತ್ರಗಳು ಅವರವೆಂದು ಹೇಳಲಾಗಿದೆ. ಅವುಗಳಲ್ಲಿ ಶಿವಾನಂದ ಲಹರಿ, ವಿಷ್ಣು ಪಾದಾದಿಕೇಶಾಂತ ಸ್ತೋತ್ರ, ಸೌಂದರ್ಯ ಲಹರೀ ಇತ್ಯಾದಿಗಳು ಉತ್ತಮ ಕಾವ್ಯ ಗುಣಗಳಿಂದ ಭೂಷಿತವಾಗಿವೆ. ಅವುಗಳಲ್ಲಿ ಶಿವಾನಂದಲಹರಿ ಅತ್ಯಂತ ಸುಂದರವೂ ಭಕ್ತಿಪೂರ್ಣವೂ ಆಗಿದೆ. ಕೇವಲ ಕಾವ್ಯವನ್ನಾಗಿ ನೋಡಿ ಅದನ್ನು ಓದಿದರೂ ಸಹೃದಯರಿಗೆ ಅದು ಆನಂದವನ್ನು ಕೊಡುತ್ತದೆ. ಅದರ ಮೊದಲನೆಯ ಪದ್ಯವನ್ನೇ ನೋಡೋಣ:

ಕಲಾಭ್ಯಾಂ ಚೂಡಾಲಂಕೃತ
ಶಶಿಕಲಾಭ್ಯಾಂ ನಿಜತಪಃ
ಫಲಾಭ್ಯಾಂ ಭಕ್ತೇಷು
ಪ್ರಕಟಿತಫಲಾಭ್ಯಾಂ ಭವತು ಮೇ।
ಶಿವಾಭ್ಯಾಮ್ ಅಸ್ತೋಕತ್ರಿಭುವನ
ಶಿವಾಭ್ಯಾಂ ಹೃದಿ ಪುನ–
ರ್ಭವಾಭ್ಯಾಮ್
ಆನಂದಸ್ಫುರದನುಭವಾಭ್ಯಾಂ
ನತಿರಿಯಮ್ ॥

ದ್ವಿವಚನವು ಸಂಸ್ಕೃತ ಭಾಷೆಯ ವೈಶಿಷ್ಟ್ಯ. ಇಬ್ಬರನ್ನು ಹೇಳುವಾಗ ಅದನ್ನೇ ಉಪಯೋಗಿಸಬೇಕು. ಚತುರ್ಥೀ ವಿಭಕ್ತಿಯಲ್ಲಿ ದ್ವಿವಚನದ ಪ್ರತ್ಯಯ 'ಭ್ಯಾಂ'. ಅದನ್ನೇ ಪಾರ್ವತೀ ಪರಮೇಶ್ವರರನ್ನು ಹೇಳಲು ಬಳಸಿಕೊಂಡು ಆಚಾರ್ಯ ಶಂಕರರು ಇಲ್ಲಿ ಅಪೂರ್ವ ಶೋಭೆಯನ್ನು ಈ ಪದ್ಯಕ್ಕೆ ತಂದಿದ್ದಾರೆ. ಇಲ್ಲಿ ಶಿಖರಿಣೀ ಛಂದಸ್ಸಿನ ಗಂಭೀರ ಸೊಬಗೂ ಸೇರಿಕೊಂಡಿದೆ.

ತಲೆಯ ಮೇಲೆ ಚಂದ್ರನ ಕಲೆಯನ್ನು ಧರಿಸಿಕೊಂಡಿರುವ ಪಾರ್ವತೀ ಪರಮೇಶ್ವರರು ಪರಸ್ಪರ ತಪಸ್ಸಿನ ಫಲವಾದವರು. ಎಂದರೆ ಪರಮೇಶ್ವರನ ತಪಸ್ಸಿನ ಫಲ ಪಾರ್ವತಿ. ಪಾರ್ವತಿಯ ತಪಸ್ಸಿನ ಫಲ ಪರಮೇಶ್ವರ. ಈ ಸೌಭಾಗ್ಯ ಬೇರೆ ಯಾರಿಗುಂಟು? ಅಷ್ಟೇ ಅಲ್ಲದೆ ಅವರಿಬ್ಬರೂ ಎಲ್ಲ ಭಕ್ತರಿಗೆ ಅಭೀಷ್ಟ ಫಲಗಳನ್ನು ಕೊಡುವವರು. ಶಿವನೂ ಶಿವೆಯೂ ಕೂಡಿಕೊಂಡಿರುವುದರಿಂದ ಸಮಸ್ತ ತ್ರಿಭುವನಗಳಿಗೆ ಮಂಗಳವನ್ನುಂಟು ಮಾಡುತ್ತಿದ್ದಾರೆ. ಅವರು ಎಲ್ಲಿದ್ದರೂ ಆನಂದಾನುಭವದಿಂದ ಸ್ಫುರಿಸುತ್ತಿರುತ್ತಾರೆ. ಅವರಿಗೆ ನಿತ್ಯವಾದ ಸತ್ಯವಾದ ನಮಸ್ಕಾರ ಎಂದು ಈ ಪದ್ಯದ ಸ್ಥೂಲಾಭಿಪ್ರಾಯ. ಶಿವನನ್ನೂ ಶಿವನ ಪ್ರಿಯೆ ಪಾರ್ವತಿಯೂ ಶಿವನೂ ಸಮಪ್ರಭಾವಶಾಲಿಗಳು. ಒಬ್ಬರು ಹೆಚ್ಚು, ಇನ್ನೊಬ್ಬರು ಕಮ್ಮಿ ಎಂಬುದಿಲ್ಲ. ಆದ್ದರಿಂದ ಇಬ್ಬರನ್ನೂ ಒಟ್ಟಿಗೆ ನಮಸ್ಕರಿಸಿದ್ದಾರೆ. ಇಂತಹ ಪದ್ಯವನ್ನು ರಚಿಸುವುದು ಸಿದ್ಧಹಸ್ತರಾದ ಕವಿಗಳಿಗೆ ಮಾತ್ರ ಸಾಧ್ಯ ಎನಿಸುತ್ತದೆ.

ಭಗವಂತನ ಅನುಗ್ರಹಕ್ಕೆ ಪಾತ್ರರಾಗಲು ಯಾವುದೋ ತೀರ್ಥದಲ್ಲಿ ಸ್ನಾನ ಮಾಡಬೇಕು, ವಿವಿಧ ವರ್ಣದ, ಬೇರೆ ಬೇರೆ ಪರಿಮಳದ ಹೂವುಗಳನ್ನು ಅರ್ಪಿಸಬೇಕು ಎಂಬುದೆಲ್ಲ ಸಾಮಾನ್ಯರ ಮಾತು. ನಿಜ ಭಕ್ತನು ಅರ್ಪಿಸುವುದು ತನ್ನ ಮನಸ್ಸನ್ನು ಎಂದು ಒಂದು ಪದ್ಯದಲ್ಲಿ ಆಚಾರ್ಯರು ಹೇಳಿದ್ದಾರೆ –

ಗಭೀರೇ ಕಾಸಾರೇ ವಿಶತಿ
ವಿಜನೇ ಘೋರವಿಪಿನೇ
ವಿಶಾಲೇ ಶೈಲೇ ಚ ಭ್ರಮತಿ
ಕುಸುಮಾರ್ಥಂ ಜಡಮತಿಃ।
ಸಮರ್ಪ್ಯೈಕಂ ಚೇತಃ
ಸರಸಿಜಮುಮಾನಾಥ ಭವತೇ
ಸುಖೇನಾವಾಸ್ಥಾತುಂ ಜನ ಇಹನ
ಜಾನಾತಿ ಕಿಮಹೋ॥

ಕಮಲದ ಹೂವೇ ಪೂಜೆಗಾಗಿ ಬೇಕೆಂದು ದಡ್ಡ ಬುದ್ಧಿಯವನು ಆಳವಾದ ಸರೋವರದಲ್ಲಿ ಇಳಿದು ಆ ಹೂವನ್ನು ತರುತ್ತಾನೆ. ಬೇರೆ ಬೇರೆ ಬಣ್ಣದ ಹೂವಿಗಾಗಿ ಅವನು ದೊಡ್ಡ ಬೆಟ್ಟಗಳ ಮೇಲೆ, ಭಯಂಕರವಾದ ಅರಣ್ಯದಲ್ಲಿ, ನಿರ್ಜನವಾದ ಕಾಡುಮೇಡಗಳಲ್ಲಿ ಅಲೆಯುತ್ತಾನೆ. ಆದರೆ ಭಗವಂತನಿಗೆ ಅವು ಬೇಕಿಲ್ಲ. ಮನಸ್ಸೆಂಬ ಕಮಲದ ಹೂವನ್ನು ಉಮಾಪತಿಗೆ ಸಮರ್ಪಿಸಿದರೆ ಸಾಕು. ಭಗವಂತನ ಶರಣದಲ್ಲಿ ಸುಖದಿಂದ ಇದ್ದು ಬಿಡಬಹುದು. ಇಷ್ಟು ಸರಳವಾದ ವಿಷಯವೂ ಜನರಿಗೆ ತಿಳಿಯದೇ?

ಮನುಷ್ಯನ ಬಂಧನಕ್ಕೆ ಕಾರಣವಾಗಿರುವುದು ಅವನ ಮನಸ್ಸೇ. ದೇವರಾಗಲಿ, ದೇವರ ಮಾಯೆಯಾಗಲಿ ಶುದ್ಧ ಮನಸ್ಸಿನವನನ್ನು ಬಂಧಿಸುವುದಿಲ್ಲ. ಚಂಚಲವಾದ ಮನಸ್ಸು ಕೋತಿಯಂತೆ. ಅದನ್ನು ಭಕ್ತಿಯೆಂಬ ಹಗ್ಗದಿಂದ ಕಟ್ಟಿ ಹಾಕಿದರೆ ಅದೇ ಮುಕ್ತಿಗೆ ಕಾರಣವಾಗುತ್ತದೆ. ಈ ವಿಷಯವನ್ನು ಆಚಾರ್ಯ ಶಂಕರರು ಎಷ್ಟು ಚೆನ್ನಾಗಿ ಹೇಳಿದ್ದಾರೆ. ಅವರು ಬಳಸಿರುವ ಪದಗಳಲ್ಲಿ ಕಪಿಯ ಚೇಷ್ಟೆ ಹೇಗೆ ವರ್ಣಿತವಾಗಿದೆ ಎಂದು ಈ ಕೆಳಗಿನ ಪದ್ಯದಲ್ಲಿ ನೋಡಬಹುದು.

ಸದಾ ಮೋಹಾಟವ್ಯಾಂ
ಚರತಿ, ಯುವತೀನಾಂ ಕುಚಗಿರೌ
ನಟತ್ಯಾಶಾ ಶಾಕಾಸ್ವಟತಿ
ಝಟಿತಿ ಸ್ವೈರಮಭಿತಃ।
ಕಪಾಲಿನ್ ಭಿಕ್ಷೋ ಮೇ
ಹೃದಯಕಪಿಮತ್ಯಂತ ಚಪಲಂ
ದೃಢಂ ಭಕ್ತ್ಯಾ ಬದ್ಧ್ವಾ
ಶಿವ ಭವದಧೀನಂ ಕುರು ವಿಭೋ ॥

ನನ್ನ ಮನಸ್ಸೆಂಬ ಕಪಿಯು ಯಾವಾಗಲೂ ಮೋಹದ ಕಾಡಿನಲ್ಲಿ ಅಲೆಯುತ್ತಿದೆ. ಯುವತಿಯರ ಮೊಲೆಗಳೆಂಬ ಬೆಟ್ಟಗಳ ಮೇಲೆ ಕುಣಿಯುತ್ತಿರುತ್ತದೆ. ಇಷ್ಟಾನುಸಾರವಾಗಿ ಸುತ್ತಲೂ ಸಂಚರಿಸುತ್ತದೆ. ಹೇ ಕಪಾಲಿ, ಭಿಕ್ಷು, ಹೀಗೆ ಅತ್ಯಂತ ಚಂಚಲವಾದ ಈ ನನ್ನ ಮನಸ್ಸೆಂಬ ಕೋತಿಯನ್ನು ಭಕ್ತಿಯಿಂದ ದೃಢವಾಗಿ ಕಟ್ಟಿ ಬಿಗಿದು ನಿನ್ನ ಅಧೀನವನ್ನಾಗಿ ಮಾಡಿಕೋ, ವಿಭುವೇ ಪ್ರಭುವೇ, ಇದೇ ನನ್ನ ಪ್ರಾರ್ಥನೆ.

ಈ ಪದ್ಯದಲ್ಲಿ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಜಿಗಿಯುವ ಕಪಿಯ ಸ್ವಭಾವವನ್ನು ಶಬ್ದಗಳಲ್ಲಿ ಪ್ರತಿಬಿಂಬಿಸಲು ಮೂರು ಟಕಾರಘಟಿತ ಪದಗಳನ್ನು ಉಪಯೋಗಿಸಿರುವುದು ಆಚಾರ್ಯರ ಭಾಷಾ ಪ್ರೌಢಿಮೆಯನ್ನು ತೋರಿಸುತ್ತದೆ. 'ಹೃದಯ ಕಪಿ' ಎಂಬ ರೂಪ ಕಾಲಂಕಾರವೂ ಅತ್ಯಂತ ಸಮುಚಿತ. ಮಾನವನ ಮನುಸ್ಸು ಭಗವಂತನಿಗೆ ಅಧೀನವಾದಾಗ ಅವನು ಮುಕ್ತಿಯೋಗ್ಯ ಎಂಬುದು ಇಲ್ಲಿ ಧ್ವನಿತವಾಗಿದೆ.

ಭಗವಾನ್ ಶಿವನು ಕಿರಾತವೇಷವನ್ನು ಧರಿಸಿದ್ದು ಪ್ರಸಿದ್ಧವಾಗಿದೆ. ಕಿರಾತರು ಬೇಟೆಯಾಡಿ ಮೃಗಗಳನ್ನು ಬಂಧಿಸುತ್ತಾರೆ. ಅಥವಾ ಕೊಲ್ಲುತ್ತಾರೆ. ಆದಿಕಿರಾತನಾದ ಪರಮೇಶ್ವರನನ್ನು ತನ್ನಲ್ಲಿಗೆ ಬರಬೇಕೆಂದು ಕೋರಿ ಶ್ರೀ ಶಂಕರಾಚಾರ್ಯರು ಮಾಡುವ ಪ್ರಾರ್ಥನೆ ಹೀಗಿದೆ–

ಮಾಗಚ್ಛ ತ್ವಮಿತಸ್ತತೋ ಗಿರಿಶ
ಭೋ ಮಯ್ಯೇವ ವಾಸಂ ಕುರು
ಸ್ವಾಮಿನ್ನಾದಿಕಿರಾತ ಮಾಮಕ
ಮನಃಕಾಂತಾರಸೀಮಾಂತರೇ।
ವರ್ತಂತೇ ಬಹುಶೋ ಮೃಗಾ
ಮದಜುಷೋ ಮಾತ್ಸರ್ಯಮೋಹಾದಯಃ
ತಾನ್ ಹತ್ವಾ
ಮೃಗಯಾವಿನೋದರುಚಿತಾಲಾಭಂ
ಚ ಸಂಪ್ರಾಪ್ಸ್ಯಸಿ॥

"ಬೆಟ್ಟಗಳಲ್ಲಿ ವಾಸಿಸುವ ಶಿವನೆ, ನೀನು ಅಲ್ಲಿ, ಇಲ್ಲಿ ವಾಸಕ್ಕಾಗಿ ಹೋಗಬೇಡ. ನನ್ನಲ್ಲೇ ವಾಸ ಮಾಡು. ಸ್ವಾಮಿ, ಆದಿಕಿರಾತ, ನನ್ನ ಮನಸ್ಸೆಂಬ ಕಾಡಿನ ಒಳಗೆ ಮಾತ್ಸರ್ಯ, ಮೋಹ ಮುಂತಾದ ಮದಿಸಿದ ಅನೇಕ ಮೃಗಗಳಿವೆ. ಅವುಗಳ ಬೇಟೆಯನ್ನು ಮಾಡಿ ಕೊಂದು ನೀನು ಮೃಗಯಾನಂದವನ್ನು ಪಡೆಯಬಹುದು"

ಮಾನವನ ಮನಸ್ಸಿನಲ್ಲಿ ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯ, ಮೋಹ ಮುಂತಾದ ಮೃಗಗಳು ನೆಲೆಸಿವೆ. ಧ್ಯಾನದಲ್ಲಿ ಭಗವಂತನನ್ನು ಆವಾಹಿಸಿಕೊಂಡು ಈ ದುಷ್ಟ ಮೃಗಗಳನ್ನು ಕೊಲ್ಲಬೇಕು ಅಥವಾ ಕೊಲ್ಲಿಸಬೇಕು. ಅದಕ್ಕಾಗಿ ಭಗವಂತನ್ನು ಆದಿಕಿರಾತ, ಮೃಗ ಬೇಟೆಗಾರ ಎಂದಿಲ್ಲಿ ಪುರಾಣಾನುಸಾರವಾಗಿ ಕಲ್ಪಿಸಲಾಗಿದೆ. ಮಹಾಭಾರತದ ವನಪರ್ವದಲ್ಲೂ ಕಿರಾತಾರ್ಜುನೀಯ ಪ್ರಸಂಗವು ವರ್ಣಿತವಾಗಿದೆ.

ಶ್ರೀ ಶೈಲದಲ್ಲಿ ಭ್ರಮರಾಂಬಾ ಸಮೇತನಾದ ಮಲ್ಲಿಕಾರ್ಜುನನ ರೂಪದಲ್ಲಿ ವಿರಾಜಿಸುವ ಶಿವನು ನಮಗೆಲ್ಲ ಸುಪರಿಚಿತ. ಅಕ್ಕ ಮಹಾದೇವಿಯ ಅಂಕಿತವಾಗಿರುವ ಚನ್ನಮಲ್ಲಿಕಾರ್ಜುನನೂ ಆ ಮಹಾದೇವನೇ. ಅವನನ್ನು ಒಂದು ಪದ್ಯದಲ್ಲಿ ಆಚಾರ್ಯ ಶಂಕರರು ಸ್ತುತಿಸಿದ್ದಾರೆ –

ಭೃಂಗೀಚ್ಛಾನಟನೋತ್ಕಟಃ
ಕರಿಮದಗ್ರಾಹೀ ಸ್ಫುರನ್ಮಾಧವಾಹ್ಲಾದೋ
ನಾದಯುತೋ ಮಹಾಸಿತವಪುಃ
ಪಂಚೇಷುಣಾ ಚಾದೃತಃ।
ಸತ್ಪಕ್ಷಃ ಸುಮನೋವನೇಷು ಸ
ಪುನಃ ಸಾಕ್ಷಾನ್ಮದೀಯೇ ಮನೋ–
ರಾಜೀವೇ ಭ್ರಮರಾಧಿಪೋ
ವಿಹರತಾಂ ಶ್ರೀ ಶೈಲವಾಸೀ ವಿಭುಃ॥

ಈ ಪದ್ಯದಲ್ಲಿ ಕವಿ ಶಂಕರರ ಪ್ರತಿಭೆ ಉತ್ತುಂಗ ಶಿಖರಕ್ಕೇರಿದೆ. ಇಲ್ಲಿರುವ ವಿಶೇಷಣಗಳು ಶ್ಲೇಷೆಯಿಂದ ಭ್ರಮರಕ್ಕೂ ಶಿವನಿಗೂ ಅನ್ವಯಿಸುವಂತೆ ಪದ್ಯವನ್ನು ಹೆಣೆಯಲಾಗಿದೆ. ಶ್ರೀಶೈಲದಲ್ಲಿ ವಾಸಿಸುವ ಶ್ರೀ ಮಲ್ಲಿಕಾರ್ಜುನನು ಭ್ರಮರಾಧಿಪ ಎಂದರೆ ಭ್ರಮರಾಂಬೆಯ ನಾಥ. ಅವನು ಭೃಂಗಿಯೆಂಬ ಗಣನ ಇಚ್ಛಾನುಸಾರವಾಗಿ ನಟನೆ ಮಾಡುತ್ತಾನೆ. ಹೆಣ್ಣು ಭೃಂಗವನ್ನು ಅನುಸರಿಸಿ ಭ್ರಮರವೂ ನರ್ತಿಸುವಂತೆ ತೋರುತ್ತದೆ. ಶಿವನು ಗಜಾಸುರನ ಮದವನ್ನು ಅಡಗಿಸಿದನು. ಭ್ರಮರವು (ದುಂಬಿಯು) ಆನೆಯ ಮದಜಲದ ಕಡೆಗೆ ನುಗ್ಗುತ್ತದೆ. ಮಾಧವ ಎಂದರೆ ವಿಷ್ಣು ಎಂದು ಒಂದು ಅರ್ಥ, ವಸಂತ ಮಾಸ ಎಂದು ಇನ್ನೊಂದು ಅರ್ಥ. ಶಿವನು ವಿಷ್ಣುವಿನ ಆನಂದಕ್ಕೆ ಕಾರಣ. ಭ್ರಮರವು ವಸಂತ ಋತುವಿನಲ್ಲಿ ಆಹ್ಲಾದವನ್ನು ಪಡೆಯುತ್ತದೆ.

ಮಹಾಸಿತವಪು, ಎಂಬುದಕ್ಕೆ ಶಿವಪಕ್ಷದಲ್ಲಿ ಬಿಳುಪಾದ ದೇಹವನ್ನು ಪಡೆದವನೆಂದರ್ಥ. ದುಂಬಿಯ ಪಕ್ಷದಲ್ಲಿ (ಮಹಾ + ಅಸಿತವಪು:) ಕಪ್ಪು ಬಣ್ಣದ ದೇಹವನ್ನುಳ್ಳದ್ದು ಎಂದು ಅರ್ಥ. ಪಂಚೇಷು ಎಂದರೆ ಐದು ಬಾಣಗಳನ್ನುಳ್ಳ ಮನ್ಮಥ. ಶಿವನು ಅವನನ್ನು ದಹಿಸಿದನು. ಭ್ರಮರವು ಮನ್ಮಥನ ಆದರಕ್ಕೆ ಪಾತ್ರವಾಗಿತ್ತು. ಸುಮನಸ್ ಎಂದರೆ ಒಳ್ಳೆಯ ಮನಸ್ಸನ್ನು ಹೊಂದಿದವರು ಎಂದು ಒಂದು ಅರ್ಥ. ಹೂವು ಎಂದು ಇನ್ನೊಂದು ಅರ್ಥ. ಶಿವನು ಎಲ್ಲ ಸಜ್ಜನರಿಗೆ ಪೂಜ್ಯ ಎಂಬುದು ಒಂದು ಅರ್ಥವಾದರೆ ದುಂಬಿಗೆ ಹೂವುಗಳು ಪ್ರಿಯ ಎಂದು ಇಲ್ಲಿ ಇನ್ನೊಂದು ಅರ್ಥ. ಹೀಗೆ ಶ್ಲೇಷೆಯಿಂದ ಆಚಾರ್ಯರು ಪದ್ಯವನ್ನು ರಚಿಸಿದ್ದಾರೆ. ಆ ಭ್ರಮರಾಧಿಪ ಶ್ರೀ ಶೈಲ ಮಲ್ಲಿಕಾರ್ಜುನನು ನನ್ನ ಮನಸ್ಸೆಂಬ ತಾವರೆ ಹೂವಿನಲ್ಲಿ ವಿಹರಿಸಲಿ ಎಂಬ ಪ್ರಾರ್ಥನೆ ಹೃದಯಂಗಮವಾಗಿದೆ.

ಬೇಡರ ಕಣ್ಣಪ್ಪ ಕಥೆ ಸುಪ್ರಸಿದ್ಧ. ಶಿವಾನಂದ ಲಹರಿಯ ಒಂದು ಪದ್ಯದಲ್ಲಿ ಶಂಕರಾಚಾರ್ಯರು ಆ ಕಥೆಯ ಪ್ರಸ್ತಾಪವನ್ನು ಮಾಡಿದ್ದಾರೆ.

ಮಾರ್ಗಾವರ್ತಿತಪಾದುಕಾ
ಪಶುಪತೇರಂಗಸ್ಯ ಕೂರ್ಚಾಯತೇ
ಗಂಡೂಷಾಂಬುನಿಷೇಚನಂ
ಪುರರಿಪೋರ್ದಿವ್ಯಾಭಿಷೇಕಾಯತೇ ।
ಕಿಂಚಿದ್‌ಭಕ್ಷಿತಮಾಂಸಶೇಷಕಬಲಂ
ನವ್ಯೋಪಹಾರಾಯತೇ
ಭಕ್ತಿಃ ಕಿಂನ ಕರೋತ್ಯಹೋ
ವನಚರೋ ಭಕ್ತಾವತಂಸಾಯತೇ॥

"ದಾರಿಯಲ್ಲಿ ತಿರುಗಾಡಲು ಬಳಸಿದ್ದ ಚಪ್ಪಲಿಯು ಶಿವಲಿಂಗಕ್ಕೆ ಬೀಸಣಿಗೆಯಾಯಿತು. ಬಾಯಿ ಮುಕ್ಕಳಿಸಿದ ನೀರು ಭಗವಂತನಿಗೆ ಅಭಿಷೇಕ ಜಲವಾಯಿತು. ಭಕ್ತನು ಕಚ್ಚಿ ತಿಂದ ಮಾಂಸದ ತುಂಡು ಆ ಪರಮೇಶ್ವರನಿಗೆ ಪರಮನೈವೇದ್ಯವಾಯಿತು. ಆಹಾ ! ಭಕ್ತಿ ಏನನ್ನು ಮಾಡಲಾರದು? ಕಾಡಿನಲ್ಲಿ ತಿರುಗಾಡುವ ಬೇಡನೇ ಭಕ್ತ ಶಿರೋಮಣಿಯಾದನಲ್ಲವೆ!

ಹೀಗೆ ಶಿವಾನಂದ ಲಹರಿಯಲ್ಲಿ ಶಂಕರರು ಶಿವಭಕ್ತಿಯ ಸರಳ ಸುಂದರ ನಿರೂಪಣೆಯನ್ನು ಮಾಡಿದ್ದಾರೆ. ಭಾಷ್ಯಾದಿಗಳನ್ನು ಓದುವ ಮಹಾತ್ಮರದು ಜ್ಞಾನಯೋಗ. ಶಿವಾನಂದ ಲಹರಿಯನ್ನು ಓದಿ ತನ್ಮಯತೆಯನ್ನು ಗಳಿಸುವವರದು ಭಕ್ತಿಯೋಗ. ಆಚಾರ್ಯರು ಎಲ್ಲರಿಗೂ ಮಾರ್ಗವನ್ನು ತೋರಿಸಿದ್ದಾರೆ. ಆದ್ದರಿಂದಲೇ ಅವರು ಪೂಜ್ಯರು.


ಶ್ರುತಿ ಸ್ಮೃತಿಪುರಾಣಾನಾಮಾಲಯಂ
ಕರುಣಾಲಯಮ್ ।
ನಮಾಮಿ ಭಗವತ್ಪಾದಶಂಕರಂ
ಲೋಕಶಂಕರಮ್ ॥

ಕರ್ತವ್ಯ ವೇಳೆ ಗೈರು ಹಾಜರಿ

ಕೆ.ಆರ್.ಆಸ್ಪತ್ರೆ ಅಧೀಕ್ಷಕ ಸೇರಿ 8 ಮಂದಿ ವಿರುದ್ಧ ಲೋಕಾಯುಕ್ತದಲ್ಲಿ ದೂರು

ಮೈಸೂರು, ಜು.13(ಎಂಕೆ)– ಕರ್ತವ್ಯದ ವೇಳೆಯಲ್ಲಿ ಹಾಜರಿರದ ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಸೇರಿದಂತೆ ಎಂಟು ಮಂದಿ ವೈದ್ಯರ ವಿರುದ್ಧ ರಾಜ್ಯ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಜು.9ರಂದು ಎಂಎಸ್‌ಬಿ ವಾರ್ಡ್ ನಂ.5ರಲ್ಲಿ ಅಂದು ಕರ್ತವ್ಯದಲ್ಲಿರಬೇಕಾದ ವಿಭಾಗ ಮುಖ್ಯಸ್ಥ ಡಾ.ಚಂದ್ರಶೇಖರ, ಸಹ ಪ್ರಾಧ್ಯಾಪಕ ಡಾ.ಲೋಕೇಶ್, ಹಿರಿಯ ನಿವಾಸಿ ವೈದ್ಯರಾದ ಡಾ.ನಿಶ್ಚಿತ, ಡಾ.ಕುಶಾಲ್ ಹಾಗೂ ತುರ್ತುಚಿಕಿತ್ಸಾ ಘಟಕದಲ್ಲಿ ಕರ್ತವ್ಯದಲ್ಲಿ ಇರಬೇಕಿದ್ದ ವೈದ್ಯರುಗಳಾದ ಡಾ.ಬಿ.ಎನ್. ಆನಂದರವಿ, ಡಾ.ದೀಪಾ, ಡಾ.ಆರ್.ಡಿ.ಮಂಜುನಾಥ್ ಅವರು ಸ್ಥಳದಲ್ಲಿ ಇರಲಿಲ್ಲವೆಂದು ಹಾಗೂ ಜವಾಬ್ದಾರಿ ವಹಿಸಬೇಕಾದ ವೈದ್ಯಕೀಯ ಅಧೀಕ್ಷಕ ಡಾ.ನಂಜುಂಡಸ್ವಾಮಿ ಕರ್ತವ್ಯದಲ್ಲಿ ನಿರ್ಲಕ್ಷತೆ ವಹಿಸಿದ್ದಾರೆ ಎಂದು ಕರುನಾಡ ಸೇವಕರು ಸಂಘಟನೆಯ ಮೈಸೂರು ವಿಭಾಗದ ಅಧ್ಯಕ್ಷ ಎಂ.ಬಿ.ನಾಗಣ್ಣಗೌಡ ಲೋಕಾಯುಕ್ತಕ್ಕೆ ದೂರು ದಾಖಲಿಸಿದ್ದಾರೆ. ವೈದ್ಯರು ಕರ್ತವ್ಯದ ಸ್ಥಳದಲ್ಲಿ ಹಾಜರಿರದೆ ರೋಗಿಗಳ ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ವೈದ್ಯರು ಸ್ಥಳದಲ್ಲಿ ಇಲ್ಲದ ಕುರಿತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಸೂಕ್ತ ಮಾಹಿತಿ ನೀಡದೆ ದಿಕ್ಕು ತಪ್ಪಿಸಿ ಸದರಿ ವೈದ್ಯರು ತುರ್ತುಚಿಕಿತ್ಸಾ ಘಟಕದಲ್ಲಿ ಇದ್ದಾರೆಂದು ಸುಳ್ಳು ಮಾಹಿತಿ ನೀಡಿದ್ದಾರೆ. ತುರ್ತುಚಿಕಿತ್ಸಾ ಘಟಕದಲ್ಲಿ ಪರಿಶೀಲಿಸಿದಾಗ ಅಲ್ಲಿಯೂ ಈ ವೈದ್ಯರು ಕಂಡುಬಂದಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ವಿವಿ ಕುಲಪತಿ ಪ್ರಕರಣ: ಆ.2ಕ್ಕೆ ವಿಚಾರಣೆ




ಮೈಸೂರು, ಜು.13(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ನೇಮಕಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವು ಸಂಬಂಧ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯನ್ನು ಆಗಸ್ಟ್ 2ಕ್ಕೆ ಮುಂದೂಡಲಾಗಿದೆ.

ಪ್ರೊ.ಲೋಕನಾಥ್ ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಅವರನ್ನು ಮೈಸೂರು ವಿವಿ ಕುಲಪತಿಯಾಗಿ ನೇಮಕ ಮಾಡಲಾಗಿದೆ. ಅವರ ಈ ನೇಮಕ ಸೂಕ್ತವಲ್ಲ ಎಂದು ಕುಲಪತಿ ರೇಸ್‌ನಲ್ಲಿದ್ದ ಪ್ರೊ.ಶರತ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ದಾವೆಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠ ಜೂ.21ರಂದು ತಡೆಯಾಜ್ಞೆ ನೀಡಿತ್ತು. ತಡೆಯಾಜ್ಞೆ ತೆರವುಗೊಳಿಸುವಂತೆ ಕೋರಿ ಸಲ್ಲಿಸಿದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡಿದ್ದ ಹೈಕೋರ್ಟ್ ಜು.13ಕ್ಕೆ ಮುಂದೂಡಿತ್ತು. ಆದರೆ ಇಂದು ವಿಚಾರಣೆಗೆ ಬರದೇ ಆ.2ಕ್ಕೆ ಮುಂದೆ ಹೋಗಿದೆ. ಪ್ರೊ.ಲೋಕನಾಥ್ ಪರ ವಕೀಲ ಅಶೋಕ್ ಹಾರನಹಳ್ಳಿ ಹಾಗೂ ಕುಲಪತಿ ರೇಸ್‌ನಲ್ಲಿದ್ದ ಪ್ರೊ.ಶರತ್ ಪರ ಹಿರಿಯ ವಕೀಲ ರವಿವರ್ಮಕುಮಾರ್ ವಕಾಲತು ವಹಿಸಿದ್ದಾರೆ.

ವಿಂಬಲ್ಡನ್ : ಬೋಪಣ್ಣ ಜೋಡಿಗೆ ಸೋಲು



ಲಂಡನ್: ಪ್ರತಿಷ್ಠಿತ ವಿಂಬಲ್ಡನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಜೋಡಿ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಪರಾಭವಗೊಂಡಿದೆ.

ಗುರುವಾರ ಸೆಮಿಫೈನಲ್‌ನಲ್ಲಿ ನಡೆದ ಪಂದ್ಯದಲ್ಲಿ ವೆಸ್ಲೆ ಕೂಲ್‌ವಾಫ್, ನೀಲ್ ಸ್ಕಪ್ಸ್ಕಿ ವಿರುದ್ಧ 7–5, 6–4 ನೇರ ಸೆಟ್‌ಗಳ ಅಂತರದಲ್ಲಿ ಬೋಪಣ್ಣ ಜೋಡಿ ಸೋಲನುಭವಿಸಿತು. ಆರಂಭದಿಂದಲೂ ಎದುರಾಳಿ ಜೋಡಿಯ ಆಕ್ರಮಣಕ್ಕೆ ತತ್ತರಿಸಿದ ಬೋಪಣ್ಣ ಜೋಡಿ ತಿರುಗೇಟು ನೀಡಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ನೇರ ಸೆಟ್‌ನಲ್ಲಿ ಪರಾಭವಗೊಂಡು ಬೋಪಣ್ಣ ಜೋಡಿ ಟೂರ್ನಿಯಿಂದ ಹೊರಬಿದ್ದಿತು.

ಮರ್ಕೆತಾ ವಾಂಡ್ರೋಸ್ತವಾ, ಆನ್ಸ್ ಜುಬರ್ ಫೈನಲ್‌ಗೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಮರ್ಕೆತಾ ವಾಂಡ್ರೋಸ್ತವಾ ಮತ್ತು ಆನ್ಸ್‌ಜುಬರ್ ಫೈನಲ್ ಪ್ರವೇಶಿಸಿದ್ದಾರೆ. ಗುರುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಮರ್ಕೆತಾ ವಾಂಡ್ರೋಸ್ತವಾ ಅಚ್ಚರಿಯ ಫಲಿತಾಂಶ ಒದಗಿಸಿದರು. ಎಲಿನಾ ಸ್ವಿಟೋಲಿನಾ ವಿರುದ್ಧ 6=3, 6–3 ನೇರ ಸೆಟ್‌ಗಳಲ್ಲಿ ಜಯಗಳಿಸಿ ಫೈನಲ್ ಪಂದ್ಯಕ್ಕೆ ಲಗ್ಗೆ ಹಾಕಿದರು.

ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಆನ್ಸ್‌ಜುಬರ್ ಮ್ಯಾರಥಾನ್ ಹೋರಾಟ ನಡೆಸಿ ಗೆಲುವಿನ ನಗೆ ಬೀರಿದರು. ಆರ್ಯನಾ ಸಬಲೆಂಕಾ ವಿರುದ್ಧ 6–7, 6–4, 6–3 ಸೆಟ್‌ಗಳಲ್ಲಿ ಜಯಗಳಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿದರು. ಮೊದಲ ಸೆಟ್ ಅನ್ನು 6–7 ಅಂತರದಲ್ಲಿ ಸೋತ ನಂತರ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಆನ್ಸ್‌ಜುಬರ್ ನಂತರದ ಎರಡೂ ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿದರು. ಮೂರು ಸೆಟ್‌ಗಳ ಆಟದಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ ಫೈನಲ್ ಪಂದ್ಯಕ್ಕೆ ಹಾರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com





ಸಂತೋಷ ಸಂಗೀತ
ಚಿತ್ರದ ಶೀರ್ಷಿಕೆ ಅನಾವರಣ

ಗಂಡ ಹೆಂಡತಿ ನಡುವೆ ನಡೆಯುವ ಘಟನೆಗಳನ್ನು ಇಟ್ಟುಕೊಂಡು ಸಿದ್ದು ಎಸ್. ಅವರು ಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ "ಸಂತೋಷ ಸಂಗೀತ". ಈ ಚಿತ್ರದಲ್ಲಿ ಅರ್ನವ್ ವಿನ್ಯಾಸ್ ಹಾಗೂ ರಾಣಿ ವರದ್ ನಾಯಕ – ನಾಯಕಿಯಾಗಿ ನಟಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೈಟಲ್ ಲಾಂಚ್ ಕಾರ್ಯಕ್ರಮ ನಡೆಯಿತು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರ ತಂಡದ ಸದಸ್ಯರು ಮಾಹಿತಿ ಹಂಚಿಕೊಂಡರು.

ನಾನು ಮೂಲತಃ ಎಂ.ಸಿ.ಎ. ಪದವಿಧರ. ಸಿನಿಮಾ ಪ್ರೇಮಿ. ವಾರಕ್ಕೊಂದು ಸಿನಿಮಾ ನೋಡುವವನು. ಚೆನ್ನಾಗಿರುವ ಸಿನಿಮಾ ನೋಡಿದಾಗ ನಾನೂ ಈ ರೀತಿಯ ಸಿನಿಮಾ ಮಾಡಬೇಕೆಂದು ಆಸೆ ಪಡುತ್ತಿದ್ದೆ. ಆ ಆಸೆ ಈ ಸಿನಿಮಾ ಮೂಲಕ ಈಡೇರಿದೆ. ಲಾಕ್‌ಡೌನ್ ಸಮಯದಲ್ಲಿ ಬರೆದ ಕಥೆಯನ್ನು ಈಗ ಸಿನಿಮಾ ರೂಪದಲ್ಲಿ ತಂದಿದ್ದೇನೆ. ನಾನೇ ನಿರ್ಮಾಣ ಹಾಗೂ ನಿರ್ದೇಶನ ಮಾಡಿದ್ದೇನೆ. ಈ ಚಿತ್ರದಲ್ಲಿ ಲವ್, ಕಾಮಿಡಿ, ವ್ಯಾಪಾರ ಹೀಗೆ ಎಲ್ಲಾ ಥರದ ಕಮರ್ಷಿಯಲ್ ಅಂಶಗಳಿವೆ. ಇದನ್ನು ಕಮರ್ಷಿಯಲ್ ಲವ್ ಜಾನರ್ ಸಿನಿಮಾ ಎನ್ನಬಹುದು. ನಿಜ ಜೀವನದಲ್ಲೂ ಪತಿ–ಪತ್ನಿಯಾದ ಅರ್ನವ್ ಹಾಗೂ ರಾಣಿ ತೆರೆಯ ಮೇಲೂ ನಾಯಕ–ನಾಯಕಿಯಾಗಿ ನಟಿಸಿರುವುದು ಈ ಚಿತ್ರದ ವಿಶೇಷ. ದೊಡ್ಡಣ್ಣ, ಅವಿನಾಶ್, ಲಯ ಕೋಕಿಲ, ಕವನ, ಅಮಿತ್, ಕಾಮಿಡಿ ಕಿಲಾಡಿಯ ಲೋಕೇಶ್ ಸೂರ್ಯ, ಮಡೆನೂರು ಮನು, ಹನೀಶ್ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ಮಾಡಿದ್ದೇವೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವುದಾಗಿ ಸಿದ್ದು ತಿಳಿಸಿದರು.

ಈ ಹಿಂದೆ ಹೊಂಬಣ್ಣ ಹಾಗೂ ಪ್ರೇಮಂ ಚಿತ್ರಗಳಲ್ಲಿ ನಟಿಸಿದ್ದೆ. ನನಗಿದು ಮೂರನೇ ಚಿತ್ರ ಎಂದು ಮಾತು ಆರಂಭಿಸಿದ ನಾಯಕ ಅರ್ನವ್ ವಿನ್ಯಾಸ್, ಈ ಚಿತ್ರದಲ್ಲಿ ನನ್ನದು ಒಬ್ಬ ಉದ್ಯಮಿಯ ಪಾತ್ರ ಎಂದು ಹೇಳಿದರು. ಗಂಡ – ಹೆಂಡತಿ ಇಬ್ಬರೂ ಒಂದೇ ಉದ್ಯಮದಲ್ಲಿದ್ದಾಗ ಏನೆಲ್ಲ ಸವಾಲುಗಳು ಎದುರಾಗುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ ಎಂದು ನಾಯಕಿ ರಾಣಿ ವರದ್ ಹೇಳಿದರು.

ಕವನ ಹಾಗೂ ಅಮಿತ್ ತಮ್ಮ ಪಾತ್ರದ ಬಗ್ಗೆ ಹೇಳಿಕೊಂಡರು. ಅತಿಥಿಗಳಾಗಿ ಆಗಮಿಸಿದ್ದ ಜೆ.ಪಿ.ನಗರದ ಮಾಜಿ ಕಾರ್ಪೊರೇಟರ್ ಚಂದ್ರಶೇಖರ್‌ರಾಜು "ಸಂತೋಷ ಸಂಗೀತ" ಚಿತ್ರತಂಡಕ್ಕೆ ಶುಭ ಕೋರಿದರು. ಪತ್ರಿಕಾಗೋಷ್ಠಿಗೂ ಮುನ್ನ ಚಿತ್ರದ ಮೇಕಿಂಗ್ ವೀಡಿಯೋ ಪ್ರದರ್ಶಿಸಲಾಯಿತು.

ಸೈಬರ್ ಕ್ರೈಮ್ ಹಿನ್ನೆಲೆಯ 'ಡೈಮಂಡ್ ಕ್ರಾಸ್'

ಈ ಹಿಂದೆ ನನ್ ಲೈಫಲಿ ಚಿತ್ರ ನಿರ್ದೇಶಿಸಿದ್ದ ರಾಮ್‌ದೀಪ್ ಈಗ ಸೈಬರ್ ಕ್ರೈಮ್ ಆಧಾರಿತ 'ಡೈಮಂಡ್ ಕ್ರಾಸ್' ಸಿನಿಮಾಗೆ ಆಕ್ಷನ್ ಕಟ್ ಹೇಳಿದ್ದಾರೆ. ಮನೀಶ್ ಅಂಡ್ ಮಿತ್ರ ಎಂಟರ್‌ಟೈನ್‌ಮೆಂಟ್ ಈ ಚಿತ್ರದ ಬಿಡುಗಡೆಯ ಜವಾಬ್ದಾರಿ ವಹಿಸಿಕೊಂಡಿದೆ. ಉದ್ಯಮಿ ಮನೀಶ್ ಹಾಗೂ ನಟ ಮಿತ್ರ ಸೇರಿ ಈ ಸಂಸ್ಥೆಯ ಮೂಲಕ ಸಿನಿಮಾ ನಿರ್ಮಾಣದ ಜೊತೆಗೆ ವಿತರಣೆ ಕೂಡ ಮಾಡಲಿದ್ದಾರೆ. ಈ ಚಿತ್ರದ ಟೀಸರ್ ಹಾಗೂ ಗ್ಲಿಂಪ್ಸ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು,

ನಿರ್ದೇಶಕ ರಾಮ್‌ದೀಪ್ ಮಾತನಾಡಿ, ಡಿಜಿಟಲ್ ತಂತ್ರಜ್ಞಾನವನ್ನು ಒಳ್ಳೆಯ ಕೆಲಸಕ್ಕೆ ಹಾಗೂ ಕೆಟ್ಟ ಕೆಲಸಕ್ಕೆ ಹೇಗೆಲ್ಲಾ ಬಳಸಿಕೊಳ್ಳಬಹುದು ಎಂಬುದನ್ನು ಈ ಚಿತ್ರದ ಮೂಲಕ ಹೇಳ ಹೊರಟಿದ್ದೇನೆ. ಈವರೆಗೆ ಬಂದಿರುವ ಸೈಬರ್ ಕ್ರೈಮ್ ಚಿತ್ರಗಳಿಗೂ ನಮ್ಮ ಚಿತ್ರಕ್ಕೂ ತುಂಬಾ ವ್ಯತ್ಯಾಸವಿದೆ, ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುತ್ತಿದ್ದೇವೆ ಎಂದರು. ವಿತರಣೆ ಮಾಡುತ್ತಿರುವ ಮನೀಶ್ ಮಾತನಾಡುತ್ತಾ ಮಿತ್ರ ನನ್ನ ಸ್ನೇಹಿತರು. ಒಂದು ಸಿನಿಮಾ ಮಾಡೋಣ ಅಂದಾಗ ಅವರು ಮುಂದೆ ಹಾಕುತ್ತಲೇ ಬಂದರು. ಈಗ ನನಗೆ ರಿವರ್ಸ್ ಸ್ವೈಲ್ ತೋರಿಸಿದ್ದಾರೆ. ಮೊದಲು ಚಿತ್ರದ ಮಾರ್ಕೆಟಿಂಗ್ ಮಾಡುವುದು ಹೇಗೆಂದು ಅರಿತುಕೊಂಡು ನಂತರ ನಿರ್ಮಾಣಕ್ಕಿಳಿಯುವಂತೆ ಹೇಳಿದ್ದಾರೆ. ಈ ಸಿನಿಮಾ ಟೆಕ್ನಿಕಲಿ ಸೌಂಡ್ ಮಾಡುತ್ತದೆ ಎಂದು ಹೇಳಿದರು. ರೋಜರ್ ನಾರಾಯಣ್, ರಜತ್ ಅಣ್ಣಪ್ಪ, ಮನು ಹಾಗೂ ರೂಪಿಕಾ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ನಾಯಕಿ ರೂಪಿಕಾ ಮಾತನಾಡುತ್ತಾ ನನ್ನ ಇಷ್ಟು ವರ್ಷದ ಸಿನಿಮಾ ಅನುಭವದಲ್ಲಿ ಈ ಚಿತ್ರದ ಕಥೆ ತುಂಬಾ ಹೊಸದು, ಸಿನಿಮಾ ಈ ಹಂತಕ್ಕೆ ಬರಲು ನಿರ್ದೇಶಕ ರಾಮ್‌ದೀಪ್ ಅವರೇ ಕಾರಣ. ಈ ಚಿತ್ರದಲ್ಲಿ ನಾನು ಡಾ.ಬೆಲ್ಲಾ ಜೋಸೆಫ್ ಎಂಬ ಪಾತ್ರ ಮಾಡಿದ್ದೇನೆ ಎಂದರು. ಲೇಖನ್ ಅವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದರೆ, ಹಿನ್ನೆಲೆ ಸಂಗೀತವನ್ನು ಅನಿಶ್ ಚೆರಿಯನ್ ನಿರ್ವಹಿಸಿದ್ದಾರೆ, ರಾಮಚಂದ್ರಬಾಬು ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಸಂತೋಷ್ ರಾಧಾಕೃಷ್ಣನ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಅಭಿಮಾನಿಗಳ ಸಮ್ಮುಖದಲ್ಲಿ 'ಘೋಸ್ಟ್' ಟೀಸರ್ ಬಿಡುಗಡೆ

ಜುಲೈ 12ರಂದು ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅವರ ಹುಟ್ಟು ಹಬ್ಬದ ದಿನ ಅವರ ಅಭಿಮಾನಿಗಳಿಗೆ ಖುಷಿಯ ಮೇಲೆ ಖುಷಿ. ಶಿವಣ್ಣ ಅಭಿನಯದ 'ಘೋಸ್ಟ್' ಚಿತ್ರದ ಟೀಸರ್ ಕೂಡ ಅಂದೆ ಬಿಡುಗಡೆಯಾಗಿದೆ. ಬೆಂಗಳೂರಿನ ಸಂತೋಷ್ ಥಿಯೇಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನೆರೆದಿದ್ದ ಸಾವಿರಾರು ಅಭಿಮಾನಿಗಳ ಸಮ್ಮುಖದಲ್ಲಿ ಶ್ರೀನಿ ಅವರ ನಿರ್ದೇಶನದ ಘೋಸ್ಟ್ ಚಿತ್ರದ ಬಿಗ್ ಡ್ಯಾಡಿ ವಿಡಿಯೋ ಟೀಸರ್ ರಿಲೀಸಾಯಿತು. ಕನ್ನಡ ಸೇರಿದಂತೆ ಮೂರು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ, ರಾಷ್ಟ್ರಪ್ರಶಸ್ತಿ ವಿಜೇತ ಸಂದೇಶ್ ನಾಗರಾಜ್ (MLC) ಅರ್ಪಿಸುವ, ಸಂದೇಶ್ ಎನ್ ನಿರ್ಮಿಸುತ್ತಿರುವ ಹಾಗೂ ಶ್ರೀನಿ ಅವರ ನಿರ್ದೇಶನವಿರುವ ಈ ಚಿತ್ರದ ಚಿತ್ರೀಕರಣ ಈಗಾಗಲೇ ಮುಕ್ತಾಯವಾಗಿದೆ. ಶಿವರಾಜಕುಮಾರ್, ಅನುಪಮ್ ಖೇರ್, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್ ಇತರರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.



ದೇವನ ಸೈಕಲ್ ಕನಸು ಟ್ರೈಲರ್‌ನಲ್ಲಿ ನನಸು...

ಪ್ರತಿಷ್ಠಿತ ಕಾನ್ಸ್ ಸೇರಿದಂತೆ ಮೂವತ್ತಕ್ಕೂ ಅಧಿಕ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ಮಕ್ಕಳ ಚಿತ್ರ ದೇವರ ಕನಸು ಜುಲೈ 21 ರಂದು ಬಿಡುಗಡೆಯಾಗಲಿದೆ.

ಸುರೇಶ್ ಲಕ್ಕೂರ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ "ದೇವರ ಕನಸು" ಚಿತ್ರದ ಟ್ರೇಲರ್‌ಗೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಚಾಲನೆ ನೀಡಿ ಚಿತ್ರತಂಡಕ್ಕೆ ಶುಭ ಕೋರಿದರು. ಪಿ.ಆರ್.ಕೆ ಆಡಿಯೋ ಮೂಲಕ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದೆ.

ನ್ಯೂಯಾರ್ಕ್ ಫಿಲಂ ಅಕಾಡೆಮಿಯಲ್ಲಿ ಅಧ್ಯಯನ ಮಾಡಿದ ನಂತರ ಮೊದಲ ಬಾರಿಗೆ ನಿರ್ದೇಶನ ಮಾಡಿರುವ ಸುರೇಶ್ ಲಕ್ಕೂರ್, ಮಾತನಾಡುತ್ತಾ "ದೇವರ ಕನಸು" ನಮ್ಮ ಚಿತ್ರವು ಪ್ರತಿಷ್ಠಿತ ಕಾನ್ಸ್ ಫಿಲಂ ಫೆಸ್ಟಿವಲ್ ಸೇರಿದಂತೆ ಅನೇಕ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ವಿಮರ್ಶಕರಿಂದ ಪ್ರಶಂಸೆ ಪಡೆದುಕೊಂಡಿದೆ. "ದೇವ" ಎಂಬ ಬಾಲಕನ ಸೈಕಲ್ ಕನಸಿನ ಸುತ್ತ ನಡೆಯುವ ಕಥೆಯಿದು. ಈ ಪಾತ್ರದಲ್ಲಿ ಮಾಸ್ಟರ್ ದೀಪಕ್ ಅಭಿನಯಿಸಿದ್ದಾರೆ. ಈ ಹುಡುಗ ಕಾಣುವ ಕನಸು ಈಡೇರುವುದೋ, ಇಲ್ಲವೋ? ಎನ್ನುವುದೇ ಈ ಚಿತ್ರದ ಕಥಾಹಂದರ. ದೀಪಕ್, ಅಮೂಲ್ಯ, ಅಋಷಿ ವೇದಿಕ ಹಾಗೂ ಮಾಕ್ ಮಣಿ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ ಎಂದರು.


ನಿರ್ಮಾಪಕರಾದ ಜಯ್ ಕುಮಾರ್, ಶೇಖರ್, ಕಥೆ ಬರೆದಿರುವ ಸುನೀಲ್ ರಾವ್, ಹಾಡುಗಳು ಹಾಗೂ ಸಂಭಾಷಣೆ ರಚಿಸಿರುವ ಲಿಂಗರಾಜ್ ಇತಿಹಾಸ, ಸಂಗೀತ ನಿರ್ದೇಶಕ ಸ್ಯಾಂಡಿ ಹಾಗೂ ಚಿತ್ರದಲ್ಲಿ ನಟಿಸಿರುವ ಮಾಸ್ಟರ್ ದೀಪಕ್, ಬೇಬಿ ಅಮೂಲ್ಯ, ಅರುಷಿ ವೇದಿಕ, ಮಾಕ್ ಮಣಿ ಇತರರು ಚಿತ್ರ ಕುರಿತಂತೆ ಮಾತನಾಡಿದರು.

'ಮಧುರಕಾವ್ಯ' ಟ್ರೈಲರ್ ಬಿಡುಗಡೆ

ಒಂದೊಳ್ಳೆ ಪ್ರಯತ್ನ ಮಾಡಿದಾಗ ಒಳ್ಳೆಯ ಮನಸುಗಳೂ ಕೈಜೋಡಿಸುತ್ತವೆ. ಆಯುರ್ವೇದ ಚಿಕಿತ್ಸೆಯ ಅಳಿವು ಉಳಿವಿನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲೆಂದೇ ಚಲನಚಿತ್ರ ನಿರ್ದೇಶನ ಮಾಡಿರುವ ಮಧುಸೂದನ್ ಅವರಿಗೆ ಹಿರಿಯ ನಟ ಡೈನಾಮಿಕ್ ಸ್ಟಾರ್ ದೇವರಾಜ್ ಅವರು ಸಹಕಾರ ನೀಡಿದ್ದಾರೆ. ಆಯುರ್ವೇದದ ಪ್ರಾಮುಖ್ಯತೆಯನ್ನು ಜನರಿಗೆ ತಿಳಿಸಲೆಂದೇ, ಸ್ವತಃ ಆಯುರ್ವೇದ ವೈದ್ಯರಾದ ಮಧುಸೂದನ್ ಅವರು 'ಮಧುರ ಕಾವ್ಯ' ಎಂಬ ಚಲನಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಜೊತೆಗೆ ಪ್ರಮುಖ ಪಾತ್ರದಲ್ಲೂ ಸಹ ಅಭಿನಯಿಸಿದ್ದಾರೆ. ಈ ಚಿತ್ರದ ಟ್ರೈಲರ್ ಬಿಡುಗಡೆ ಮಾಡಿ ನಂತರ ಮಾತನಾಡಿದ ದೇವರಾಜ್, ಎಲ್ಲೂ ಸುಳಿವನ್ನು ಬಿಟ್ಟುಕೊಡದೆ ಟ್ರೈಲರನ್ನು ಇಂಟರೆಸ್ಟಿಂಗ್ ಆಗಿ ಮಾಡಿದ್ದಾರೆ. ನಿರ್ದೇಶಕರು ಆಯುರ್ವೇದ ಡಾಕ್ಟರ್ ಅಂತ ಕೇಳಿ ತುಂಬಾ ಸಂತೋಷವಾಯಿತು, ಕಥೆ ಬಗ್ಗೆ ಕೇಳಿದೆ, ನಿಜಕ್ಕೂ ಒಳ್ಳೆಯ ಆಲೋಚನೆ. ಅಲೋಪತಿ ಬಗ್ಗೆ ಮುಂಚೆ ಅದೆಷ್ಟು ನಂಬಿಕೆ ಇತ್ತು. ಅದೀಗ ಕಡಿಮೆಯಾಗ್ತಾ ಇದೆ. ಆಯುರ್ವೇದ ಬಗ್ಗೆ ಕುತೂಹಲ ಜಾಸ್ತಿಯಾಗಿದೆ. ಜನ ಕೂಡ ಅತ್ತ ವಾಲಿದ್ದಾರೆ. ಇವರ ಇಡೀ ಫ್ಯಾಮಿಲಿ ನಾಟಿ ವೈದ್ಯರು ಅಂತ ಗೊತ್ತಿರಲಿಲ್ಲ. ಅದನ್ನೇ ಮುಂದುವರೆಸಿಕೊಂಡು ಹೋಗಿ ಎಂದು ಶುಭ ಹಾರೈಸಿದರು.

ನಿರ್ದೇಶಕ ಮಧುಸೂದನ್ ಮಾತನಾಡುತ್ತ ಹಣಕೋಸ್ಕರ ಕಂಪನಿಗಳು ಜನರನ್ನು ಯಾವ ರೀತಿ ಮೋಸ ಪಡಿಸುತ್ತಾರೆ ಎಂದು ನಮ್ಮ ಚಿತ್ರದಲ್ಲಿ ಹೇಳಿದ್ದೇವೆ. ಆಯುರ್ವೇದದಲ್ಲಿ ಸರ್ವರೋಗಗಳಿಗೂ ಪರಿಹಾರವಿದೆ. ಹಣ ಎಂಬುದನ್ನು ಬದಿಗಿಟ್ಟು ಸಮಾಜ ಸೇವೆ ಅಂತ ಈ ಸಿನಿಮಾ ಮಾಡಿದ್ದೇವೆ. ಎಲ್ಲರೂ ಬಂದು ನೋಡಿ, ತಿಳಿದುಕೊಳ್ಳಲಿ ಅನ್ನುವುದೇ ನಮ್ಮ ಉದ್ದೇಶ ಎಂದು ಹೇಳಿದರು.

ಸಿನಿಪದಬಂಧ–482



ಹೆಸರು ____________________

ವಿಳಾಸ ____________________

ದೂರವಾಣಿ ಸಂಖ್ಯೆ ____________________



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 481ರ ಉತ್ತರ

ಓ	ವಿ	ಯ	■	■	ಆ	■	■	■	■	ಕ
ನ	■	■	■	ಹೊ	ದಿ	ಸಿ	ಬ	ರೆ	ಯಿ	ರಿ
ನ್ನ	■	ಜ	■	■	ಮಾ	■	ರ್ಥಿ	■	■	ಚಿ
ನ	ಗು	ನ	ಗು	ತಾ	ನ	ಲಿ	■	■	ವೀ	ರ
ಲ್ಲೆ	■	ನಾ	■	■	ವ	■	■	ಪ	■	ತೆ
■	■	ಯ	ಶೋ	ಧೆ	■	ರಾ	ಮ	ಕ್ಕ	■	■
ಶ್ರೀ	■	ಕ	■	■	ಐ	■	■	ದ್ಮ	■	ಸೋ
ಮಂ	ಡ್ಯ	■	■	ಎ	ದು	ರು	ಮ	ನೆ	ಮೀ	ನಾ
ಜು	■	ಡು	■	■	ಬೆ	■	■	ಲಿ	■	ಲಿ
ನಾ	ಗ	ಕಾ	ಳ	ಭೈ	ರ	ವ	■	■	■	ಬೇಂ
ಥ	■	■	■	■	ಳು	■	■	ಏ	ನೊ	ದ್ರೆ

ವಿಜೇತರು: ಭಾಗ್ಯಲಕ್ಷ್ಮಿ ಹೆಚ್.ಎ, ನಂ.40, 2ನೇ ಮೇನ್, 1ನೇ ಕ್ರಾಸ್, ರೈಲ್ವೆ ಲೇಔಟ್, ಬೋಗಾದಿ, ಮೈಸೂರು.

ಎಡದಿಂದ ಬಲಕ್ಕೆ

1. ಹಲವು ಕಥಾಹಂದರಗಳ "ಮಿಶ್ರಣ" ಕಿಕ್ಕೇರಿಸಿದೆ 3
4. ಕಮಲ್ ತನ್ನ ಪ್ರೇಯಸಿ ಶ್ರೀಪ್ರಿಯಳನ್ನು ಕರೆದ ಬಗೆ ! 7
7. ಸತ್ಯರಾಜ್ – ಶಿವರಾಜ್ – ಸುಂದರ್ ರಾಜ್ 7
8. ಕವಿತಾ ಲಂಕೇಶ್ ಅವರು ಬೀರಿದ "ಛಾಯೆ" 2
10. ಹುಲಿ ಜಾತಿಯ ಚಿಕ್ಕ ಪ್ರಾಣಿ ತೆರೆಯ ಮೇಲೂ ಅಡ್ಡಾಡಿದೆ 3
11. ರಂಭೆ ಊರ್ವಶಿ ಜೊತೆ ಬಂದಾಕೆ ಇಲ್ಲಿ ತಿರುಗಿದ್ದಾಳೆ 3
15. ಈ ನಟಿ ನಗ್ನಳಲ್ಲ ಆದರೂ ಹತ್ತಿರದಲ್ಲೇ ಇದ್ದಾಳೆ 2
16. ರಮೇಶ್–ಅನುಪ್ರಭಾಕರ್ ಅಭಿನಯಕ್ಕೆ ಸೀತಾರಾಂ ಕಾರಂತ್ ನಿರ್ದೇಶನವಿದೆ 7
18. ನಾಡಿನ ಹೆಮ್ಮೆಯ ಕುವರ ನಮ್ಮ ವಿಷ್ಣುವರ್ಧನ್! 7
19. ದುಂಬಿಯ ಮಧುರ ಧ್ವನಿ 3

ಮೇಲಿನಿಂದ ಕೆಳಕ್ಕೆ

1. ಈ ಸಿನಿಮಾದ ಶೀರ್ಷಿಕೆಯ ಅಡಿಬರಹ "ಇದು ಕೇವಲ ಆಭರಣವಲ್ಲ" 5
2. ನಿರ್ದೇಶಕ ರಾಜ್ ಕಿಶೋರ್ ಅವರ ಶ್ರೀಗಂಧ 5
3. ಕಾಲ್ ಮಾಡಿದ ಭಾವನಾಳಿಗೆ ಸಂಖ್ಯೆ ತಪ್ಪಾಗಿದೆ ! 5
5. "ನಾ ಪ್ರೇಮದ ಪೂಜಾರಿ...", ಹಾಡಿನ ಇತ್ತೀಚಿನ ಚಿತ್ರ 2
6. ಈತನೇ ಕನ್ನಡದ ಸುಪ್ರೀಂ ಹೀರೋ ! 5
9. ಪ್ರೇಮ ಪ್ರಸಂಗದ "ಪರಮೇಶಿ" 5
12. ಕೆ. ಎಸ್. ಎಲ್. ಸ್ವಾಮಿ ಅವರ "ಕಾಡು ದೇವತೆ" 5
13. ಪ್ರಾಣಿಯೊಂದರ ಊರಿಗೆ ಕುಮಾರ್ ಗೋವಿಂದ್ ಅಭಿನಯವಿದೆ 5
14. ಯೋಗರಾಜ್ ಭಟ್ ಹೇಳಿದಂತೆ ಕಟ್ಟಿದ ಮನೆ ಹೇಗಿರಬೇಕು !? 5
17. ಅನೂಪ್ ರೇವಣ್ಣ – ರೀತಿಕ್ಷಾ ಅಭಿನಯದ ಚಿತ್ರ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಸರ್ಕಾರಿ ಜಾಗದಲ್ಲಿ ಅಕ್ರಮ ವಾಣಿಜ್ಯ ಸಮುಚ್ಚಯ ನಿರ್ಮಾಣ

ಕಾಮಗಾರಿ ತಡೆಗೆ ಆಗ್ರಹಿಸಿ ಕರವೇ ಪ್ರತಿಭಟನೆ



ಕೆ.ಆರ್.ಪೇಟೆ, ಜು.13– ತಾಲೂಕಿನ ಹೊನ್ನೇನಹಳ್ಳಿ ಸರ್ವೆ ನಂ.70ರ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ವಾಣಿಜ್ಯ ಸಮುಚ್ಚಯ ನಿರ್ಮಾಣ ಮಾಡಲಾಗುತ್ತಿದ್ದು, ಕೂಡಲೇ ಕಾಮಗಾರಿ ನಿಲ್ಲಿಸಬೇಕೆಂದು ಒತ್ತಾಯಿಸಿ ಕರವೇ (ನಾರಾಯಣಗೌಡ ಬಣ) ಕಾರ್ಯಕರ್ತರು ಪಟ್ಟಣದ ಮಿನಿ ವಿಧಾನ ಸೌಧದ ಎದುರು ಪ್ರತಿಭಟನೆ ನಡೆಸಿದರು.

ತಾಲೂಕು ಭೂ ದಾಖಲೆಗಳ ಸಹಾಯಕ ನಿಬಂಧಕ ಪರಶಿವ ನಾಯಕ್ ಅವರು, ಸರ್ಕಾರಿ ಆಸ್ತಿ ಅಳತೆ ಮಾಡಿ ಜಾಗ ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಅಕ್ರಮ ಆಸ್ತಿ ಒತ್ತುವರಿ ತಡೆಯಲು ನಿರ್ಲಕ್ಷ್ಯ ವಹಿಸಿದ್ದಾರೆ. ಈ ಕುರಿತು ಮನವಿ ಮಾಡಿದರೂ ಕ್ರಮ ವಹಿಸಿಲ್ಲ ಎಂದು ಕರವೇ ತಾಲೂಕು ಘಟಕದ ಅಧ್ಯಕ್ಷ ಹೊನ್ನೇನಹಳ್ಳಿ ವೇಣು ಮತ್ತು ಜಿಲ್ಲಾ ಘಟಕದ ಉಪಾಧ್ಯಕ್ಷ ಸಿ.ಬಿ. ಚೇತನ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಭೇಟಿಗೆ ಬಂದಿದ್ದ ಜಿಲ್ಲಾಧಿಕಾರಿ ಡಾ.ಕುಮಾರ್ ಪ್ರತಿಭಟನಾಕಾರರೊಂದಿಗೆ ಮಾತನಾಡಿ, ಸರ್ಕಾರಿ ಆಸ್ತಿ ಸಂರಕ್ಷಣೆ ನಮ್ಮ ಕರ್ತವ್ಯ. ಈ ಬಗ್ಗೆ ಅಸಡ್ಡೆ ತೋರುವುದು ಕರ್ತವ್ಯ ಲೋಪವಾಗುತ್ತದೆ. ಹೀಗಾಗಿ ಕಟ್ಟಡ ನಿರ್ಮಿಸುತ್ತಿರುವ ಸ್ಥಳ ಸರ್ಕಾರಿ ಆಸ್ತಿಯೇ ಇಲ್ಲವೇ ಎಂಬುದನ್ನು ಪತ್ತೆ ಹಚ್ಚಲು ಎಷ್ಟು ದಿನ ಬೇಕು? ಈ ಕೂಡಲೇ ಅಳತೆ ಕಾರ್ಯವನ್ನು ತಹಸೀಲ್ದಾರ್ ನೇತೃತ್ವದಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನಡೆಸಿ ಸರ್ಕಾರಿ ಆಸ್ತಿ ಸಂರಕ್ಷಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಸರ್ವೆ ಕಾರ್ಯವನ್ನು ಕೂಡಲೇ ಮುಗಿಸಿ ಗಡಿ ಗುರುತಿಸಬೇಕು. 4 ದಿನಗಳ ಒಳಗೆ ಈ ಕಾರ್ಯ ಸಂಪೂರ್ಣಗೊಳ್ಳಬೇಕು. ಸರ್ಕಾರಿ ಆಸ್ತಿ ಒತ್ತುವರಿ ಮಾಡಿಕೊಂಡಿರುವುದು ಕಂಡು ಬಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ವಾಣಿಜ್ಯ ಸಮುಚ್ಚಯ ನಿರ್ಮಾಣಕ್ಕೆ ಮುರುಕನಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ನೀಡಿರುವ ಪರವಾನಗಿ ತಡೆಹಿಡಿಯಬೇಕು ಎಂದು ಸೂಚಿಸಿದರು.

ಇದೇ ವೇಳೆ ಬೆಂಗಳೂರು– ಜಲಸೂರು ರಾಜ್ಯ ಹೆದ್ದಾರಿಗೆ ಭೂಮಿ ನೀಡಿರುವ ರೈತರಿಗೆ ಕಡಿಮೆ ಪರಿಹಾರ ನೀಡಲಾಗಿದೆ. ನಮ್ಮ ಭೂಮಿಗೆ ವೈಜ್ಞಾನಿಕವಾಗಿ ಪ್ರಸ್ತುತ ನಡೆಯುತ್ತಿರುವ ಮಾರುಕಟ್ಟೆ ದರ ನೀಡಬೇಕು ಎಂದು ರೈತರು ಒತ್ತಾಯಿಸಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾಧಿಕಾರಿ ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ್ದೇನೆ. ಈಗಾಗಲೇ ಕಂಪನಿ ಮತ್ತು ರೈತರ ನಡುವೆ ವ್ಯಾಪಾರವಾಗಿ ದಾಖಲೆಯಾಗಿದೆ. ಈ ಸಂದರ್ಭ ಏನೂ ಮಾಡಲು ಬರುವುದಿಲ್ಲ. ಮಾರಾಟ ಮಾಡಿದಾಗ ಇದ್ದ ಬೆಲೆಯೇ ಅಂತಿಮವಾಗುವುದರಿಂದ ಬೇರೆ ದಾರಿ ಇಲ್ಲ. ರೈತರು ಸಿವಿಲ್ ನ್ಯಾಯಾಲಯಕ್ಕೆ ಹೋಗಬಹುದು. ಜಿಲ್ಲಾಡಳಿತ ಈ ನಿಟ್ಟಿನಲ್ಲಿ ರೈತರ ನೆರವಿಗೆ ಬರುತ್ತದೆ ಎಂದರು. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಮುಖಂಡರು, ತಾಲೂಕು ಕಚೇರಿ ಭ್ರಷ್ಟಾಚಾರದ ಆಗರವಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ರಾಜಸ್ವ ನಿರೀಕ್ಷಕರು ಒಂದೇ ಸ್ಥಳದಲ್ಲಿ ಬೇರು ಬಿಟ್ಟಿದ್ದು ಲಂಚವಿಲ್ಲದೆ ಕೆಲಸ ಮಾಡುತ್ತಿಲ್ಲ. ಫೋನ್ ಪೇ ಮೂಲಕ ಲಂಚ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ಈ ವೇಳೆ ಕೆ.ಆರ್.ಪೇಟೆ ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗಂಗಾಧರ್, ಪುರಸಭಾ ಸದಸ್ಯರಾದ ಪಂಕಜ ಪ್ರಕಾಶ್, ಮಧುಶ್ರೀ, ಕರವೇ ತಾಲೂಕು ಉಪಾಧ್ಯಕ್ಷ ಶ್ರೀನಿಧಿ ಶ್ರೀನಿವಾಸ್, ತಾಲೂಕು ಕಾರ್ಯದರ್ಶಿ ಟೆಂಪೋ ಶ್ರೀನಿವಾಸ್, ಯುವ ಘಟಕದ ಅಧ್ಯಕ್ಷ ಆನಂದ್, ಮದನ್ ಗೌಡ, ಸ್ವಾಮಿ, ಪರಮೇಶ್, ಮುಖಂಡರಾದ ಹೊಸಹೊಳಲು ಗೋಪಿ, ನಂಜುಂಡ, ಚನ್ನೇಗೌಡ ಸೇರಿದಂತೆ ನೂರಾರು ಕರವೇ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಪ್ರತಿಭಟನೆಯಲ್ಲಿದ್ದರು.

ಹೊರಗುತ್ತಿಗೆ ನೌಕರರ ವಜಾ ಖಂಡಿಸಿ ಅರೆಬೆತ್ತಲೆ ಪ್ರತಿಭಟನೆ



ಮಂಡ್ಯ, ಜು.13– ವಿಶ್ವವಿಖ್ಯಾತ ಕೃಷ್ಣರಾಜಸಾಗರದಲ್ಲಿ ಕರ್ತವ್ಯದಲ್ಲಿದ್ದ 6 ಮಂದಿ ಹೊರಗುತ್ತಿಗೆ ನೌಕರರನ್ನು ಏಕಾಏಕಿ ತೆಗೆದುಹಾಕಿರುವುದನ್ನು ಖಂಡಿಸಿ ನಗರದಲ್ಲಿ ಹೊರಗುತ್ತಿಗೆ ನೌಕರರು ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಕೆಆರ್‌ಎಸ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಹೊರಗುತ್ತಿಗೆ ನೌಕರರು ಗುರುವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ಜಮಾಯಿಸಿದರು. ಬಳಿಕ ಅಲ್ಲಿಂದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಆಗಮಿಸಿ ಧರಣಿ ನಡೆಸಿದರು. ಈ ವೇಳೆ ಕೆಲಸದಿಂದ ತೆಗೆದುಹಾಕಿರುವ ನೌಕರರು ಅರೆಬೆತ್ತಲೆಯಾಗಿ ಧರಣಿ ಕುಳಿತಿದ್ದು ಗಮನ ಸೆಳೆಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕಾವೇರಿ ನೀರಾವರಿ ನಿಗಮದ ಹೊರಗುತ್ತಿಗೆ ನೌಕರರಾಗಿ ಕೃಷ್ಣರಾಜಸಾಗರದ ಬೃಂದಾವನದಲ್ಲಿ ಸ್ವಚ್ಛತಾ ಮತ್ತು ನಿರ್ವಹಣಾ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದ ಮಹದೇವ, ಕೃಷ್ಣ, ರವಿ, ರತೀಶ್, ಮೋಹನ್ ಮತ್ತು ಅನಿಲ್ ಅವರನ್ನು ಏಕಾಏಕಿ ಯಾವುದೇ ನೋಟಿಸ್ ಹಾಗೂ ಮಾಹಿತಿ ನೀಡದೆ ರಾಜಕೀಯ ದುರುದ್ದೇಶದಿಂದ ಕೆಲಸದಿಂದ ತೆಗೆದು ಹಾಕಿದ್ದಾರೆ ಎಂದು ಆರೋಪಿಸಿದರು. ಹಾಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮತ್ತು ಅವರ ಭಾವಮೈದ ಮಂಜು ಅಧಿಕಾರಿಗಳಿಗೆ ತಿಳಿಸಿ ಕೆಲಸದಿಂದ ತೆಗೆದು ಹಾಕುವ ಮೂಲಕ ದೌರ್ಜನ್ಯ ಎಸಗಿದ್ದಾರೆ ಎಂದು ಕಿಡಿಕಾರಿದರು.

130ಕ್ಕೂ ಹೆಚ್ಚು ನೌಕರರಿಗೆ ಕಳೆದ 6 ತಿಂಗಳಿಂದ ಸಂಬಳ ನೀಡದ ಹಿನ್ನೆಲೆಯಲ್ಲಿ ಶಾಂತಿಯುತವಾಗಿ ಕೆಆರ್‌ಎಸ್‌ನಲ್ಲಿ ಧರಣಿ ಮಾಡುತ್ತಿದ್ದರೂ, ಯಾವುದೇ ನ್ಯಾಯ ದೊರೆತಿಲ್ಲ. ಅಲ್ಲದೇ 6 ಮಂದಿ ನೌಕರರನ್ನು ಕೆಲಸದಿಂದ ತೆಗೆದು ಹಾಕಿರುವುದು ಖಂಡನೀಯ. ಇದೀಗ ಹೊರಗಡೆಯಿಂದ ಕಾರ್ಮಿಕರನ್ನು ಕರೆತಂದು ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ನಮ್ಮಗಳ ಬೇಡಿಕೆಗೆ ಅಧಿಕಾರಿಗಳು ಸ್ಪಂದಿಸದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಅರೆ ಬೆತ್ತಲೆಯಾಗಿ ಧರಣಿ ಮಾಡುತ್ತಿದ್ದೇವೆ ಎಂದರು.

ರಾಜಕೀಯ ದುರುದ್ದೇಶದಿಂದ ಕೆಲಸದಿಂದ ತೆಗೆದುಹಾಕಿರುವ 6 ಮಂದಿ ಹೊರಗುತ್ತಿಗೆ ನೌಕರರನ್ನು ತಕ್ಷಣ ಕೆಲಸಕ್ಕೆ ತೆಗೆದುಕೊಳ್ಳಬೇಕು. ಬಾಕಿ ವೇತನ ಶೀಘ್ರ ಪಾವತಿಸಬೇಕು ಎಂದು ಒತ್ತಾಯಿಸಿದರು.

ಜೈನಮುನಿ ಹತ್ಯೆ ಖಂಡಿಸಿ ಮೌನ ಪ್ರತಿಭಟನೆ



ನಾಗಮಂಗಲ, ಜು.13– ಜೈನಮುನಿ ಕಾಮಕುಮಾರ ನಂದಿ ಮಹಾರಾಜ್ ಹತ್ಯೆ ಖಂಡಿಸಿ ತಾಲೂಕಿನ ಬೆಳ್ಳೂರು ಪಪಂ ವ್ಯಾಪ್ತಿಯ ಜೈನ ಸಮಾಜದವರು ಮೌನ ಪ್ರತಿಭಟನೆ ನಡೆಸಿದರು.

ಬೆಳ್ಳೂರು ಹಾಗೂ ದಡಗ ಗ್ರಾಮದ ನೂರಾರು ಜೈನ ಸಮುದಾಯದವರು ಬೆಳ್ಳೂರು ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಮೌನ ಪ್ರತಿಭಟನೆ ನಡೆಸಿ ನಾಡ ಕಚೇರಿಯ ಉಪ ತಹಶೀಲ್ದಾರ ಸ್ವಾಮಿಗೌಡರ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.


ವಿಮಲ ನಾಥ ಟ್ರಸ್ಟ್ ಬೋರ್ಡ್ ಕಮಿಟಿ ಅಧ್ಯಕ್ಷ ಬಿ.ಪದ್ಮನಾಭ ಮಾತನಾಡಿ, ಹತ್ಯೆಗೊಳಗಾದ ಸ್ವಾಮೀಜಿಗಳು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕು ಹಿರೇಕೋಡಿ ಗ್ರಾಮದ ನಂದಿ ಪರ್ವತ ಜೈನ ಕ್ಷೇತ್ರದಲ್ಲಿ ವಾಸ್ತವ್ಯ ಮಾಡಿದ್ದರು. ಅವರನ್ನು ಜು.7ರಂದು ಬರ್ಬರವಾಗಿ ಹತ್ಯೆ ಮಾಡಿರುವುದರಿಂದ ಜೈನ ಸಮಾಜಕ್ಕೆ ಆಘಾತ ಉಂಟಾಗಿದೆ ಎಂದರು.

ಅಹಿಂಸೆಗೆ ಹೆಸರಾಗಿರುವ ಜೈನ ಮುನಿಗಳನ್ನು ಬರ್ಬರವಾಗಿ ಹತ್ಯೆಗೈದಿರುವುದು ಸಮಾಜ ತಲೆ ತಗ್ಗಿಸುವ ವಿಚಾರ. ಸರ್ಕಾರ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಬೇಕು. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹಾಳಾಗಿದ್ದು, ಇಂತಹ ಕೃತ್ಯ ಮುಂದೆ ನಡೆಯದಂತೆ ರಾಜ್ಯ ಸರ್ಕಾರ ಕ್ರಮ ವಹಿಸಬೇಕು ಹಾಗೂ ಸಮಾಜದ ಇತರ ಮುನಿಗಳಿಗೆ ಸೂಕ್ತ ರಕ್ಷಣೆ ಒದಗಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು.

ಕಂಬದಹಳ್ಳಿ ಜೈನ ಮಠದ ಭಾನು ಕೀರ್ತಿ ಭಟ್ಟಾಚಾರ್ಯ ಸ್ವಾಮೀಜಿ ಮಾತನಾಡಿ, ಅಹಿಂಸೆ ಮತ್ತು ತ್ಯಾಗದ ಪ್ರತಿಪಾದಕರು ಹಾಗೂ ಶಾಂತಿ ಪ್ರಿಯರು ಆಗಿರುವ ಜೈನ ಮುನಿಗಳ ಮೇಲೆ ಇಂತಹ ಕೃತ್ಯಗಳು ಮರುಕಳಿಸದಂತೆ ರಕ್ಷಣೆ ನೀಡಬೇಕು. ಜೈನ ಬಸದಿಗಳು, ಮಠಗಳು, ಮುನಿಗಳು, ಸಾಧು ಸಂತರು, ಮಾತಾಜಿಯವರು ಮತ್ತು ಅವರು ವಾಸ್ತವ್ಯವಿರುವ ಆಶ್ರಮ ಹಾಗೂ ಇತರೆ ಜಾಗಗಳಲ್ಲಿ ಮತ್ತು ಅವರು ವಿಹಾರ ಸಂದರ್ಭದಲ್ಲಿ ಸೂಕ್ತ ಮುನ್ನೆಚ್ಚರಿಕೆ ಮತ್ತು ಭದ್ರತಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಮಿಟಿ ಗೌರವಾಧ್ಯಕ್ಷ ಡಾ.ರತ್ನರಾಜು, ಕಾರ್ಯದರ್ಶಿ ಬಿ.ಎಸ್. ಸುನೀಲಕುಮಾರ, ಸದಸ್ಯರಾದ ಧರಣೇಂದ್ರ ಕುಮಾರ, ಧನ್ಯಕುಮಾರ, ಮಹಾವೀರ್, ಸುನಿಲ್ ಕುಮಾರ್, ಸಂಜಯ, ರೋಹಿತ, ನರೇಶಕುಮಾರ, ಅಜಿತ್ ಕುಮಾರ, ಸಮರ್ಥ, ಕುಂತಲ ಮತ್ತಿತರರಿದ್ದರು.

ಜೈನಮುನಿ ಹತ್ಯೆ ಪ್ರಕರಣ: ಹೆಚ್ಚಿನ ತನಿಖೆ ಅಗತ್ಯ



ಮಂಡ್ಯ, ಜು.13– ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ಜೈನಮುನಿಗಳ ಹತ್ಯೆ ಪ್ರಕರಣವನ್ನು ಸರ್ಕಾರ ಯೋಚಿಸಿದರೆ ಸಿಬಿಐಗೆ ಒಪ್ಪಿಸಬಹುದು. ಆದರೆ ಈ ಬಗ್ಗೆ ಇನ್ನೂ ಹೆಚ್ಚಿನ ತನಿಖೆ ಅಗತ್ಯವಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯ ಡಾ.ವಿರೇಂದ್ರ ಹೆಗ್ಗಡೆ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಲೆ ಪ್ರಕರಣ ಸಂಬಂಧ ತನಿಖೆ ನಡೆಯುತ್ತಿದೆ. ನಮ್ಮ ಪ್ರಕಾರ ತನಿಖೆ ಸರಿಯಾಗಿ ನಡೆಯುತ್ತಿದೆ ಎಂಬ ಅಭಿಪ್ರಾಯವಿದೆ. ತನಿಖೆಯಲ್ಲಿ ಹೊಸ ವಿಷಯಗಳು ಬರ್ತಾ ಇದೆ. ಸಿಬಿಐ ತನಿಖೆಗೆ ಕೊಟ್ಟರೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಜೆಡಿಎಸ್ ಮಾಜಿ ಶಾಸಕರಿಂದ ಓಲೈಕೆ ರಾಜಕಾರಣ: ಆರೋಪ

ಮಂಡ್ಯ, ಜು.13– ಜಿಲ್ಲೆಯ ಜೆಡಿಎಸ್ ಮಾಜಿ ಶಾಸಕರು ಓಲೈಕೆ ರಾಜಕಾರಣಕ್ಕೆ ಮುಂದಾಗಿದ್ದು, ವಿಧಾನಸಭೆ ಕಲಾಪದ ವಿಚಾರವನ್ನು ಅನಗತ್ಯವಾಗಿ ಪ್ರಸ್ತಾಪಿಸಿ ಅನಾಗರಿಕತೆ ಪ್ರದರ್ಶಿಸಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಆರೋಪಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರಲ್ಲಿ ನಡೆದ ಚುನಾವಣೆಯಲ್ಲಿ 7 ಕ್ಷೇತ್ರಗಳಲ್ಲೂ ಸೋಲು ಕಂಡಿದ್ದ ಕಾಂಗ್ರೆಸ್ ಪಕ್ಷದ ಅಂದಿನ ಅಭ್ಯರ್ಥಿಗಳಿಗೆ ಜನಾದೇಶಕ್ಕೆ ತಲೆಬಾಗಿ ಮೌನ ವಹಿಸುವಂತೆ ಸಲಹೆ ನೀಡಿದ್ದ ಅಂದಿನ ಶಾಸಕರು ಇಂದು ಮಾಜಿ ಶಾಸಕರಾದ ಒಂದೂವರೆ ತಿಂಗಳಲ್ಲೇ ಆರ್ಭಟಿಸಲು ಮುಂದಾಗಿರುವುದು ಕುಮಾರಸ್ವಾಮಿ ಅವರ ಓಲೈಕೆಗಾಗಿಯೇ ಎಂದು ಪ್ರಶ್ನಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ 26 ಸಾವಿರ ಮತಗಳ ಅಂತರದಿಂದ ಸೋಲು ಕಂಡಿದ್ದ ನರೇಂದ್ರಸ್ವಾಮಿ ಅವರು ಹಲವು ವರ್ಷಗಳ ನಂತರ ಪ್ರಶ್ನಿಸಲಾರಂಭಿಸಿದಾಗ 5 ವರ್ಷ ಬಾಯಿ ಮುಚ್ಚಿಕೊಂಡಿರುವಂತೆ ಹೇಳಿಕೆ ನೀಡಿದ್ದ ಅನ್ನದಾನಿ 46 ಸಾವಿರ ಮತಗಳಿಂದ ಸೋಲನ್ನಪ್ಪಿದ್ದು, ಅವರ ಹೇಳಿಕೆ ನೆನಪಾಗುತ್ತಿಲ್ಲವೇ ಎಂದು ಮೂದಲಿಸಿದರು.

ಮಾಜಿ ಶಾಸಕ ಅನ್ನದಾನಿ ಅವರ ಚರಿತ್ರೆ ಮತ್ತು ಸಂಸ್ಕೃತಿ ಕ್ಷೇತ್ರದ ಜನರಿಗೆ ಮನವರಿಕೆ ಆಗಿದ್ದು, ಪ್ರಸ್ತುತ ಚುನಾವಣೆಯಲ್ಲಿ ಸಾಬೀತಾಗಿದೆ ಎಂದರು. ಮಾಜಿ ಶಾಸಕ ಕೆ.ಸುರೇಶ್‌ಗೌಡ ಮತ್ತು ರವೀಂದ್ರ ಶ್ರೀಕಂಠಯ್ಯ ಅವರು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರನ್ನು ತೇಜೋವಧೆ ಮಾಡುವುದನ್ನು ಬಿಟ್ಟು ಜಿಲ್ಲೆ ಅಭಿವೃದ್ಧಿಗೆ ಅಗತ್ಯವಾಗಿರುವ ಸಲಹೆ, ಸಹಕಾರ ನೀಡಲು ಮುಂದಾಗಬೇಕೆಂದರು. ನಾಗಮಂಗಲದಲ್ಲಿ ಕೆಡಿಪಿ ಸಭೆ ಕರೆಯಲಾಗದ ಮಾಜಿ ಶಾಸಕ ಸುರೇಶ್‌ಗೌಡರು, ವಿಷ ಸೇವಿಸಿದ್ದ ಚಾಲಕ ಜಗದೀಶ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದೊಯ್ಯುತ್ತಿದ್ದಾಗ ಆಂಬುಲೆನ್ಸ್ ತಡೆದು ವಿಳಂಬ ಮಾಡಿದ್ದಾರೆ. ಈ ಘಟನೆ ಬಗ್ಗೆ ಸೂಕ್ತ ತನಿಖೆಯಾಗಬೇಕೆಂದರು. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನೂತನ ಸರ್ಕಾರ ಬದ್ಧವಾಗಿದ್ದು, ಇಲಾಖಾವಾರು ಅನುದಾನದಲ್ಲಿ ಇತರೆ ಜಿಲ್ಲೆಗಿಂತ ಹೆಚ್ಚು ಅನುದಾನ ಲಭ್ಯವಾಗುವ ವಿಶ್ವಾಸವಿದೆ ಎಂದರು.

ಗೋಷ್ಠಿಯಲ್ಲಿ ಮಾಜಿ ಶಾಸಕ ಹೆಚ್.ಬಿ.ರಾಮು, ಕಾಂಗ್ರೆಸ್ ಮುಖಂಡ ಬಿ.ಎಲ್.ದೇವರಾಜು, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ನಿರ್ದೇಶಕ ಅಶೋಕ್, ಮುಖಂಡರಾದ ದೇವರಾಜು, ಚನ್ನಪ್ಪ, ಮಂಜುನಾಥ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಕಾರು ಚೇಸ್ ಮಾಡಿದ ದರೋಡೆಕೋರರು

ಹಿಡಿದಿದ್ದನ್ನು ಕಂಡು, ಕಾರಿನಲ್ಲಿದ್ದವರು ಬೆಚ್ಚಿದರು. ಎಚ್ಚೆತ್ತ ಚಾಲಕ ಶ್ರೀಕಾಂತ್, ವೇಗವಾಗಿ ಚಾಲನೆ ಮಾಡಿದ್ದಾರೆ.

ಕೈಯ್ಯಲ್ಲಿ ಕಬ್ಬಿಣದ ರಾಡ್ ಹಿಡಿದಿದ್ದ ಇಬ್ಬರು, ಅದರಿಂದ ಕಾರಿಗೆ ಬಡಿದರೆ, ದೊಡ್ಡದಾದ ಸ್ಕ್ರೂಡ್ರೈವರ್ ಹಿಡಿದಿದ್ದ ಮತ್ತೊಬ್ಬ ಕಾರಿನ ಗಾಜಿಗೆ ಚುಚ್ಚಿದ್ದಾನೆ. ಇವರಿಂದ ತಪ್ಪಿಸಿಕೊಳ್ಳಲು ಚಾಲಕ ಶ್ರೀಕಾಂತ್, ಸ್ವಲ್ಪ ಬಲಕ್ಕೆ ತಿರುಗಿ ಮುಂದೆ ಸಾಗುವ ಪ್ರಯತ್ನ ಮಾಡಿದರೆ, ಹಿಂದೆ ಬರುತ್ತಿದ್ದ ವಾಹನಗಳು ಕಾರಿಗೆ ಡಿಕ್ಕಿ ಹೊಡೆಯುತ್ತವೆ ಎಂದು ಕಾರಿನ ವೇಗವನ್ನು ತಗ್ಗಿಸಿದಾಗ ದರೋಡೆಕೋರರು ಕಾರಿನ ಮುಂದೆಯೇ ಬಂದಿದ್ದಾರೆ. ಕಾರು ಡಿಕ್ಕಿ ಹೊಡೆದರೆ ಸಾಯುತ್ತೀರಾ ಎಂದು ಎಚ್ಚರಿಕೆ ಕೊಟ್ಟರೂ ಲೆಕ್ಕಿಸದ ದರೋಡೆಕೋರರು ಕಾರು ತಡೆಯುವ ಯತ್ನ ಮಾಡುತ್ತಲೇ ಬಂದಾಗ ಶ್ರೀಕಾಂತ್ ಕಾರಿನಿಂದ ಬುಲೆಟ್‌ಗೆ ಒಮ್ಮೆ ಡಿಕ್ಕಿ ಹೊಡೆದು, ಕಾರು ನಿಲ್ಲಿಸದೆ ಧೈರ್ಯ ಮಾಡಿ ಮುನ್ನುಗ್ಗಿದ್ದಾರೆ.

ಹೀಗೆ ಆದರೆ ತಮ್ಮ ಕಾರ್ಯ ಕೈಗೂಡದು ಎಂಬುದನ್ನರಿತ ದರೋಡೆಕೋರರು, ದಿಢೀರ್ ಬಲಕ್ಕೆ ತಿರುಗಿ ಕಾರಿನ ಮುಂದೆಯೇ ಬರಲು ಯತ್ನಿಸಿದಾಗ ಸರ್ವಿಸ್ ರೋಡ್ ಖಾಲಿ ಇರುವುದನ್ನು ಗಮನಿಸಿದ ಕಾರು ಚಾಲಕ ಶ್ರೀಕಾಂತ್, ವೇಗವಾಗಿ ಅತ್ತ ಕಾರನ್ನು ತಿರುಗಿಸಿದರೂ ದರೋಡೆಕೋರರು ಬೆನ್ನತ್ತಿದ್ದಾರೆ.

ಸರ್ವಿಸ್ ರಸ್ತೆಯಲ್ಲಿ ವೇಗವಾಗಿ ಅಂಡರ್ ಪಾಸ್ ಬಳಿ ಇದ್ದ ರೋಡ್ ಹಂಪ್ಸ್ ಹಾರಿಸಿ ಕಾರು ಮುಂದೆ ಸಾಗಿದರೂ, ದರೋಡೆಕೋರರು ಕೂಡ ರೋಡ್ ಹಂಪ್ಸ್ ಹಾರಿಸಿದ್ದಾರೆ. ಆದರೆ, ನಿಯಂತ್ರಣ ಸಿಗದೆ ಅಂಡರ್ ಪಾಸ್ ಒಳಗೆ ಬುಲೆಟ್ ತಿರುಗಿಸಿದ್ದಾರೆ. ಸದ್ಯ ದರೋಡೆಕೋರರಿಂದ ಪಾರಾದೆವು ಎಂದು ನಿಟ್ಟುಸಿರು ಬಿಡುವಾಗಲೇ ಹೀರೋ ಹೊಂಡಾದಲ್ಲಿದ್ದ ಮತ್ತಿಬ್ಬರು ಚೇಸ್ ಮಾಡಿದ್ದಾರೆ. ಬುಲೆಟ್‌ನಲ್ಲಿದ್ದ ದರೋಡೆಕೋರರು ಮತ್ತೆ ಬೆನ್ನತ್ತಿ ಬಂದಿದ್ದಾರೆ. ಇನ್ನು ವಾಹನ ಸಂಚಾರವಿಲ್ಲದ ಸರ್ವಿಸ್ ರೋಡ್‌ನಲ್ಲೇ ಹೋದರೆ ಖದೀಮರ ಸುಳಿಗೆ ಸಿಲುಕುವ ಸಾಧ್ಯತೆ ಹಿನ್ನೆಲೆಯಲ್ಲಿ ಮುಂದೆ ಎಕ್ಸ್‌ಪ್ರೆಸ್ ವೇ ಕಡೆ ಮತ್ತೆ ಕಾರು ತಿರುಗಿಸಿ, ವೇಗವಾಗಿ ಚಲಿಸುವ ಮೂಲಕ ದರೋಡೆಕೋರರಿಂದ ಅಧಿಕ ಅಂತರ ಕಾಯ್ದುಕೊಂಡು, ಅವರಿಂದ ತಪ್ಪಿಸಿಕೊಂಡೆವು ಎಂದು ನಿಟ್ಟುಸಿರು ಬಿಟ್ಟಿದ್ದಾರೆ.

ತಕ್ಷಣವೇ ತುರ್ತು ಸಹಾಯವಾಣಿ 112ಗೆ ಕರೆ ಮಾಡಿ ದೂರು ನೀಡಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತ ಒಂದೆಡೆಯಾದರೆ ಇಂತಹ ದರೋಡೆಕೋರರ ಉಪಟಳ ಮತ್ತೊಂದೆಡೆ ವಾಹನ ಚಾಲಕರನ್ನು ಕಾಡುತ್ತಿದೆ. ಎಕ್ಸ್‌ಪ್ರೆಸ್ ವೇ ಪರಿಸ್ಥಿತಿ ಹೀಗಾದರೆ, ರಾತ್ರಿ ವೇಳೆ ಸರ್ವಿಸ್ ರೋಡ್ ಪರಿಸ್ಥಿತಿ ಮತ್ತಷ್ಟು ಭಯ ಉಂಟು ಮಾಡುತ್ತದೆ. ದರೋಡೆಕೋರರಿಂದ ಪಾರಾಗಿ ಬಂದವರ ಪ್ರಕಾರ, ಸರ್ವಿಸ್ ರೋಡ್‌ನಲ್ಲಿ ರಾತ್ರಿ ವೇಳೆ ಯಾರೂ ಸಂಚಾರ ಮಾಡದ ಕಾರಣ ದರೋಡೆಕೋರರು ನೇರವಾಗಿ ಎಕ್ಸ್‌ಪ್ರೆಸ್ ವೇನಲ್ಲೇ ಸುಲಿಗೆಗಿಳಿದಿದ್ದಾರೆ. ಹಣ ಉಳಿಸಲು ರಾತ್ರಿ ವೇಳೆ ಸರ್ವಿಸ್ ರೋಡ್‌ನಲ್ಲಿ ಹೋಗಿ ಕಷ್ಟಕ್ಕೆ ಸಿಲುಕುವುದು ಬೇಡ ಎಂದು ಪಾರಾಗಿ ಬಂದವರು ಸಲಹೆ ನೀಡಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ರಾತ್ರಿ ಪೊಲೀಸ್ ಗಸ್ತು ಇಲ್ಲದ ಕಾರಣ ಖದೀಮರು ನಿರಾಂತಕವಾಗಿ ಅಟ್ಟಹಾಸ ಮೆರೆಯುತ್ತಿದ್ದಾರೆ. ಈಗಾಗಲೇ ಇಲ್ಲಿ ನಡೆದಿರುವ ದರೋಡೆ, ಸುಲಿಗೆಯಂತಹ ಪ್ರಕರಣಗಳ ಹಿನ್ನೆಲೆ ಪರಿಣಾಮಕಾರಿ ಪೊಲೀಸ್ ಗಸ್ತು ವ್ಯವಸ್ಥೆಯನ್ನು ಕೂಡಲೇ ಮಾಡಬೇಕಿದೆ. ಇಲ್ಲವಾದರೆ ದರೋಡೆಕೋರರು ಹಣ, ಚಿನ್ನಾಭರಣ ದೋಚುವಾಗ ಅಮಾಯಕರ ಪ್ರಾಣಕ್ಕೆ ಕುತ್ತು ತಂದರೂ ತರಬಹುದು.

ವಿಶೇಷ ತಂಡ ರಚನೆ: ಡಿಐಜಿಪಿ

ಪ್ರವೃತ್ತವಾಗುತ್ತದೆ ಎಂದು ತಿಳಿಸಿದರು. ಇದೇ ಎಕ್ಸ್‌ಪ್ರೆಸ್ ವೇನ ಮಂಡ್ಯ ಹಾಗೂ ಮದ್ದೂರು ವ್ಯಾಪ್ತಿಯಲ್ಲಿ ದರೋಡೆ ಮಾಡಿದ್ದ ಎರಡು ಪ್ರಕರಣಗಳನ್ನು ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಿದ್ದೇವೆ ಎಂದರು. ವೇಗವಾಗಿ ವಾಹನ ಚಾಲನೆ ಮಾಡಿ ಅಪಘಾತ ಆಗುವುದನ್ನು ತಡೆಯಲು ಈಗ ದಂಡ ವಿಧಿಸಲಾಗುತ್ತಿದೆ. ಇದರ ಜೊತೆಗೆ ವಿಶೇಷ ತಂಡ ಕಾರ್ಯ ಪ್ರವೃತ್ತವಾಗಿ ಎಕ್ಸ್‌ಪ್ರೆಸ್ ವೇನಲ್ಲಿ ಅಪರಾಧ ಕೃತ್ಯಗಳನ್ನು ತಡೆಯಲಿದೆ. ಈ ಮೂಲಕ ಜನರ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಇಲಾಖೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಡಾ.ಬೋರಲಿಂಗಯ್ಯ ತಿಳಿಸಿದರು. ಇದೇ ವಿಚಾರವಾಗಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಮದ್ದೂರು ಹಾಗೂ ಮಂಡ್ಯ ಮಧ್ಯೆ ದರೋಡೆಯಾಗಿದೆ. ಆದರೆ ಶ್ರೀರಂಗಪಟ್ಟಣದ ಬಳಿ ಇದೇ ಮೊದಲು ಇಂತಹ ಯತ್ನ ನಡೆದಿದೆ. ಎಕ್ಸ್‌ಪ್ರೆಸ್ ವೇ ಹಾಗೂ ಸುತ್ತಲಿನ ಸಿಸಿಟಿವಿ ದೃಶ್ಯಗಳನ್ನು ಕಲೆ ಹಾಕಿ ಆರೋಪಿಗಳನ್ನು ಬಂಧಿಸುತ್ತೇವೆ ಎಂದು ತಿಳಿಸಿದರು.

ನೀರಿನ ಶುಲ್ಕ ಹೆಚ್ಚಳ ಪ್ರಸ್ತಾಪ ಕೈಬಿಟ್ಟ ಪಾಲಿಕೆ

ಶುಲ್ಕದ ಹೊರೆ ಹೇರಲು ಹೊರಟಿದ್ದಾರೆ. ಮಹಾರಾಜರು ಉಚಿತವಾಗಿ ನೀರು ಕಲ್ಪಿಸುವ ಮೂಲಕ ಮೈಸೂರಿನ ಜನರಿಗೆ ಅನುಕೂಲ ಮಾಡಿಕೊಟ್ಟರು. ಸ್ಥಳೀಯ ಸಂಸ್ಥೆ ರಚನೆಯಾದ ಬಳಿಕ ಕನಿಷ್ಠ ಶುಲ್ಕ ಸಂಗ್ರಹಿಸಲು ಆರಂಭಿಸಲಾಯಿತು. ನಂತರದಲ್ಲಿ ಶುಲ್ಕ ಪರಿಷ್ಕರಣೆ ಮಾಡಿಕೊಂಡು ಬರಲಾಗಿದೆ. ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರಗಳಿಂದ ಅನುದಾನ ಬರುತ್ತಿದೆ. ಪಾಲಿಕೆಯಿಂದ ಕೇವಲ ನಿರ್ವಹಣೆ ಸಾಧ್ಯವಿಲ್ಲ ಎಂದಾದರೆ ಹೇಗೆ. ನೀರು ಸರಬರಾಜು ಸಂಬಂಧಿತ ಸಂಪೂರ್ಣ ಮಾಹಿತಿ ಸಂಗ್ರಹಿಸಿ, ನಷ್ಟವಾಗುತ್ತಿರುವುದನ್ನು ತಡೆಗಟ್ಟುವ ಬದಲು ನೀರಿನ ಶುಲ್ಕ ಹೆಚ್ಚಿಸುವ ಮೂಲಕ ಸಾರ್ವಜನಿಕರ ಮೇಲೆ ಹೊರೆ ಹೇರುವುದಕ್ಕೆ ನಮ್ಮ ಪಕ್ಷದಿಂದ ಸಂಪೂರ್ಣ ವಿರೋಧವಿದೆ ಎಂದರು.

ಬಿಜೆಪಿ ಸದಸ್ಯ ಎಂ.ಯು.ಸುಬ್ಬಯ್ಯ ಮಾತನಾಡಿ, ಕುಡಿಯುವ ನೀರು ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅಗತ್ಯಾನುಸಾರ ಅನುದಾನ ಲಭ್ಯವಾಗುತ್ತಿದೆ. ಈ ವಿಚಾರ ಪ್ರಸ್ತಾಪವಾದಾಗಲೆಲ್ಲಾ ಅನಧಿಕೃತ ನೀರಿನ ಸಂಪರ್ಕಗಳ ಬಗ್ಗೆ ಚರ್ಚೆಯಾಗುತ್ತದೆ. ಆದರೆ ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮವಾಗಬೇಕು. ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ಶುಲ್ಕ ಸಂಗ್ರಹಕ್ಕೆ ಮುಂದಾಗಬೇಕು. ನೀರಿನ ಶುಲ್ಕ ಹೆಚ್ಚಿಸುವುದಕ್ಕೆ ನಮ್ಮ ಸಮ್ಮತಿಯೂ ಇಲ್ಲ ಎಂದು ಹೇಳಿದರು.

ಬಿಜೆಪಿಯ ಬಿ.ವಿ.ಮಂಜುನಾಥ್, ಸಾರ್ವಜನಿಕರಿಂದ ಸಂಗ್ರಹಿಸುವ ನೀರಿನ ಶುಲ್ಕದಿಂದ ನಿರ್ವಹಣೆ ಮಾಡುತ್ತಿಲ್ಲ. ಅದಕ್ಕಾಗಿ ಸರ್ಕಾರದಿಂದ ಹಣ ಬರುತ್ತಿದೆ. ಹಾಗಾಗಿ ಶುಲ್ಕ ಪರಿಷ್ಕರಣೆ ಕೈಬಿಟ್ಟು, ಅನಧಿಕೃತ ಸಂಪರ್ಕಗಳನ್ನು ಕಡಿತಗೊಳಿಸಬೇಕು. ಗೊಂದಲಗಳಿಂದ ನಷ್ಟವಾಗುತ್ತಿರುವ ಬಗ್ಗೆ ಗಮನಹರಿಸಬೇಕು ಎಂದರು. ಜೆಡಿಎಸ್ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಕಾಂಗ್ರೆಸ್‌ನ ಶೋಭಾ ಸುನಿಲ್ ಸೇರಿದಂತೆ ಎಲ್ಲಾ ಪಕ್ಷದ ಸದಸ್ಯರೂ ನೀರಿನ ಶುಲ್ಕ ಹೆಚ್ಚಿಸದಂತೆ ಆಗ್ರಹಿಸಿದರು.

ಮೇಯರ್ ನಿರ್ಣಯ: ಗೃಹ ಬಳಕೆ ನೀರಿನ ಶುಲ್ಕ ಹೆಚ್ಚಿಸುವ ವಿಚಾರಕ್ಕೆ ಎಲ್ಲಾ ಸದಸ್ಯರಿಂದ ವಿರೋಧ ವ್ಯಕ್ತವಾಗಿದೆ. ಇದು 2 ವರ್ಷಗಳ ಹಿಂದಿನ ಶಿಫಾರಸು. ನಮಗೂ ಶುಲ್ಕ ಹೆಚ್ಚಿಸಬೇಕೆಂಬ ಇಂಗಿತವಿಲ್ಲ. ಹಾಗಾಗಿ ಕೌನ್ಸಿಲ್‌ನಲ್ಲಿ ವ್ಯಕ್ತವಾದ ಅಭಿಪ್ರಾಯ ಆಧರಿಸಿ, ನೀರಿನ ಶುಲ್ಕ ಹೆಚ್ಚಿಸುವ ವಿಷಯವನ್ನು ಕೈಬಿಡಲಾಗಿದೆ ಎಂದು ಮೇಯರ್ ಶಿವಕುಮಾರ್ ನಿರ್ಣಯ ಪ್ರಕಟಿಸಿದರು. ಉಪಮೇಯರ್ ಜಿ.ರೂಪಾ, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಸಭೆಯಲ್ಲಿ ಉಪಸ್ಥಿತರಿದ್ದರು.

ಅರಮನೆ ಲೈನ್‌ಗೆ ಅಪಾರ್ಟ್‌ಮೆಂಟ್ ಲಿಂಕ್!

ಜನರಿಗೆ ನೀರು ಕಲ್ಪಿಸಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಚಿನ್ನ ಅಡವಿಟ್ಟು ಕನ್ನಂಬಾಡಿ ಅಣೆಕಟ್ಟೆ ಕಟ್ಟಿಸಿದರು. ಆದರೆ ಕಳೆದ ತಿಂಗಳು ಒಂದು ವಾರ ಟ್ಯಾಂಕರ್ ಮೂಲಕ ಅರಮನೆಗೆ ನೀರು ಪೂರೈಸಲಾಯಿತು. ರಾಜವಂಶಸ್ಥರಿಗೆ ತೀವ್ರ ತೊಂದರೆಯಾಗಿತ್ತು. ಇತಿಹಾಸದಲ್ಲೇ ಇಂತಹ ದುಃಸ್ಥಿತಿ ಬಂದಿರಲಿಲ್ಲ. ಆರಂಭದಿಂದಲೂ ಅರಮನೆಗೆ ದಿನವಿಡೀ ನೀರು ಸರಬರಾಜು ವ್ಯವಸ್ಥೆ ಇದೆ. ಆದರೆ ಈ ಪೈಪ್‌ಲೈನ್‌ನಿಂದ ಅಪಾರ್ಟ್‌ಮೆಂಟ್‌ವೊಂದಕ್ಕೆ ಸಂಪರ್ಕ ಕಲ್ಪಿಸಿರುವುದರಿಂದ ಈ ಸಮಸ್ಯೆ ಸೃಷ್ಟಿಯಾಗಿದೆ ಎಂದು ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್, ಅರಮನೆ ನೀರು ಸಂಪರ್ಕದಲ್ಲಿನ ಸಮಸ್ಯೆ ಬಗ್ಗೆ ಅಧಿಕಾರಿಗಳು ಕೂಡಲೇ ಪರಿಶೀಲನೆ ನಡೆಸಿ, ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿದರು.

ಯಾವುದೇ ಕೇಬಲ್ ಅಳವಡಿಕೆಗೆ ಕೌನ್ಸಿಲ್ ನಿರ್ಧಾರವೇ ಅಂತಿಮ

● ಯಾವ ಪ್ರಸ್ತಾವನೆ ಇದ್ದರೂ ಕೌನ್ಸಿಲ್ ನಿರ್ಣಯವೇ ಅಂತಿಮ ● ಮೇಯರ್ ಶಿವಕುಮಾರ್ ಖಡಕ್ ತೀರ್ಮಾನ

ಮೈಸೂರು, ಜು.13(ಎಸ್‌ಬಿಡಿ)– ಕೇಬಲ್ ಅಳವಡಿಕೆ ಸಂಬಂಧ ಯಾವುದೇ ಪ್ರಸ್ತಾವನೆಯಿದ್ದರೂ ಕೌನ್ಸಿಲ್‌ನಲ್ಲಿ ನಿರ್ಧರಿಸಲಾಗುವುದು ಎಂದು ಮೇಯರ್ ಶಿವಕುಮಾರ್ ಕೌನ್ಸಿಲ್‌ನಲ್ಲಿ ತಿಳಿಸಿದರು.

ವಿದ್ಯುತ್ ಕಂಬಗಳಲ್ಲಿ ಅಳವಡಿಸಲಾಗಿರುವ ಕೇಬಲ್‌ಗಳನ್ನು ತೆರವುಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ. ಆದರೆ ಇಂಧನ ಇಲಾಖೆ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದಾರೆಂದು ಕಾರ್ಯಾಚರಣೆ ನಿಲ್ಲಿಸಿದ್ದೀರಿ. ಸ್ಥಳೀಯ ಸಂಸ್ಥೆಯ ಬೈಲಾಗಿಂತ ಅಧಿಕಾರಿಯೊಬ್ಬರ ಪತ್ರಕ್ಕೆ ಮಾನ್ಯತೆ ನೀಡುವ ಅವಶ್ಯಕತೆ ಇದೆಯೇ ಎಂದು ಸದಸ್ಯ ಕೆ.ವಿ.ಶ್ರೀಧರ್ ಪ್ರಶ್ನಿಸಿದರು.

ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿ, ಕೇಬಲ್ ಅಳವಡಿಕೆಗೆ ಅನುಮತಿ ನೀಡಲು ಸೆಸ್ಕ್ ಅಧಿಕಾರಿಗಳಿಗೆ ಅಧಿಕಾರವಿಲ್ಲ. ಹಾಗೇನಾದರೂ ನೀಡಿದರೆ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು ಎಂದು ಶಿಲ್ಪಾನಾಗ್ ಆಯುಕ್ತರಾಗಿದ್ದಾಗ ಎಚ್ಚರಿಕೆ ನೀಡಿದ್ದರು ಎಂದು ತಿಳಿಸಿದರು.

ಸ್ಪಷ್ಟನೆ ನೀಡಿದ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಸರ್ಕಾರದ ಸೂಚನೆ ಮೇರೆಗೆ ಸೆಸ್ಕ್ ಅಧಿಕಾರಿಗಳು ಶುಲ್ಕ ಪಡೆದು ಕಂಪನಿಗಳ ಕೇಬಲ್ ಅಳವಡಿಸಲು ಅನುಮತಿ ನೀಡಿದ್ದಾರೆ. ಆದರೆ ಪಾಲಿಕೆ ಕೌನ್ಸಿಲ್‌ಗೆ ತನ್ನದೇ ಆದ ಅಧಿಕಾರವಿದೆ. ಹಾಗಾಗಿ ನಿರ್ಣಯದಂತೆ ಕೇಬಲ್ ತೆರವು ಕಾರ್ಯಾಚರಣೆ ಆರಂಭಿಸಿದ್ದೆವು. ಈ ನಡುವೆ ವಿವಿಧ ಕಂಪನಿಯವರು ಸುಮಾರು 100 ಮೀಟರ್ ಯುಜಿ ಕೇಬಲ್ ಅಳವಡಿಕೆಗೆ ಅನುಮತಿ ಕೋರಿ ಅರ್ಜಿ ಹಾಕಿದ್ದಾರೆ. ಹಣ ಪಾವತಿಸಿಕೊಂಡು ನಂತರ ಅನುಮತಿ ನೀಡಬೇಕಿದೆ. ಇಂಧನ ಇಲಾಖೆ ಅನುಮತಿ ನೀಡಿದೆ. ಆದರೆ ಕೌನ್ಸಿಲ್ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದು ತಿಳಿಸಲಾಗಿದೆ ಎಂದರು.

ಒಂದೊಂದು ಕಂಪನಿಯವರು 2–3 ಸಾವಿರ ಮೀಟರ್ ಕೇಬಲ್ ಅಳವಡಿಸಿದ್ದಾರೆ. ಸರಿಯಾದ ರೀತಿಯಲ್ಲಿ ಶುಲ್ಕ ಸಂಗ್ರಹಿಸಿದರೆ ಸುಮಾರು 700 ಕೋಟಿ ರೂ. ಸಂಗ್ರಹವಾಗುತ್ತದೆ ಎಂದು ಮಾಜಿ ಮೇಯರ್ ಅಯೂಬ್ ಖಾನ್ ಹೇಳಿದರು. ಇದು ಪಾಲಿಸಿ ವಿಚಾರವಾಗಿದ್ದರೂ ಕೌನ್ಸಿಲ್ ಗಮನಕ್ಕೆ ತರದೆ ನಿರ್ಧಾರ ಕೈಗೊಳ್ಳುವುದು ಸರಿಯೇ ಎಂದು ಪ್ರಶ್ನಿಸಿದರು.

ಅಂತಿಮವಾಗಿ ಮೇಯರ್, ಈ ಸಂಬಂಧ ಪಾಲಿಕೆಗೆ ಸರ್ಕಾರದಿಂದ ಆದೇಶ ಬಂದಿಲ್ಲ. ನಮ್ಮ ಅಧಿಕಾರ ಬಳಸಿಕೊಂಡು ಕ್ರಮ ಕೈಗೊಳ್ಳಲಾಗುವುದು. ಕೇಬಲ್ ಸಂಬಂಧಿತ ಯಾವುದೇ ನಿರ್ಣಯವನ್ನು ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.



ಕೌನ್ಸಿಲ್‌ನಲ್ಲೂ ಗ್ಯಾರಂಟಿ ಸದ್ದು...


ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲೂ ಕಾಂಗ್ರೆಸ್ ಸರ್ಕಾರದ 'ಗ್ಯಾರಂಟಿ' ಸದ್ದು ಮಾಡಿತು. ನೀರಿನ ದರ ಪರಿಷ್ಕರಣೆ ವಿಚಾರವಾಗಿ ಮಾತನಾಡುವಾಗ ಕಾಂಗ್ರೆಸ್ ಸದಸ್ಯ ಅಯೂಬ್‌ಖಾನ್, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನರಿಗೆ ಉಚಿತ ಸೇವೆ ನೀಡುವ ಸಂದರ್ಭದಲ್ಲಿ ಬಿಜೆಪಿ ಆಡಳಿತವಿರುವ ಪಾಲಿಕೆಯಲ್ಲಿ ನೀರಿನ ದರ ಹೆಚ್ಚಿಸಲು ಹೊರಟಿದ್ದೀರಿ ಎಂದರು. ಈ ವೇಳೆ ಮೇಯರ್ ಶಿವಕುಮಾರ್, 5 ಕೆಜಿ ಅಕ್ಕಿ ಕೊಡುತ್ತಿರುವುದು ಕೇಂದ್ರ ಸರ್ಕಾರ ಎನ್ನುವುದು ಅಯೂಬ್ ಅವರಿಗೂ ಗೊತ್ತಿದೆ ಎಂದು ಕಾಲೆಳೆದರು. ಬಿ.ವಿ.ಮಂಜುನಾಥ್, ಎಂ.ಯು.ಸುಬ್ಬಯ್ಯ, ಸತೀಶ್ ಮೇಯರ್ ಬೆಂಬಲಕ್ಕೆ ನಿಂತರು. ಮಾತು ಮುಂದುವರೆಸಿದ ಮೇಯರ್, ಬಿಟ್ಟಿ ಭಾಗ್ಯಗಳಿಂದ ರಾಜ್ಯದಲ್ಲಿ ಏನೆಲ್ಲಾ ತೊಂದರೆಯಾಗುತ್ತಿದೆ. ಇಡೀ ವ್ಯವಸ್ಥೆ ಹಾಳಾಗುತ್ತಿದೆ. ವಿದ್ಯಾರ್ಥಿಗಳಿಗೆ ಶಾಲಾ–ಕಾಲೇಜಿಗೆ ಹೋಗಿಬರುವುದಕ್ಕೂ ಕಷ್ಟವಾಗಿದೆ ಎಂದರು. ಈ ಸಂಬಂಧ ಕೆಲಕಾಲ ಗೊಣಗಾಟ ಮುಂದುವರೆಯಿತಾದರೂ ನಂತರ ಕಾರ್ಯಸೂಚಿ ಮೇಲೆ ಚರ್ಚೆ ಶುರುವಾಯಿತು.

ಬಾವಿಗಿಳಿದು ಪ್ರತಿಭಟನೆ: ಪಾರ್ಕ್ ನಿರ್ವಹಣೆಗೆ ಪ್ಯಾಕೇಜ್ ಟೆಂಡರ್ ನೀಡಿರುವುದನ್ನು ಆಕ್ಷೇಪಿಸಿ, ಜೆಡಿಎಸ್ ಸದಸ್ಯರು ಮೇಯರ್ ಪೀಠದೆದುರು ಜಮಾಯಿಸಿ ಕೆಲಕಾಲ ಪ್ರತಿಭಟನೆ ನಡೆಸಿದರು. ಪ್ಯಾಕೇಜ್ ಟೆಂಡರ್ ಕ್ರಮ ಸರಿಯಲ್ಲ ಎಂದು ನಿರಾಕರಿಸಲಾಗಿತ್ತು, ಆದರೆ ಮತ್ತೆ ಅದೇ ವ್ಯಕ್ತಿಗಳಿಗೆ ಟೆಂಡರ್ ನೀಡಲಾಗಿದೆ. 45 ಮಂದಿ ತಲಾ 10–15 ಪಾರ್ಕ್ ಟೆಂಡರ್ ಪಡೆದಿದ್ದಾರೆ. ಇದರಿಂದ ಒಂದೊಂದು ಪಾರ್ಕ್ ಟೆಂಡರ್ ಪಡೆದು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿದ್ದ ಗುತ್ತಿಗೆದಾರರಿಗೂ ವಂಚನೆಯಾಗಿದೆ. ಪ್ಯಾಕೇಜ್ ಪಡೆದವರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂದು ಎಸ್‌ಬಿಎಂ ಮಂಜು ಆಕ್ರೋಶ ವ್ಯಕ್ತಪಡಿಸಿದರು. ಮಂಜು, ಪ್ರೇಮಾ ಶಂಕರೇಗೌಡ, ಅಶ್ವಿನಿ ಅನಂತು, ರಮೇಶ್ ಸೇರಿದಂತೆ ಜೆಡಿಎಸ್ ಸದಸ್ಯರು ಕೆಲಕಾಲ ಪ್ರತಿಭಟನೆ ನಡೆಸಿ, ಪ್ಯಾಕೇಜ್ ಟೆಂಡರ್ ರದ್ದುಪಡಿಸುವಂತೆ ಆಗ್ರಹಿಸಿದರು. ಮೇಯರ್ ಶಿವಕುಮಾರ್, ಈಗಾಗಲೇ ಟೆಂಡರ್ ಆಗಿರುವುದರಿಂದ ರದ್ದು ಮಾಡಲಾಗದು. ಈ ಬಗ್ಗೆ ವರದಿ ತರಿಸಿಕೊಂಡು, ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಸೂಚಿಸುವುದಾಗಿ ಹೇಳಿ ಸಮಾಧಾನಪಡಿಸಿದರು.

ಪರ–ವಿರೋಧ: ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ ವ್ಯಕ್ತಿ ಸಂಬಂಧ ಅನುಕೂಲತೆಗಳಿಗಾಗಿ ನೀಡಿದ್ದ 7.83 ಕೋಟಿ ರೂ. ಅನುದಾನವನ್ನು ಸಮುದಾಯ ಸಂಬಂಧ ಅನುಕೂಲತೆಗಳಿಗೆ ಬದಲಿಸಿಕೊಳ್ಳಲು ಚಾಮುಂಡೇಶ್ವರಿ, ಚಾಮರಾಜ ಹಾಗೂ ನರಸಿಂಹರಾಜ ಕ್ಷೇತ್ರಗಳ ಶಾಸಕರ ಕೋರಿದ್ದಕ್ಕೆ ಪರ–ವಿರೋಧ ವ್ಯಕ್ತವಾಯಿತು. ಬಿಜೆಪಿಯ ಸಾತ್ವಿಕ್ ಮಾತನಾಡಿ, ವೈಯಕ್ತಿಕ ಅನುಕೂಲತೆ ಕಲ್ಪಿಸಲು ನೀಡಿರುವ ಅನುದಾನವನ್ನು ಬೇರೆ ಕಾರ್ಯಗಳಿಗೆ ಬಳಸಿಕೊಳ್ಳಬಾರದು. ಎಸ್‌ಸಿಪಿ, ಟಿಎಸ್‌ಪಿ ಅನುದಾನವನ್ನು ಆಯಾಯ ಉದ್ದೇಶಗಳಿಗಷ್ಟೇ ಉಪಯೋಗಿಸಬೇಕೆಂದು ಪಟ್ಟು ಹಿಡಿದರು. ಈ ಸಂಬಂಧ ಸುದೀರ್ಘ ಚರ್ಚೆಯಾಗಿ ವಿಷಯ ಮುಂದೂಡಲಾಯಿತು.

ಪುನರ್ ಪರಿಶೀಲನೆ: ಕಾಡಾ ಕಚೇರಿ ಆವರಣದಲ್ಲಿ ನಂದಿನಿ ಕ್ಷೀರಕೇಂದ್ರ ಸ್ಥಾಪಿಸಲು ಅನುಮತಿ ನೀಡಬಾರದು ಎಂದು ಸ್ಥಳೀಯ ಕಾರ್ಪೊರೇಟರ್ ಆಗ್ರಹಿಸಿದರು. ಅರಮನೆ ಕೂಗಳತೆ ದೂರದಲ್ಲಿರುವ ಪಾರಂಪರಿಕ ಕಟ್ಟಡ ಕಾಡಾ ಕಚೇರಿ ಆವರಣದಲ್ಲಿ ನಂದಿನ ಪಾರ್ಲರ್ ತೆರೆಯಲು ಲೋಕೋಪಯೋಗಿ ಇಲಾಖೆ ಅನುಮತಿ ನೀಡಿದೆ. ಮುಂದೆ ಬೀಡಿ ಅಂಗಡಿಗೂ ಅನುಮತಿ ಕೇಳಬಹುದು. ಯಾವ ಕಾರಣಕ್ಕೂ ಅನುಮತಿ ನೀಡಬೇಡಿ ಎಂದರು. ಮೇಯರ್ ಪ್ರತಿಕ್ರಿಯಿಸಿ, ಈ ಸಂಬಂಧ ಮರು ಪರಿಶೀಲನೆ ನಡೆಸುವಂತೆ ಪಾರಂಪರಿಕ ಸಮಿತಿಗೆ ಸೂಚಿಸಲಾಗುವುದು ಎಂದರು.

ಪ್ರಧಾನಿ ಮೋದಿ ಮಾತು ಕೇಳಿದ್ದರೆ 5 ವರ್ಷ ನಾನೇ ಸಿಎಂ ಆಗಿರುತ್ತಿದ್ದೆ



ಬೆಂಗಳೂರು, ಜು.13– ಅಂದು ಪ್ರಧಾನಿ ನರೇಂದ್ರ ಮೋದಿ ಅವರ ಮಾತು ಕೇಳಿದ್ದರೆ 5 ವರ್ಷ ನಾನೇ ರಾಜ್ಯದ ಮುಖ್ಯಮಂತ್ರಿಯಾಗಿ ಇರುತ್ತಿದ್ದೆ ಎಂದು ಮಾಜಿ ಮುಖ್ಯಮಂತ್ರಿ, ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಗುರುವಾರ ವಿಧಾನಸಭೆಯಲ್ಲಿ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ವೇಳೆ ಸಿದ್ದರಾಮಯ್ಯ ಉತ್ತರ ನೀಡುತ್ತಿದ್ದ ಸಂದರ್ಭದಲ್ಲಿ ಆಪರೇಷನ್ ಕಮಲದ ಪ್ರಸ್ತಾಪವಾಯಿತು. ಅಷ್ಟರಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಕುಮಾರಸ್ವಾಮಿ, ಆಪರೇಷನ್ ಕಮಲ ಎಂಬುದು ಇತ್ತು. ಆದರೆ ಮಾಧ್ಯಮಗಳಲ್ಲಿ ಕಳೆದ ಕೆಲವು ದಿನಗಳಿಂದ ಆಪರೇಷನ್ ಹಸ್ತ ಎಂಬ ಸುದ್ದಿ ಬರುತ್ತಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಏಕೆ ಅವರ ಜೊತೆ ಸೇರಿಕೊಂಡಿದ್ದೀರಿ ಎಂದು ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದರು.

ಸಿದ್ದರಾಮಯ್ಯ ಪ್ರಶ್ನೆಗೆ ಉತ್ತರಿಸಿದ ಕುಮಾರಸ್ವಾಮಿ, ಪ್ರಧಾನಿ ನರೇಂದ್ರ ಮೋದಿ ಅವರು 2019ರಲ್ಲಿ ನನ್ನ ಜೊತೆ ಒಂದೂವರೆ ಗಂಟೆ ಚರ್ಚೆ ಮಾಡಿದ್ದರು. ಅವರ ಮಾತು ಕೇಳಿದ್ದರೆ ಐದು ವರ್ಷ ಸಿಎಂ ಆಗಿರುತ್ತಿದ್ದೆ ಎಂದು ಹೇಳಿದರು. ಪದೇ ಪದೆ ಬಿಜೆಪಿಯ ಬಿ ಟೀಂ ಎಂದು ಜೆಡಿಎಸ್ ಅನ್ನು ಟೀಕಿಸುವ ಮುನ್ನ ಈ ವಿಚಾರ ತಿಳಿದುಕೊಳ್ಳಿ.

ಕಾಂಗ್ರೆಸ್ ಜೊತೆಗೆ ಸಮ್ಮಿಶ್ರ ಸರ್ಕಾರ ನಡೆಸುತ್ತಿದ್ದ ಸಂದರ್ಭದಲ್ಲಿ ಲೋಕಸಭಾ ಚುನಾವಣೆಯ ವೇಳೆ ಪ್ರಧಾನಿ ನರೇಂದ್ರ ಮೋದಿ ಕರೆದು ಒಂದೂವರೆ ಗಂಟೆಗಳ ಕಾಲ ಚರ್ಚಿಸಿದ್ದರು. ಮುಂದಿನ ನಾಲ್ಕು ವರ್ಷ ಯಾವುದೇ ಸಮಸ್ಯೆ ಇರೊಲ್ಲ, ಸರ್ಕಾರಕ್ಕೆ ಬೆಂಬಲ ಕೊಡುತ್ತೇವೆ ಎಂದು ಆಹ್ವಾನ ನೀಡಿದ್ದರು ಎಂದರು ಕುಮಾರಸ್ವಾಮಿ.

ಪಿ.ಕೋಸಲರಾಮನ್ ನಿಧನ



ಮೈಸೂರು: ಮೈಸೂರಿನ ಹೆಬ್ಬಾಳ ನಿವಾಸಿ ಪಿ.ಕೋಸಲರಾಮನ್ (59) ಗುರುವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಮೃತರು ಪತ್ನಿ ಮಂಜುಳಾ ರಾಮನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜು.14) ಮಧ್ಯಾಹ್ನ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗರ್ಭಿಣಿ, ಬಾಣಂತಿಯರಿಗೆ ಕೊಳೆತ ಮೊಟ್ಟೆ ವಿತರಣೆ

● ಕುಶಾಲನಗರ ತಾಲೂಕು ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯಲ್ಲಿ ಘಟನೆ ● ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಮಹಿಳೆಯರ ಆಕ್ರೋಶ

ಕುಶಾಲನಗರ, ಜು.13– ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕ ಆಹಾರ ವಿತರಿಸಬೇಕಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೊಳೆತ ಮೊಟ್ಟೆಯನ್ನು ವಿತರಿಸಿದೆ.



ಸಮೀಪದ ಕೂಡುಮಂಗಳೂರು ಪಂಚಾಯಿತಿ ವ್ಯಾಪ್ತಿಯ ಬಸವನತ್ತೂರು ಅಂಗನವಾಡಿ ವ್ಯಾಪ್ತಿಯಲ್ಲಿ ಈ ಪ್ರಕರಣ ಸಂಭವಿಸಿದ್ದು, ಇದು ಗರ್ಭಿಣಿ ಮತ್ತು ಬಾಣಂತಿಯರ ಆರೋಗ್ಯದ ಮೇಲೆ ಪರಿಣಾಮ ಬೀರಿದೆ.

ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ ವತಿಯಿಂದ ಅಂಗನವಾಡಿಗಳ ಮೂಲಕ ಗರ್ಭಿಣಿ ಹಾಗೂ ಬಾಣಂತಿಯರಿಗೆ ಉತ್ತಮ ಆರೋಗ್ಯ ಕಾಪಾಡುವ ಉದ್ದೇಶದಿಂದ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತಿದೆ. ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಕೊಳೆತ ಹಾಗೂ ವಾಸನೆ ಭರಿತ ಕೋಳಿ ಮೊಟ್ಟೆಗಳನ್ನು ವಿತರಿಸಿದ್ದು, ಮಹಿಳೆಯರು ಆಕ್ರೋಶಭರಿತರಾಗಿದ್ದಾರೆ.

ಕೂಡಿಗೆ ಬಳಿಯ ಬಸವನತ್ತೂರು ಅಂಗನವಾಡಿ ಕೇಂದ್ರದಲ್ಲಿ ಕೂಡಿಗೆಯ ಬಾಣಂತಿ ಮಹಿಳೆ ಗೀತಾ ಎಂಬುವರಿಗೆ ನೀಡಿದ್ದ ಮೊಟ್ಟೆ ಕಪ್ಪು ಬಣ್ಣಕ್ಕೆ ತಿರುಗಿ ವಾಸನೆಯಿಂದ ಕೂಡಿತ್ತು ಎಂದು ದೂರಲಾಗಿದೆ.

ಒಂದು ವೇಳೆ ಈ ಕೊಳೆತ ಸ್ಥಿತಿಯಲ್ಲಿನ ಕಳಪೆ ಮೊಟ್ಟೆಗಳನ್ನು ತಿಂದಿದ್ದಲ್ಲಿ ಬಾಣಂತಿ ಹಾಗೂ ಶಿಶುಗಳ ಆರೋಗ್ಯದ ಸ್ಥಿತಿ ಯಾವ ದುಸ್ಥಿತಿಗೆ ತಲುಪುತ್ತಿತ್ತೋ ಏನೋ ಎಂದು ಮಹಿಳೆಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಿಳೆಯರು ಹಾಗೂ ಎಳೆಯ ಹಸುಳೆಗಳ ಆರೋಗ್ಯದ ಹಿತದೃಷ್ಟಿಯಿಂದ ನೀಡುತ್ತಿರುವ ಪೌಷ್ಟಿಕ ಆಹಾರವಾದ ಉತ್ತಮ ಗುಣಮಟ್ಟದ ಮೊಟ್ಟೆಯನ್ನು ನೀಡುವಲ್ಲಿ ಬೇಜವಾಬ್ದಾರಿ ತೋರಿರುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಭಾಸ್ಕರ್ ನಾಯಕ್ ಒತ್ತಾಯಿಸಿದ್ದಾರೆ.

ಅಧಿಕಾರಿಗಳಿಗೆ ಸೂಚನೆ....

ಕೊಡಗು ಸೇರಿದಂತೆ ರಾಜ್ಯದ ಕೆಲವು ಕಡೆ ಕೊಳೆತ ಮತ್ತು ಕಳಪೆ ಮಟ್ಟದ ಮೊಟ್ಟೆಗಳನ್ನು ವಿತರಿಸಿರುವುದು ನನ್ನ ಗಮನಕ್ಕೆ ಬಂದಿದ್ದು, ತಕ್ಷಣ ಅದನ್ನು ನಿಲ್ಲಿಸಬೇಕು. ಬೇರೆ ಮತ್ತು ಉತ್ತಮ ಮೊಟ್ಟೆಗಳನ್ನು ವಿತರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಇಂತಹ ಮೊಟ್ಟೆಗಳನ್ನು ಸರಬರಾಜು ಮಾಡಿದ ಗುತ್ತಿಗೆದಾರನ ಮೇಲೂ ಕ್ರಮ ಜರುಗಿಸಲಾಗುವುದು.

- ಲಕ್ಷ್ಮೀ ಹೆಬ್ಬಾಳ್ಕರ್, ಮಹಿಳಾ ಮತ್ತು ಕಲ್ಯಾಣ ಸಚಿವರು.

ಜಿಲ್ಲಾಧಿಕಾರಿ ಕಚೇರಿ ತಡೆಗೋಡೆ ಕಾಮಗಾರಿ ಕಳಪೆ ಪ್ರಕರಣ

ತನಿಖೆಗೆ ಮುಂದಾದ ಲೋಕಾಯುಕ್ತ

ಜು.17, 18ರಂದು ತಜ್ಞರು, ಅಧಿಕಾರಿಗಳು ಸ್ಥಳಕ್ಕೆ ಭೇಟಿ

ಮಡಿಕೇರಿ, ಜು.13– ಕೊಡಗು ಜಿಲ್ಲಾಧಿಕಾರಿ ಕಚೇರಿ ತಡೆಗೋಡೆ ಕಳಪೆ ಕಾಮಗಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಅಧಿಕಾರಿಗಳು ತನಿಖೆಗೆ ಮುಂದಾಗಿದ್ದಾರೆ. ಜು.17 ಮತ್ತು 18ರಂದು ಲೋಕಾಯುಕ್ತ ತನಿಖಾ ತಜ್ಞರು, ಅಧಿಕಾರಿಗಳು ಮಡಿಕೇರಿಗೆ ಆಗಮಿಸಲಿದ್ದು, ತಡೆಗೋಡೆ ಪರಿಶೀಲನೆ ನಡೆಸಲಿದ್ದಾರೆ.

ಈ ಕಳಪೆ ಕಾಮಗಾರಿಯ ಕುರಿತು ಕಾಂಗ್ರೆಸ್ ಮುಖಂಡ ತೆನ್ನಿರ ಮೈನಾ ಅವರು ಮಡಿಕೇರಿ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನಿರ್ವಹಣೆ ಜವಾಬ್ದಾರಿ ಹೊತ್ತ ಕಿರಿಯ ಅಭಿಯಂತರರ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲೆಗಳ ಸಹಿತ ಸವಿಸ್ತಾರವಾಗಿ 2022ರಲ್ಲಿ ದೂರು ದಾಖಲಿಸಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ತಕ್ಷಣವೇ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರಿಗೂ ಈ ಕುರಿತು ದೂರು ನೀಡಿದ್ದರು. ಪರಿಣಾಮ ಇಲಾಖೆಯ ಕಿರಿಯ ಇಂಜಿನಿಯರ್ ದೇವರಾಜ್ ಎಂಬವರು ಅಮಾನತ್ತಿಗೆ ಒಳಗಾಗಿದ್ದಾರೆ.

ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್‌ಗೌಡ ತಮ್ಮ ಚೊಚ್ಚಲ ಅಧಿವೇಶನದಲ್ಲಿಯೇ ಈ ತಡೆಗೋಡೆ ಕಳಪೆ ಕಾಮಗಾರಿ ಬಗ್ಗೆ ಪ್ರಶ್ನೆ ಮಾಡಿ ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಬಗ್ಗೆ ತನಿಖೆ ನಡೆಸಲು ಒತ್ತಾಯಿಸಿದ್ದರು.



ಇದೀಗ ಕರ್ನಾಟಕ ಲೋಕಾಯುಕ್ತ ಜು.17 ಮತ್ತು 18ರಂದು ತಮ್ಮ ಇಲಾಖೆಯ ತಜ್ಞರಿಂದ ಸ್ಥಳ ಪರಿಶೀಲನೆ ನಡೆಸಿ ಕ್ರಮ ಜರುಗಿಸಲು ಮುಂದಾಗಿದೆ. ಮಾತ್ರವಲ್ಲದೇ, ದೂರುದಾರ ತೆನ್ನಿರಾ ಮೈನಾ ಅವರ ಸಮ್ಮುಖದಲ್ಲೇ ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಶಾಸಕ ಎ.ಎಸ್. ಪೊನ್ನಣ್ಣ ಹಾಗೂ ಹೈಕೋರ್ಟ್ ವಕೀಲ ಹೆಚ್.ಎಸ್. ಚಂದ್ರಮೌಳಿ ಅವರುಗಳು ತನಿಖೆ ಚುರುಕುಗೊಳಿಸುವಂತೆ ಲೋಕಾಯುಕ್ತ ಅಧಿಕಾರಿಗಳನ್ನು ಒತ್ತಾಯಿಸಿದ್ದರು.

ಮನೆಗೆ ಗುದ್ದಿದ ಕಾರು; ಅಪಾಯದಿಂದ ಪಾರು



ಮಡಿಕೇರಿ, ಜು.13– ರಸ್ತೆ ಅಪಘಾತವೊಂದರಲ್ಲಿ ಕಾರಿನಲ್ಲಿದ್ದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಶನಿವಾರಸಂತೆಯಲ್ಲಿ ನಡೆದಿದೆ. ಶನಿವಾರಸಂತೆಯಿಂದ ಕೊಡ್ಲಿಪೇಟೆ ಕಡೆಗೆ ಹೋಗುತ್ತಿದ್ದ ಕಾರು ಚಾಲಕನ ನಿಯಂತ್ರಣ ಕಳೆದುಕೊಂಡು ಶನಿವಾರಸಂತೆ ಮಧ್ಯಪೇಟೆ ಮಸೀದಿ ಮುಂಭಾಗ ಮನೆಯೊಂದಕ್ಕೆ ಗುದ್ದಿದೆ. ನಂತರ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಇದರಿಂದ ಕಾರು ನಜ್ಜುಗುಜ್ಜಾಗಿದ್ದು, ವಿದ್ಯುತ್ ಕಂಬ ಮುರಿಯಲ್ಪಟ್ಟಿದೆ. ಕಾರು ಚಲಾವಣೆ ಮಾಡುತ್ತಿದ್ದ ರಕ್ಷಿತ್ ಎಂಬುವರಿಗೆ ಗಾಯವಾಗಿದೆ.

ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ತಿದ್ದುಪಡಿ ಕಾನೂನು ರದ್ದು ಘೋಷಣೆ ಸ್ವಾಗತಾರ್ಹ

ವಿರಾಜಪೇಟೆ, ಜು.13– ಕೃಷಿ ಬಿಕ್ಕಟ್ಟಿನಿಂದ ಹೆಚ್ಚಾಗುತ್ತಿರುವ ರೈತರ ಆತ್ಮಹತ್ಯೆಗಳು ಮತ್ತು ವಲಸೆಯು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿದ್ದು ಈ ಕುರಿತು ರಾಜ್ಯ ಸರ್ಕಾರವು ಕ್ರಮ ವಹಿಸಬೇಕಿದ್ದು, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ಕಾಯ್ದೆ 2020 ಅನ್ನು ರಾಜ್ಯ ಸರಕಾರವು ರದ್ದುಗೊಳಿಸುವ ಘೋಷಣೆಯು ಸ್ವಾಗತಾರ್ಹವಾಗಿದೆ ಎಂದು ಸಿಪಿಐ (ಎಂಎಲ್) ಲಿಬರೇಷನ್ ಕೊಡಗು ಜಿಲ್ಲಾ ಕಾರ್ಯದರ್ಶಿ ಎಂ.ಕೆ. ಮೋಹನ್ ತಿಳಿಸಿದ್ದಾರೆ.



ರಾಜ್ಯ ಸರಕಾರ ಉದ್ಯೋಗ ಖಾತ್ರಿ ಯೋಜನೆಗೆ ಮತ್ತಷ್ಟು ಅನುದಾನ ಒದಗಿಸಬೇಕಿತ್ತು. ಭೂರಹಿತ ಜನರ ವಿರುದ್ಧ 'ಭೂ ಕಬಳಿಕೆ'ಯ ಆರೋಪದ ಮೇರೆಗೆ ಪ್ರಕರಣಗಳನ್ನು ಹಿಂಪಡೆಯುವ ಕುರಿತು ಮತ್ತು ಅವರಿಗೆ ಹಕ್ಕುಪತ್ರಗಳನ್ನು ನೀಡಿ "ಉಳುವವನೇ ಭೂಮಿಯ ಒಡೆಯ' ಎಂಬ ನೀತಿಯನ್ನು ಜಾರಿಗೊಳಿಸುವ ಕುರಿತು ಈ ಬಜೆಟ್ ಹೆಚ್ಚು ಆದ್ಯತೆ ನೀಡಿಲ್ಲ ಎಂದರು.

ಬಿಜೆಪಿ ಸರ್ಕಾರವು ಹಲವಾರು ಕಾಯ್ದೆಗಳಿಗೆ ತಂದ ತಿದ್ದುಪಡಿಗಳನ್ನೂ ಸಹ ರದ್ದುಗೊಳಿಸಿರುವುದು ಅಗತ್ಯವಾಗಿದೆ ಎಂದು ತಿಳಿಸಿದ ಎಂ.ಕೆ.ಮೋಹನ್, ಮಹಿಳಾ ಕಾರ್ಮಿಕರು ಕನಿಷ್ಠ ವೇತನದ ಹಕ್ಕುಗಳಿಗಾಗಿ ಸತತವಾಗಿ ಹೋರಾಟವನ್ನು ನಡೆಸಿಕೊಂಡು ಬಂದಿದ್ದು ಅವರ ಹಕ್ಕೊತ್ತಾಯವನ್ನು ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳಬೇಕಿದೆ ಎಂದರು. ಬೆಂಗಳೂರು ಘನತ್ಯಾಜ್ಯ ನಿರ್ವಹಣೆಗೆ 1000 ಕೋಟಿ ರೂ. ಮಂಜೂರಾತಿ ಮಾಡಲಾಗಿದೆ. ಅದರ ಬದಲು ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಆದ್ಯತೆ ಕೊಡಬಹುದಿತ್ತು, ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಹಾಯ ಹಂಚಿಕೆಯಲ್ಲಿ ಅನುದಾನವನ್ನು ಕಡಿಮೆ ಮಾಡಿರುವುದರಿಂದ ರಾಜ್ಯದಲ್ಲಿ ಆರ್ಥಿಕ ಸಂಕಷ್ಟಕ್ಕೆ ಕೇಂದ್ರ ಸರ್ಕಾರವೇ ಕಾರಣವಾಗಿದೆ. ಇದಕ್ಕೆ ರಾಜ್ಯದ ಜನತೆ ಧ್ವನಿ ಎತ್ತಬೇಕಿದೆ ಎಂದರು.

ಮರಂದೋಡದಲ್ಲಿ ಮತ್ತೆ ಕಾಡಾನೆಗಳ ಲಗ್ಗೆ



ಕಾಫಿ, ಅಡಿಕೆ, ಬಾಳೆ ಫಸಲು ನಾಶ

ನಾಪೋಕ್ಲು, ಜು.13– ಸಮೀಪದ ಮರಂದೋಡ ಗ್ರಾಮದಲ್ಲಿ ಮತ್ತೆ ಬೀಡುಬಿಟ್ಟಿರುವ ಆನೆಗಳು ಅನ್ನಾಡಿಯಂಡ ದಿಲೀಪ್ ಅವರ ತೋಟಕ್ಕೆ ಮಂಗಳವಾರ ಲಗ್ಗೆ ಇಟ್ಟು ಅಪಾರ ಪ್ರಮಾಣದ ನಷ್ಟ ಉಂಟುಮಾಡಿವೆ.

ಮರಂದೋಡ ಗ್ರಾಮದಲ್ಲಿ ಕಾಡಾನೆಗಳ ಉಪಟಳದಿಂದ ಗ್ರಾಮಸ್ಥರು ನಲುಗುವಂತಾಗಿದ್ದು, ಕಾಡಾನೆಗಳು ತೋಟಗಳಿಗೆ ನುಗ್ಗಿ ಕಾಫಿ, ಅಡಿಕೆ, ಬಾಳೆಗಿಡಗಳನ್ನು ಧ್ವಂಸ ಪಡಿಸಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಗ್ರಾಮಸ್ಥರು ರಸ್ತೆ ತಡೆ ನಡೆಸಿ ಪ್ರತಿಭಟಿಸಿದ್ದರು.

ಮತ್ತೆ ತೋಟಗಳಿಗೆ ನುಗ್ಗಿರುವ ಕಾಡಾನೆಗಳು ಬಾಳೆಗಿಡಗಳನ್ನು ಧ್ವಂಸ ಮಾಡಿ ರಸ್ತೆಗಳಲ್ಲಿ ಎಳೆದೊಯ್ದಿರುವ ದೃಶ್ಯಗಳು ಕಂಡು ಬಂದಿವೆ. ಹಲಸು, ಕಾಫಿ, ಬಾಳೆ ಮತ್ತಿತರ ಕೃಷಿ ವಸ್ತುಗಳನ್ನು ಕಾಡಾನೆಗಳು ಧ್ವಂಸ ಮಾಡಿದ್ದು ಮಂಗಳವಾರ ರಾತ್ರಿ ಮನೆಯಂಗಳಕ್ಕೆ ಬಂದಿರುವುದರಿಂದ ಜೀವ ಭಯವಾಗುತ್ತಿದೆ ಎಂದು ಕೃಷಿಕ ಅನ್ನಾಡಿಯಂಡ ದಿಲೀಪ್ ಕುಮಾರ್ ತಮ್ಮ ಬೇಸರವನ್ನು ವ್ಯಕ್ತಪಡಿಸಿ ಶಾಶ್ವತ ಪರಿಹಾರವಾಗಿ ಆನೆಗಳನ್ನು ಸ್ಥಳಾಂತರಿಸಲು ಸಂಬಂಧಿಸಿದವರು, ಜನಪ್ರತಿನಿಧಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಕಾಡಾನೆ ಉಪಟಳದಿಂದ ಕಂಗೆಟ್ಟ ಕೋಕೇರಿ, ಮರಂದೋಡ, ನರಿಯಂದಡ ಹಾಗೂ ಚೇಲಾವರ ಗ್ರಾಮಸ್ಥರು ಕಳೆದ ಸೋಮವಾರ ಚೆಯ್ಯಂಡಾಣೆಯಲ್ಲಿ ರಸ್ತೆತಡೆ ಮಾಡಿ ಪ್ರತಿಭಟನೆ ನಡೆಸಿದ್ದರು.



ಗುಂಡಿನ ಮತ್ತೆ ಆಪತ್ತು

ದೊಣ್ಣೆಯಿಂದ ಹೊಡೆದು ತಾಯಿಯನ್ನೇ ಕೊಂದ ಮಗ

ಮಡಿಕೇರಿ, ಜು.13– ಕುಡಿದ ಮತ್ತಿನಲ್ಲಿ ಮಗನೊಬ್ಬ ಹೆತ್ತಾಕೆಯನ್ನೇ ದೊಣ್ಣೆಯಿಂದ ಹೊಡೆದು ಕೊಂದಿರುವ ಘಟನೆ ಶನಿವಾರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ರಾಜಶೇಖರ್ (22) ಎಂಬಾತನೇ ಕೊಲೆ ಆರೋಪಿಯಾಗಿದ್ದು, ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಶನಿವಾರಸಂತೆ ವ್ಯಾಪ್ತಿಯ ಕೊಡ್ಲಿಪೇಟೆ ಹೋಬಳಿ ಬೆಸ್ಸೂರು ಗ್ರಾಮ ಪಂಚಾಯಿತಿಗೆ ಒಳಪಟ್ಟ ಕಟ್ಟೆಪುರ ಹಾಡಿಯಲ್ಲಿ ಈ ಘಟನೆ ನಡೆದಿದೆ. ಕಟ್ಟೆಪುರ ಹಾಡಿ ನಿವಾಸಿ ಜೇನು ಕುರುಬರ ರಾಜಶೇಖರ್ ಎಂಬಾತ ಬುಧವಾರ ರಾತ್ರಿ ಕುಡಿದು ಬಂದು ತನ್ನ ತಾಯಿ ಲಲಿತ(45) ಅವರ ಜೊತೆ ಗಲಾಟೆ ಮಾಡಿದ್ದಾನೆ ನಂತರ ತಾಯಿ ಮಗನ ಗಲಾಟೆ ವಿಕೋಪಕ್ಕೆ ತಿರುಗಿದ್ದು, ಈ ಸಂದರ್ಭದಲ್ಲಿ ರಾಜಶೇಖರ್ ದೊಣ್ಣೆಯಿಂದ ತಾಯಿ ಲಲಿತ ತಲೆಗೆ ಹೊಡೆದು ಹತ್ಯೆ ಮಾಡಿದ್ದಾನೆ.

ಘಟನಾ ಸ್ಥಳಕ್ಕೆ ಶನಿವಾರಸಂತೆ ವೃತ್ತ ನಿರೀಕ್ಷಕ ಪರಶಿವಮೂರ್ತಿ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೊಲೆ ಪ್ರಕರಣ ದಾಖಲಿಸಿಕೊಂಡಿರುವ ಶನಿವಾರಸಂತೆ ಪೊಲೀಸರು ಆರೋಪಿ ರಾಜಶೇಖರನನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಬಿಲ್ ಕಲೆಕ್ಟರ್‌ಗೆ ಚೂರಿಯಿಂದ ಇರಿತ

ಬಿಲ್‌ನಲ್ಲಿ ವ್ಯತ್ಯಾಸದಿಂದಾದ ಅನಾಹುತ

ಮಡಿಕೇರಿ, ಜು.13– ಕರೆಂಟ್ ಬಿಲ್ ವಿಚಾರಕ್ಕೆ ಸಂಬಂಧಿಸಿದಂತೆ ಬಿಲ್ ಕಲೆಕ್ಟರ್‌ಗೆ ಚೂರಿ ಇರಿದ ಘಟನೆ ಸೋಮವಾರಪೇಟೆ ತಾಲೂಕಿನ ಜಂಬೂರುಬಾಣೆ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಬಡಾವಣೆಯಲ್ಲಿ ನಡೆದಿದೆ.

ಕರೆಂಟ್ ಬಿಲ್‌ನಲ್ಲಿ ವ್ಯತ್ಯಾಸ ಬಂದ ಹಿನ್ನೆಲೆಯಲ್ಲಿ ಬಿಲ್‌ಕಲೆಕ್ಟರ್ ಪ್ರಶಾಂತ್ ಮತ್ತು ನಿವಾಸಿ ರತೀಶ್ ಎಂಬುವರ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಈ ಸಂದರ್ಭ ರತೀಶ್ ಬಿಲ್‌ಕಲೆಕ್ಟರ್ ಪ್ರಶಾಂತ್‌ಗೆ ಚೂರಿಯಿಂದ ಇರಿದಿದ್ದಾನೆ. ಇದರಿಂದ ಪ್ರಶಾಂತ್‌ಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಘಟನೆ ಕುರಿತು ಮಾದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದ್ದು, ಚೂರಿ ಇರಿದ ಆರೋಪಿ ರತೀಶ್‌ನನ್ನು ಪೊಲೀಸರು ಬಂಧಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಜು.18, ಹಡಪದ ಅಪ್ಪಣ್ಣ ಜಯಂತಿ

ಚಾಮರಾಜನಗರ, ಜು.13– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಹಡಪದ ಅಪ್ಪಣ್ಣ ಜಯಂತಿಯನ್ನು ಜು.18ರಂದು ಬೆಳಗ್ಗೆ 11 ಗಂಟೆಗೆ ನಗರದ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಡಾ. ಡಿ.ತಿಮ್ಮಯ್ಯ, ಮಧು ಜಿ. ಮಾದೇಗೌಡ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್. ಮಮತ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕೊಳ್ಳೇಗಾಲ ನಿವೃತ್ತ ಶಿಕ್ಷಕ ಶಿವಣ್ಣ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಮಲಿಯೂರು ಪಿಎಸಿಎಸ್ ವಂಚನೆ ಪ್ರಕರಣ ಸಂಬಂಧ

ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಪ್ರತಿಭಟನೆ



ಚಾಮರಾಜನಗರ, ಜು.13– ತಾಲೂಕಿನ ಮಲಿಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತೇವೆಂದು ರೈತರ ಚಿನ್ನ ಅಡವಿಟ್ಟುಕೊಂಡು ವಂಚಿಸಿರುವ ಪ್ರಕರಣ ಸಂಬಂಧ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದನ್ನು ಖಂಡಿಸಿ ಕಬ್ಬು ಬೆಳೆಗಾರರ ಸಂಘ ಮತ್ತು ವಂಚನೆಗೊಳಗಾದ ರೈತರು ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಜಿಲ್ಲಾಡಳಿತ ಭವನದ ಆವರಣಕ್ಕೆ ತೆರಳಿ ಸಂಬಂಧಪಟ್ಟವರ ವಿರುದ್ಧ ಕ್ರಮಕ್ಕೆ ಪಟ್ಟು ಹಿಡಿದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರಹುಂಡಿ ಭಾಗ್ಯರಾಜ್ ಮಾತನಾಡಿ, ಪ್ರಕರಣದ ಸಂಬಂಧ ಜೂ.6 ರಂದು ಸ್ಥಳೀಯ ರೈತರು ಮತ್ತು ರೈತ ಮಹಿಳೆಯರು ಚಿನ್ನ ವಾಪಸ್ ಕೊಡಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದಾಗ ಅಂದಿನ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದ್ದರು. ಆದರೆ ಇಲ್ಲಿವರೆಗೂ ಕ್ರಮ ವಹಿಸಿಲ್ಲ ಎಂದರು.

ರೈತರ ಚಿನ್ನ ವಾಪಸ್ ಕೊಡಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ. ಆದ್ದರಿಂದ ಸ್ಥಳಕ್ಕೆ ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ಉಪನಿಬಂಧಕರು ಬಂದು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವವರೆಗೂ ನಾವು ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಎಚ್ಚರಿಸಿದರು.

ಕೋಟ್ಯಾಂತರ ರೂ. ವಂಚನೆಯಾಗಿದೆ. ರೈತರು ಮತ್ತು ಅಮಾಯಕರ ಚಿನ್ನ ಗಿರವಿ ಇಟ್ಟುಕೊಂಡು ಅದನ್ನು ತೆಗೆದುಕೊಂಡು ಹೋಗಿ ಬೇರೆ ಬ್ಯಾಂಕಿನಲ್ಲಿ ಇಟ್ಟು ವಂಚಿಸಿದ್ದಾರೆ. ಹೀಗಾಗಿ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಚಿನ್ನವನ್ನು ವಾಪಸ್ ಕೊಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಜಿಲ್ಲಾ ಸಹಾಯಕ ಉಪ ನಿಬಂಧನಾಧಿಕಾರಿ ಶೀಲಾ ಅರಸ್ ಮತ್ತು ತಾಲೂಕು ಸಹಾಯಕ ಉಪ ನಿಬಂಧನಾಧಿಕಾರಿ ದಯಾನಂದ ಅವರನ್ನು ತರಾಟೆಗೆ ತೆಗೆದುಕೊಂಡ ಪ್ರತಿಭಟನಾಕಾರರು ನಿಮ್ಮ ನಿರ್ಲಕ್ಷ್ಯದಿಂದಾಗಿ ತಪ್ಪಿತಸ್ಥರ ವಿರುದ್ಧ ಇಲ್ಲಿವರೆಗೂ ಕ್ರಮ ತೆಗೆದುಕೊಂಡಿಲ್ಲ. ತಪ್ಪಿತಸ್ಥರನ್ನು ಸ್ಥಳಕ್ಕೆ ಕರೆಸಿ. ಜಿಲ್ಲಾಧಿಕಾರಿಗಳ ಮುಂದೆ ತೀರ್ಮಾನವಾಗುವವರೆಗೂ ನಾವು ಪ್ರತಿಭಟನೆ ಮುಂದುವರಿಸುತ್ತೇವೆ ಎಂದು ಎಚ್ಚರಿಸಿದರು. ಜಿಲ್ಲಾ ಸಹಾಯಕ ಉಪ ನಿಬಂಧನಾಧಿಕಾರಿ ಶೀಲಾ ಅರಸ್ ಮಾತನಾಡಿ, ಈಗಾಗಲೇ ತಪ್ಪಿತಸ್ಥರ ವಿರುದ್ಧ ದೂರು ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಸಮಜಾಯಿಷಿ ನೀಡಿದರು.

ಪ್ರತಿಭಟನೆಯಲ್ಲಿ ಹಾಲಿನ ನಾಗರಾಜು, ಪಟೇಲ್ ಶಿವಮೂರ್ತಿ, ಶಿವಸ್ವಾಮಿ, ನಂಜುಂಡಸ್ವಾಮಿ, ಶಿವಕುಮಾರ್, ಲಕ್ಷ್ಮಮ್ಮ, ರತ್ನಮ್ಮ, ಮಹದೇವಸ್ವಾಮಿ, ಕೊಂಗಳಪ್ಪ, ವೀರಭದ್ರಸ್ವಾಮಿ, ಮಹದೇವಮ್ಮ, ಇತರರಿದ್ದರು.

ಚಾ.ನಗರದಲ್ಲಿ ಸಂಭ್ರಮದಿಂದ ನಡೆದ ಶ್ರೀ ಚಾಮುಂಡೇಶ್ವರಿ ವಿಸರ್ಜನಾ ಮಹೋತ್ಸವ



ಚಾಮರಾಜನಗರ ಜು.13– ನಗರದ ರೈಲ್ವೆ ಬಡಾವಣೆಯಲ್ಲಿ ಗೊಂದಲಿ ಮರಾಠ ಸಮಾಜದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಶ್ರೀ ಚಾಮುಂಡೇಶ್ವರಿ ಅಮ್ಮನವರ ವಿಸರ್ಜನಾ ಮಹೋತ್ಸವವು ಇಂದು ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಕಳೆದ ಮೂರು ದಿನಗಳ ಕಾಲ ಶ್ರೀ ಚಾಮುಂಡೇಶ್ವರಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸುವ ಮೂಲಕ ಬುಧವಾರ ದೇವಿ ಮೂರ್ತಿಯನ್ನು ಅಲಂಕೃತ ಬೆಳ್ಳಿ ರಥದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ವಿಸರ್ಜಿಸುವ ಮೂಲಕ ಭಕ್ತಾದಿಗಳು ಭಕ್ತಿಯನ್ನು ಸಮರ್ಪಿಸಿದರು.

ಮಂಗಳವಾರ ಬೆಳಗ್ಗೆ ಪುರೋಹಿತರಾದ ಪ್ರದೀಪ್ ಕುಮಾರ್ ದೀಕ್ಷಿತ್ ಅವರ ನೇತೃತ್ವದಲ್ಲಿ ಹೋಮ, ಹವನ ನಡೆಸಲಾಯಿತು. ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಮಹಾಮಂಗಳಾರತಿಯೊಂದಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಮೆರವಣಿಗೆಯಲ್ಲಿ ಮಂಗಳವಾದ್ಯ, ಬ್ಯಾಂಡ್‌ಸೆಟ್, ಡೊಳ್ಳು ಕುಣಿತ, ಇತರೆ ಕಲಾತಂಡಗಳು ಭಾಗವಹಿಸಿದ್ದವು. ಮಹಿಳೆಯರು ಮತ್ತು ಯುವತಿಯರು ನೃತ್ಯ ಮಾಡಿ ಸಾರ್ವಜನಿಕರ ಗಮನ ಸೆಳೆದರು.

ಮೆರವಣಿಗೆಯಲ್ಲಿ ಸಮಾಜದ ಮುಖಂಡರಾದ ಭವಾನಿ ಶಂಕರ್ ರಾವ್, ಶಿವಕುಮಾರ್‌ರಾವ್, ಮಣಿರಾವ್ (ಬೋರತ್), ದೌಲತ್‌ರಾವ್, ಬಾಬುರಾವ್, ಕಾಳೂರ, ಆನಂದ್‌ರಾವ್, ರವಿಕುಮಾರ್, ಗಣೇಶ್ ರಾವ್, ರಾಮು, ನಾಗೇಶ್, ಶಂಕರ್ ರಾವ್, ಸುರೇಶ್, ಸಿದ್ದೂರಾವ್, ಜನಾರ್ಧನ್, ತ್ರಿವೇಣಿ, ಲಕ್ಷ್ಮೀ, ಜ್ಯೋತಿ ಭಾಯಿ, ಎಲ್ಲಮ್ಮ, ನಿರ್ಮಲಾ, ಸುನೀತಾ, ಲಕ್ಷ್ಮೀಭಾಯಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಾಯಕ ಜನಾಂಗದ ಅಭಿವೃದ್ಧಿಗೆ ಒತ್ತು: ರಾಮಚಂದ್ರ



ಚಾಮರಾಜನಗರ, ಜು.13– ನಾಯಕ ಸಮುದಾಯವನ್ನು ಸಂಘಟಿಸಿ ಶೈಕ್ಷಣಿಕ, ರಾಜಕೀಯ ಹಾಗೂ ಆರ್ಥಿಕವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ನೂತನ ಅಧ್ಯಕ್ಷ ಎಂ.ರಾಮಚಂದ್ರ ತಿಳಿಸಿದರು.

ನಗರದ ಸೋಮಣ್ಣ ಲೇಔಟ್‌ನಲ್ಲಿರುವ ತಮ್ಮ ಕಚೇರಿಯಲ್ಲಿ ಸಮುದಾಯದ ಮುಖಂಡರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಹಿಂದುಳಿದಿರುವ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಕೊಳ್ಳೇಗಾಲ ನಾಯಕ ಜನಾಂಗದ ಮುಖಂಡರಾದ ಬಾಲರಾಜ್, ಶಂಕರನಾಯಕ, ಹೆಚ್.ಎಂ.ಮಹದೇವ ನಾಯಕ, ಮಾರುತಿ, ಮಲ್ಲುಸ್ವಾಮಿ, ಕಿಚ್ಚ ರಾಜಶೇಖರ್, ಗುಂಡ್ಲುಪೇಟೆ ನಾಯಕ ಜನಾಂಗದ ಮುಖಂಡರಾದ ಹಂಗಳ ವೃಷಬೇಂದ್ರ, ವಿಶ್ವನಾಥ್, ಕೃಷ್ಣ, ರಂಗಸ್ವಾಮಿ, ರವಿ, ಕಗ್ಗಳ ರವಿ ಹಾಜರಿದ್ದರು.

ಅರ್ಜಿ ಆಹ್ವಾನ

ಚಾಮರಾಜನಗರ, ಜು.13– ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 25ಕ್ಕಿಂತ ಹೆಚ್ಚು ಕುರಿ, ಮೇಕೆ ಹೊಂದಿರುವ ಸಂಚಾರಿ, ಅರೆ ಸಂಚಾರಿ ಸಾಕಾಣಿಕೆದಾರರಿಗೆ ಟೆಂಟ್ ಇನ್ನಿತರ ಪರಿಕರ ಕಿಟ್‌ಗಳನ್ನು ಉಚಿತವಾಗಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ 18 ರಿಂದ 60 ವರ್ಷದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಸಾಮಾನ್ಯ ವರ್ಗದ ಸದಸ್ಯರು ಸಹಕಾರ ಸಂಘಗಳಲ್ಲಿ ಅರ್ಜಿ ಪಡೆದು ಸಂಘದ ಕಾರ್ಯದರ್ಶಿಗಳ ಮೂಲಕ ಜು.31ರೊಳಗೆ ಸಲ್ಲಿಸುವಂತೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ವೇಣುಗೋಪಾಲ್ ಕೊಲೆ ಪ್ರಕರಣದ ತಾರ್ಕಿಕ ಅಂತ್ಯಕ್ಕೆ ಕ್ರಮ: ಐಜಿ

ಚಾಮರಾಜನಗರ, ಜು.13– ತಿ.ನರಸೀಪುರದ ಯುವ ಬ್ರಿಗೇಡ್ ಸಂಚಾಲಕ ವೇಣುಗೋಪಾಲ ಕೊಲೆ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗುವುದು ಎಂದು ದಕ್ಷಿಣ ವಲಯ ಐಜಿ ಬೋರಲಿಂಗಯ್ಯ ತಿಳಿಸಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಗುರುವಾರ ಭೇಟಿ ನೀಡಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘಟನೆ ತಡೆಯುವ ವಿಚಾರವಾಗಿ ಪೊಲೀಸರಿಂದ ಸಣ್ಣಪುಟ್ಟ ತಪ್ಪಾಗಿದೆ. ಘಟನೆ ಬಳಿಕ ತ್ವರಿತ ಕ್ರಮ ಕೈಗೊಂಡು ಆರೋಪಿಗಳನ್ನು ಬಂಧಿಸಿದ್ದೇವೆ. ಆ ಮೂಲಕ ಕಾನೂನು ಸುವ್ಯವಸ್ಥೆಗೆ ತೊಂದರೆ ಆಗದಂತೆ ಕ್ರಮ ವಹಿಸಲಾಗಿದೆ. ಇಡೀ ಘಟನೆ ಬಗ್ಗೆ ತನಿಖೆ ನಡೆಸಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಕ್ರಮ ಕೈಗೊಂಡಿದ್ದೇವೆ ಎಂದು ತಿಳಿಸಿದರು. ಪುನೀತ್ ಫೋಟೋ ತೆರವುಗೊಳಿಸಿದ್ದೆ ಕೊಲೆಗೆ ಕಾರಣವಾಯ್ತಾ ಎಂಬ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಫೋಟೋ ವಿಚಾರ, ಬೈಕ್ ಬಿಡಲಿಲ್ಲ ಎಂಬ ವಿಚಾರಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಹಳೆ ವೈಷಮ್ಯವೂ ಇರಬಹುದು. ತನಿಖೆ ಸಂಪೂರ್ಣ ಆದ ಬಳಿಕ ಎಲ್ಲ ವಿವರ ತಿಳಿಯಲಿದೆ ಎಂದು ತಿಳಿಸಿದರು.

ಲೋಕ್ ಅದಾಲತ್‌ನಲ್ಲಿ 14837 ಪ್ರಕರಣಗಳು ಇತ್ಯರ್ಥ

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ

ಚಾಮರಾಜನಗರ, ಜು.13– ಕಳೆದ ಜು.8ರಂದು ಜಿಲ್ಲೆಯ ನ್ಯಾಯಾಲಯಗಳಲ್ಲಿ ನಡೆದ ಲೋಕ್ ಅದಾಲತ್‌ನಲ್ಲಿ ಒಟ್ಟು 14837 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ತಿಳಿಸಿದರು.



ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಗುಂಡ್ಲುಪೇಟೆ ನ್ಯಾಯಾಲಯಗಳಲ್ಲಿ ನಡೆದ ಲೋಕ ಅದಾಲತ್‌ನಲ್ಲಿ 2949 ನ್ಯಾಯಾಲಯದ ಪ್ರಕರಣಗಳು ಹಾಗೂ 11888 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿದಂತೆ ಒಟ್ಟಾರೆ 14837 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಈ ಪೈಕಿ 205 ಸಿವಿಲ್, 2774 ಕ್ರಿಮಿನಲ್ ಹಾಗೂ 11888 ವ್ಯಾಜ್ಯ ಪೂರ್ವ ಪ್ರಕರಣಗಳಾಗಿವೆ ಎಂದರು.

ಚಾಮರಾಜನಗರದಲ್ಲಿ 971 ನ್ಯಾಯಾಲಯದ ಪ್ರಕರಣಗಳು, 4616 ವ್ಯಾಜ್ಯ ಪೂರ್ವ ಪ್ರಕರಣ ಸೇರಿ ಒಟ್ಟು 5587 ಪ್ರಕರಣ, ಯಳಂದೂರಲ್ಲಿ 282 ನ್ಯಾಯಾಲಯದ ಪ್ರಕರಣಗಳು, 598 ವ್ಯಾಜ್ಯಪೂರ್ವ ಪ್ರಕರಣಗಳು ಸೇರಿ ಒಟ್ಟು 880 ಪ್ರಕರಣಗಳು, ಕೊಳ್ಳೇಗಾಲದಲ್ಲಿ 1440 ನ್ಯಾಯಾಲಯದ ಪ್ರಕರಣಗಳು, 4176 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟು 5616 ಪ್ರಕರಣ, ಗುಂಡ್ಲುಪೇಟೆಯಲ್ಲಿ 256 ನ್ಯಾಯಾಲಯದ ಪ್ರಕರಣಗಳು, 2498 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿ ಒಟ್ಟು 2754 ಪ್ರಕರಣಗಳು ಇತ್ಯರ್ಥವಾಗಿವೆ ಎಂದು ತಿಳಿಸಿದರು.

ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿ ಜನಸಾಮಾನ್ಯರ ಅನುಕೂಲಕ್ಕಾಗಿ ಶೀಘ್ರ ಹಾಗೂ ತ್ವರಿತವಾಗಿ ಪ್ರಕರಣಗಳು ಇತ್ಯರ್ಥವಾಗಬೇಕು. ಆ ಮೂಲಕ ನ್ಯಾಯ ಒದಗಿಸಬೇಕೆಂಬ ಆಶಯದಡಿ ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜಿಲ್ಲಾದ್ಯಂತ ಮೆಗಾ ಲೋಕ್ ಅದಾಲತ್ ನಡೆಸಲಾಗಿದೆ. ಸಿವಿಲ್ ಹಾಗೂ ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು ಇನ್ನಿತರ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸುವುದು ಮೆಗಾ ಲೋಕ್ ಅದಾಲತ್ ಉದ್ದೇಶವಾಗಿತ್ತು ಎಂದರು.

ಲೋಕ್ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳು ವಿಲೇವಾರಿ ಆಗಿರುವುದರಿಂದ ಜನಸಾಮಾನ್ಯರಿಗೆ ಅನುಕೂಲವಾಗಿರುವುದರ ಜೊತೆಗೆ ನ್ಯಾಯಾಲಯಗಳ ಮೇಲಿನ ಪ್ರಕರಣಗಳ ಹೊರೆ ತಗ್ಗಿದೆ. ಲೋಕ್ ಅದಾಲತ್ ಯಶಸ್ಸಿಗೆ ಕಾರಣರಾದ ಜಿಲ್ಲೆಯ ಎಲ್ಲಾ ನ್ಯಾಯಾಧೀಶರಿಗೆ, ವಕೀಲರಿಗೆ, ನ್ಯಾಯಾಲಯದ ಸಿಬ್ಬಂದಿ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ, ಮಾಧ್ಯಮ ಪ್ರತಿನಿಧಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ಶ್ರೀಧರ ಮಾತನಾಡಿ, ನಿರೀಕ್ಷೆಗೂ ಮೀರಿ ಹೆಚ್ಚಿನ ಪ್ರಕರಣಗಳು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಗೊಂಡಿವೆ. ಬಹುಕಾಲದ ಕೌಟುಂಬಿಕ ಪ್ರಕರಣಗಳು ಸಹ ಈ ಬಾರಿಯ ಲೋಕ್ ಅದಾಲತ್‌ನಲ್ಲಿ ಬಗೆಹರಿದಿರುವುದು ವಿಶೇಷವಾಗಿದೆ. ಎಲ್ಲರ ಸಹಕಾರದಿಂದ ಲೋಕ್ ಅದಾಲತ್‌ನಲ್ಲಿ ಹೆಚ್ಚು ಪ್ರಮಾಣದಲ್ಲಿ ವ್ಯಾಜ್ಯಗಳು ಒಮ್ಮತದಿಂದ ತೀರ್ಮಾನವಾಗಿವೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್ ಮಾತನಾಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅವಿರತ ಶ್ರಮ ಕಕ್ಷಿದಾರರು ವಕೀಲರ ಸಹಕಾರದಿಂದ ಲೋಕ್ ಅದಾಲತ್‌ನಲ್ಲಿ ಹೆಚ್ಚು ಪ್ರಕರಣ ಇತ್ಯರ್ಥಗೊಂಡಿವೆ ಎಂದರು. ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ಸುದ್ದಿಗೋಷ್ಠಿಯಲ್ಲಿ ಇದ್ದರು.

ಒಂದನೇ ಪುಟದಿಂದ

ಎಸ್‌ಐಟಿ ತನಿಖೆ

ಎಂದು ಮನವಿ ಮಾಡಿಕೊಂಡಿದ್ದೇನೆ. ಹೊರಗಡೆ ಯಾರೋ ವರ್ಗಾವಣೆಯಲ್ಲಿ ಲಂಚ ಪಡೆದಿರಬಹುದು. ಅದಕ್ಕೂ ನಮಗೂ ಸಂಬಂಧವಿಲ್ಲ. ಈ ಹಿಂದೆ 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದಾಗಲೂ ಲಂಚ ಪಡೆದಿಲ್ಲ. ಈಗಿನ ಆಡಳಿತದಲ್ಲೂ ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಪೋಲ ಕಲ್ಪಿತವಾಗಿ ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಕೊಂಡಿದ್ದೇನೆ. ನಮ್ಮ ಸರ್ಕಾರದ ಮೇಲೆ ಹೇಳಲು ಏನೂ ಸಿಕ್ಕಿಲ್ಲ. ಅವರಿಗೆ ರಾಜಕೀಯ ಭಯ ಶುರುವಾಗಿದ್ದು, ರಾಜಕೀಯ ಅಭದ್ರತೆ ಕಾಡಿದೆ. ಇದು ಶುರುವಾದಾಗ ನಮ್ಮ ಮನಸ್ಥಿತಿಗಳು ಬದಲಾಗುತ್ತಿರುತ್ತವೆ. ರಾಜಕೀಯ ಭಯದಿಂದ ಕೆಲವು ಆರೋಪಗಳನ್ನು ಮಾಡಿ ನಮ್ಮನ್ನು ದಾರಿ ತಪ್ಪಿಸುವ ಕೆಲಸ ಮಾಡಿರಬಹುದು ಎಂದರು.

ಹಿಂದಿನ ಬಿಜೆಪಿ ಆಡಳಿತದಲ್ಲಿ ಕೆಲವು ಇಲಾಖೆಗಳಲ್ಲಿ ಹಗರಣಗಳು ನಡೆದಿವೆ. ಇದರಿಂದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ. ಈ ಬಗ್ಗೆ ಅಂದಿನ ಮುಖ್ಯಮಂತ್ರಿಯಾಗಿದ್ದ ಬೊಮ್ಮಾಯಿ ಅವರೇ ತನಿಖೆ ನಡೆಸಿ ಎಂದಿದ್ದಾರೆ.

ನನ್ನ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದ್ದರೆ, ಆ ನಂತರ ಬಂದ ಯಡಿಯೂರಪ್ಪ ಮತ್ತು ಬೊಮ್ಮಾಯಿ ತನಿಖೆ ಮಾಡಿಸಬಹುದಿತ್ತು. ಅವರು ಆರೋಪ ಮಾಡಿದರೂ ಯಾವುದೇ ಪುರಾವೆ ದೊರೆಯಲಿಲ್ಲ. ಹಾಗಾಗಿ ಅವರು ತನಿಖೆ ಮಾಡಲಿಲ್ಲ ಎಂದು ಹೇಳಿದರು. ಭ್ರಷ್ಟಾಚಾರ ಹತ್ತಿಕ್ಕಲೆಂದೇ ಎಸಿಬಿ ರಚನೆ ಮಾಡಿದ್ದೆ. ಇದು ಸಿಬಿಐ ಮಾದರಿ ಕೆಲಸ ಮಾಡಲಿ ಎಂದು. ರಾಷ್ಟ್ರದ 18 ರಾಜ್ಯಗಳಲ್ಲಿ ಇಂತಹ ತನಿಖಾ ಸಂಸ್ಥೆಗಳಿವೆ. ಹಗರಣಗಳಿಗೆ ಮುಕ್ತಿ ಕೊಡಿಸಿ, ಆರೋಪಿಗಳಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದಲೇ ಇಂಥ ತೀರ್ಮಾನ ಕೈಗೊಳ್ಳಲಾಗಿತ್ತೇ ಹೊರತು, ಯಾವುದೇ ರಾಜಕೀಯ ದುರುದ್ದೇಶದಿಂದ ಅಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಮುನ್ನೋಟವಿತ್ತು. ನಮ್ಮ ನೀತಿ, ನಿಲುವುಗಳನ್ನು ಪ್ರಸ್ತಾಪಿಸಿದ್ದಾರೆ. ಜನರು ನಮಗೆ ಆಶೀರ್ವಾದ ಮಾಡಿ ಬಹುಮತ ಕೊಟ್ಟಿದ್ದಾರೆ. ಐದು ವರ್ಷಗಳ ಕಾಲ ಈ ರಾಜ್ಯದ ಚುಕ್ಕಾಣಿ ಹಿಡಿದು, ನಮ್ಮ ಆಶೋತ್ತರಗಳನ್ನು ನೆರವೇರಿಸಿ ಎಂದು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಮಧ್ಯಪ್ರವೇಶಿಸಿದ ಬಸವರಾಜ ಬೊಮ್ಮಾಯಿ, ನಮ್ಮ ಸರ್ಕಾರದ ಅವಧಿಯಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಲು ಎಸ್‌ಐಟಿ ನೇಮಕ ಮಾಡಿರುವುದನ್ನು ಸ್ವಾಗತಿಸುತ್ತೇವೆ. ನಮಗೆ ಯಾವುದೇ ಭಯವಿಲ್ಲ. ಅಭ್ಯಂತರವೂ ಇಲ್ಲ. ನಿಮ್ಮ ಕಾಲದಲ್ಲಿ ಕೇಳಿ ಬಂದ ಆರೋಪಗಳ ಬಗ್ಗೆ ಲೋಕಾಯುಕ್ತ ತನಿಖೆಗೆ ಒಪ್ಪಿಸಿದ್ದೇವೆ. ತನಿಖೆ ಮುಂದುವರೆದಿದ್ದು, ಆ ವಿಚಾರಗಳ ಬಗ್ಗೆಯೂ ವಿಶೇಷ ತನಿಖಾ ತಂಡ ತನಿಖೆ ನಡೆಸಬೇಕು. ತಮ್ಮ ಕಾಲದಲ್ಲಿ ಸೇಡಿನ ರಾಜಕಾರಣ ಮಾಡಿಲ್ಲ ಎಂದು ಹೇಳಿದರು. ಮತ್ತೆ ಮಾತು ಮುಂದುವರೆಸಿದ ಸಿದ್ದರಾಮಯ್ಯ, ಲೋಕಾಯುಕ್ತ ಸಂಸ್ಥೆಯನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂಬ ಆರೋಪ ಸತ್ಯಕ್ಕೆ ದೂರ. ನಾವು ಎಸಿಬಿ ರಚನೆ ಮಾಡುವ ಮೂಲಕ ಸಿಬಿಐ ಮಾದರಿಯಲ್ಲಿ ಸಂಸ್ಥೆಯನ್ನು ಹುಟ್ಟುಹಾಕಬೇಕು ಎಂಬ ಸದ್ದುದ್ದೇಶದಿಂದ ಮಾಡಲಾಗಿತ್ತು. ಹೈಕೋರ್ಟ್ ಅದನ್ನು ರದ್ದುಪಡಿಸಿ ಲೋಕಾಯುಕ್ತ ಸಂಸ್ಥೆಗೆ ಬಲ ನೀಡಿದೆ. 2004ರಿಂದ ಇಲ್ಲಿಯವರೆಗೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಚುನಾವಣೆಗಳಲ್ಲಿ ಗಳಿಸಿದ ಮತಗಳ ಶೇಕಡವಾರು ಪ್ರಮಾಣವನ್ನು ಸದನದ ಮುಂದಿಟ್ಟು ಬಿಜೆಪಿ ಎಂದೂ ಕಾಂಗ್ರೆಸ್‌ಗಿಂತ ಹೆಚ್ಚಿನ ಶೇಕಡವಾರು ಮತಗಳಿಸಿರಲಿಲ್ಲ ಎಂದು ಹೇಳಿದ್ದು, ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ವಾದ –ವಾಗ್ವಾದಕ್ಕೆ ಕಾರಣವಾಯಿತು.

ವೇಣುಗೋಪಾಲ ನಾಯಕನ ಹತ್ಯೆಯಾಗಿದೆ

ಅವಕಾಶಗಳನ್ನು ಬಿಟ್ಟು ಧಾರ್ಮಿಕತೆಯ ಅಜೆಂಡಾದಡಿ ಹಿಂದುತ್ವ ರಾಜಕಾರಣ ಮಾಡುತ್ತಿದೆ. ರಾಜ್ಯದಲ್ಲಿ ಇದು ಬಹಳ ವರ್ಷಗಳ ಕಾಲ ನಡೆಯೋಲ್ಲ. ಅದಕ್ಕೆ ಈಗಾಗಲೇ ಬೆಲೆ ತೆತ್ತಾಗಿದೆ. ಸಂವಿಧಾನದ ಧ್ಯೇಯವನ್ನು ತಿಳಿಯದೆ, ಸಾಮಾಜಿಕ ಹೊಣೆಗಾರಿಕೆ, ಬದ್ಧತೆ ಇಲ್ಲದವರು, ಸಾರ್ವಜನಿಕ ಜೀವನದ ಪ್ರಾಮುಖ್ಯತೆ ಗೊತ್ತಿಲ್ಲದವರು ಯುವಕನ ಹತ್ಯೆಯ ಪ್ರಕರಣವನ್ನು ರಾಜಕೀಯಗೊಳಿಸುತ್ತಿದ್ದಾರೆ. ಕಳೆದ ನಾಲ್ಕು ದಶಕಗಳ ಧರ್ಮ ಮತ್ತು ಜಾತಿ ಆಧಾರಿತ ಸಂಘರ್ಷಕ್ಕೆ ಅವಕಾಶವನ್ನೇ ಕೊಟ್ಟಿಲ್ಲ. ಮತ ಭೇದವಿಲ್ಲದೆ, ಎಲ್ಲರನ್ನೂ ಸಮಾನತೆಯ ಭಾವನೆಯಿಂದ ನೋಡಿದ್ದೇನೆ. ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದೇನೆ ಎಂದು ತಿಳಿಸಿದರು.

ಕಾಂಗ್ರೆಸ್ ಹಿಂದಿನಿಂದಲೂ ಧರ್ಮ ನಿರಪೇಕ್ಷಿತ ಆಡಳಿತ ನೀಡುತ್ತಾ ಬಂದಿದೆ. ಪುತ್ರ ಸುನಿಲ್ ಬೋಸ್ ಸಾರ್ವಜನಿಕ ಜೀವನದಲ್ಲಿ ಇದ್ದುಕೊಂಡು ಯುವಕರನ್ನು ಸಂಘಟನೆ ಮಾಡಿಕೊಂಡು ಜನರಿಗೆ ಸಹಾಯ ಮಾಡುತ್ತಾ, ಕ್ಷೇತ್ರದಲ್ಲಿ ಕ್ರಿಯಾಶೀಲ ವಾಗಿದ್ದಾನೆ. ಈ ಪ್ರಕರಣಕ್ಕೂ ಸುನಿಲ್‌ಗೂ ಯಾವುದೇ ಸಂಬಂಧವಿಲ್ಲ. ಆತನ ವಿರುದ್ಧ ಈ ಹಿಂದೆಯೂ ಮಾಫಿಯಾ ಮಾಡುತ್ತಿದ್ದವರೇ ಮಾಫಿಯಾ ಮಾಡುತ್ತಿದ್ದಾನೆ ಎಂದು ಹೇಳುತ್ತಲೇ ದೂರು ನೀಡಿ ವಿಫಲರಾಗಿದ್ದರು. ಜೊತೆಯಲ್ಲಿದ್ದವರು ಕೃತ್ಯವೆಸಗಿದ್ದಾರೆ ಅನ್ನುವ ಕಾರಣಕ್ಕೆ ಹತ್ಯೆಯನ್ನು ತಳುಕು ಹಾಕುವುದು, ಇದೊಂದು ರಾಜಕೀಯ ಷಡ್ಯಂತ್ರವಾಗಿದೆ ಎಂದು ಆರೋಪಿಸಿದರು. ವೇಣುಗೋಪಾಲ ನಾಯಕನ ಕೊಲೆಯ ಕೃತ್ಯದಲ್ಲಿ ಭಾಗಿಯಾಗಿರುವ ಆರು ಮಂದಿ ಆರೋಪಿಗಳನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣ ರಾಜಕೀಯ ಅಥವಾ ದೌರ್ಜನ್ಯ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ. ಕೊಲೆಯಾಗಿರುವ ಯುವಕ ಪರಿಶಿಷ್ಟ ಪಂಗಡಕ್ಕೆ ಸೇರಿದವನಾಗಿದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 8.50 ಲಕ್ಷ ರುಗಳ ಪರಿಹಾರವನ್ನು ಮಂಜೂರು ಮಾಡಿದ್ದೇವೆ. ಮೊದಲ ಹಂತದಲ್ಲಿ 4,12,500 ರೂ.ಗಳನ್ನು ನೀಡುತ್ತಿದ್ದು, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ ಬಳಿಕ ಉಳಿದ ಪರಿಹಾರದ ಹಣವನ್ನು ನೀಡುತ್ತೇವೆ ಎಂದು ಸಚಿವರು ತಿಳಿಸಿದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂಡಿ ಬಸವರಾಜು, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಎಸ್ಪಿ ಸೀಮಾ ಲಾಟ್ಕರ್, ಡಿವೈಎಸ್‌ಪಿ ಗೋವಿಂದರಾಜು, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎನ್. ರವಿಕುಮಾರ್, ಎಂ.ಕೆ.ಗಣೇಶ್ ಮೂರ್ತಿ, ಆಪ್ತ ಸಹಾಯಕ ಬಸವರಾಜು. ಅನುಪ್‌ಗೌಡ, ತಹಶೀಲ್ದಾರ್ ಸಿ.ಜಿ.ಗೀತಾ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರಂಗೇಗೌಡ. ತಾಲೂಕು ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಪರಿಶಿಷ್ಟ ಪಂಗಡ ಅಭಿವೃದ್ಧಿ ಅಧಿಕಾರಿ ಕೋಮಲ, ತಾ.ಪಂ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಎಂ.ಮಲ್ಲಿಕಾರ್ಜುನಸ್ವಾಮಿ, ಎಸ್ಸಿ ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಗ್ರಾಪಂ ಮಾಜಿ ಸದಸ್ಯ ರಾಜು, ತರಕಾರಿ ದಿಲೀಪ್, ಪಪಂ ಮಾಜಿ ಅಧ್ಯಕ್ಷ ಕನಕ ಪಾಪು, ಎನ್.ಪಿ.ಕನಕರಾಜು, ನಾಮನಿರ್ದೇಶಕ ಸದಸ್ಯ ಕೆ.ಗಣೇಶ್, ರಾಘವೇಂದ್ರ, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ಗ್ರಾಪಂ ಅಧ್ಯಕ್ಷ ಎಂ.ಮಹೇಶ್, ಮಾಜಿ ಅಧ್ಯಕ್ಷರಾದ ಪುಟ್ಟಸ್ವಾಮಿ, ಎ.ಜೆ.ವೆಂಕಟೇಶ್, ಮಾಜಿ ಸದಸ್ಯ ಎಂ.ಮಿಥುನ್, ಮುಖಂಡರಾದ ಕೇತಹಳ್ಳಿ ಸಿದ್ದಶೆಟ್ಟಿ, ವಿ.ಓ.ಹುಂಡಿ ಬಸವರಾಜು ಹಾಗೂ ಇನ್ನಿತರರು ಹಾಜರಿದ್ದರು.

ಜು.17 ಮೇಯರ್ ನಗರ ಪ್ರದಕ್ಷಿಣೆ

ಮಳಿಗೆದಾರರ ಅತಿಕ್ರಮಣವನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸೋಣ. ಈ ಸಂದರ್ಭದಲ್ಲಿ ಯಾರೂ ಯಾರ ಪರವಾಗಿಯೂ ಮಾತನಾಡದೆ ಕಾರ್ಯಾಚರಣೆಗೆ ಸಹಕಾರ ನೀಡಬೇಕು ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಈ ನಿರ್ಧಾರಕ್ಕೆ ಕಾರಣ: ಸಭೆಯ ಆರಂಭದಲ್ಲೇ ಸದಸ್ಯ ಕೆ.ವಿ.ಶ್ರೀಧರ್, ಫುಟ್‌ಪಾತ್ ಹಾಗೂ ರಸ್ತೆ ಅತಿಕ್ರಮಣದ ಬಗ್ಗೆ ಗಮನ ಸೆಳೆದರು. ಕಾರ್ಯಸೂಚಿ ಸಂಬಂಧ ಮಾತು ಆರಂಭಿಸಿದ ಅವರು, ಕೌನ್ಸಿಲ್ ನಿರ್ಣಯಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಅನುಷ್ಠಾನವಾಗುತ್ತವೆ. ನಮ್ಮ ವಾರ್ಡ್‌ನಲ್ಲಿ ರಸ್ತೆ ಅತಿಕ್ರಮಣ ತೆರವುಗೊಳಿಸಲು ಗಡುವು ನೀಡಿದ್ದೀರಿ. ಆದರೆ ಏನೂ ಆಗಿಲ್ಲ. ಪಾಲಿಕೆ ಕೌನ್ಸಿಲ್ ಘನತೆ, ಮೌಲ್ಯ ಕಳೆದುಕೊಳ್ಳುತ್ತಿದೆ ಎಂದು ಜನ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಇದು ಇಡೀ ನಗರದ ಸಮಸ್ಯೆಯಾಗಿದೆ ಎಂದರು.

ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಪ್ರತಿಕ್ರಿಯಿಸಿ, ಶ್ರೀಧರ್ ಅವರ ವಾರ್ಡ್‌ನಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದು, ಅಲ್ಲಿ ತುಂಬಾ ಜನ ವ್ಯಾಪಾರಿಗಳಿರುವುದರಿಂದ ಪ್ರತ್ಯೇಕ ಜಾಗದ ವ್ಯವಸ್ಥೆ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆ.ವಿ.ಶ್ರೀಧರ್, ಕೆಲ ವರ್ಷಗಳ ಹಿಂದೆ 10 ಗಾಡಿಗಳಿದ್ದವು. ಈಗ 200 ಗಾಡಿಗಳಿವೆ. ರಸ್ತೆಗಳಲ್ಲೇ ಗೂಡ್ಸ್ ಆಟೋಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಾರೆ. ಹೀಗೆಯೇ ಸಂಖ್ಯೆ ಹೆಚ್ಚಾದರೆ ಎಲ್ಲರಿಗೂ ಸ್ಥಳಾವಕಾಶ ಕಲ್ಪಿಸಲು ಸಾಧ್ಯವೇ. ಇದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮಾಜಿ ಮೇಯರ್ ಅಯೂಬ್‌ಖಾನ್ ಮಾತನಾಡಿ, ಶ್ರೀಧರ್ ಅವರು ಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ. ಎಲ್ಲಾ ಕಡೆ ಫುಟ್‌ಪಾತ್ ಅತಿಕ್ರಮಿಸಿಕೊಳ್ಳಲಾಗಿದೆ. ಹಿಂದೆ ಮೇಯರ್, ಅಧಿಕಾರಿಗಳೊಂದಿಗೆ ಸಂಜೆ ವೇಳೆ ಫುಟ್‌ಪಾತ್‌ನಲ್ಲಿ ವಾಕ್ ಮಾಡಿ, ಸಮಸ್ಯೆಯನ್ನು ಅರಿತು ಕೂಡಲೇ ಕ್ರಮ ವಹಿಸುತ್ತಿದ್ದರು ಎಂದು ಹೇಳಿದರು.

ಅಪಾಯ ತಪ್ಪಿಸಿ: ಜೆಡಿಎಸ್ ಸದಸ್ಯ ರಮೇಶ್, ವಿದ್ಯುತ್ ಯುಜಿ ಕೇಬಲ್ ಅಳವಡಿಕೆಯಲ್ಲಿನ ಅವಾಂತರವನ್ನು ಮತ್ತೆ ಪ್ರಸ್ತಾಪಿಸಿದರು. ನಾಲ್ಕು ವರ್ಷಗಳಿಂದ ನಾನು ಮನವಿ ಮಾಡುತ್ತಲೇ ಇದ್ದೇನೆ. ಕೌನ್ಸಿಲ್ ಪುಸ್ತಕದಲ್ಲಿ ಗಮನ ಸೆಳೆದ ಅಂಶ ಎಂದು ನಮೂದಿಸಿದ್ದನ್ನು ಬಿಟ್ಟರೆ ಬೇರೇನು ಕ್ರಮ ವಹಿಸಿಲ್ಲ. ಸೆಸ್ಕ್ ಅಧಿಕಾರಿಗಳ ಬೇಜವಾಬ್ದಾರಿಯಿಂದ ತುಂಬಾ ಅಪಾಯ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಪ್ರೇಮಾ ಶಂಕರೇಗೌಡ ಮತ್ತಿತರರ ಸದಸ್ಯರು ಧ್ವನಿಗೂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್, ಸೆಸ್ಕ್‌ನಿಂದ ಆಗಿರುವ ಅನಾನುಕೂಲಗಳ ಬಗ್ಗೆ ಚರ್ಚೆಯಾಗಿದೆ. ಜು.18 ಅಥವಾ 19ಕ್ಕೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚೆ ಮಾಡಿ, ಈ ಸಮಸ್ಯೆಗೆ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ನೆಟ್‌ವರ್ಕ್ ಟವರ್: ಅರಮನೆ ಸೇರಿದಂತೆ ಪಾರಂಪರಿಕ ಕಟ್ಟಡಗಳ ಬಳಿ ಆಂಟೀನಾ ಮಾದರಿ ನೆಟ್‌ವರ್ಕ್ ಟವರ್ ಅಳವಡಿಸಿದ್ದಾರೆ. ಬೆಂಗಳೂರಿನ ವ್ಯಕ್ತಿಯೊಬ್ಬರು ಪಾಲಿಕೆಗೆ ವಾರ್ಷಿಕ 13 ಲಕ್ಷ ಪಾವತಿಸಿ, ಕೋಟಿಗಿಂತ ಹೆಚ್ಚು ಆದಾಯ ಮಾಡುತ್ತಿದ್ದಾರೆ. ರೇಡಿಯೇಷನ್‌ನಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತಿದೆ ಎಂದು ಎಸ್‌ಬಿಎಂ ಮಂಜು ಹೇಳಿದರು. ಇದಕ್ಕೆ ಆಯುಕ್ತರು ಪ್ರತಿಕ್ರಿಯಿಸಿ, 4 ವರ್ಷಗಳ ಹಿಂದೆ ಅನುಮತಿ ನೀಡಿದ್ದು, ನಂತರದಲ್ಲಿ ಯಾರಿಗೂ ಅನುಮತಿ ನೀಡಿಲ್ಲ ಎಂದರು. ಮೇಯರ್ ಮಾತನಾಡಿ, ಮುಂದಿನ ಕೌನ್ಸಿಲ್‌ನಲ್ಲಿ ಈ ಸಂಬಂಧ ಸಮಗ್ರ ಮಾಹಿತಿಯೊಂದಿಗೆ ಹಾಜರಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಲ್ಲಿ ಚೆನ್ನೈ ನಿಶಾ ರಂಗಸಂಸ್ಥೆಯಿಂದ ಇಂಗ್ಲಿಷ್ ನಾಟಕ ಪ್ರದರ್ಶನ

● ಜು.15ರಂದು ಕಿರುರಂಗಮಂದಿರದಲ್ಲಿ 'ಮಾರ್ಗರಿಯ' ನಾಟಕ ಪ್ರದರ್ಶನ
● ಜು.16ರಂದು ನಟನ ರಂಗಶಾಲೆಯಲ್ಲಿ 'ಸಾರ್ಡಿಡ್' ನಾಟಕ





ಮೈಸೂರು,ಜು.13(ಎಂಟಿವೈ)– ಚೆನ್ನೈನ ನಿಶಾ ರಂಗಸಂಸ್ಥೆಯ ವತಿಯಿಂದ ಮೈಸೂರಲ್ಲಿ ಎರಡು ದಿನಗಳ ಇಂಗ್ಲಿಷ್ ನಾಟಕೋತ್ಸವ ಆಯೋಜಿಸಿದ್ದು, ಜು.15ರಂದು 'ಮಾರ್ಗರಿಯ' ಹಾಗೂ ಜು.16ರಂದು 'ಸಾರ್ಡಿಡ್' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ದೇಶದ ವಿವಿಧೆಡೆ ಅತ್ಯುತ್ತಮ ಪ್ರದರ್ಶನ ಕಂಡಿರುವ ಇಂಗ್ಲಿಷ್‌ನ ಎರಡು ನಾಟಕಗಳನ್ನು ಇದೇ ಮೊದಲ ಬಾರಿಗೆ ಮೈಸೂರಲ್ಲಿ ನಿಶಾ ರಂಗಸಂಸ್ಥೆ ಏರ್ಪಡಿಸಿದ್ದು, ಮೈಸೂರಿನ ಇಂಗ್ಲಿಷ್ ಸಾಹಿತ್ಯಾಸಕ್ತರಿಗೆ ವಿಭಿನ್ನ ಕಥೆ ಹೊಂದಿರುವ ನಾಟಕ ಸವಿರುಚಿ ಉಣಬಡಿಸಲು ಮುಂದಾಗಿದೆ.

ರಂಗಭೂಮಿ ಕ್ಷೇತ್ರದಲ್ಲಿ ಕಳೆದ 22 ವರ್ಷದಿಂದ ಸೇವೆ ಸಲ್ಲಿಸುತ್ತಿರುವ ನಿಶಾ ರಂಗಸಂಸ್ಥೆ ಇದುವರೆಗೂ 130 ನಾಟಕ ನಿರ್ಮಿಸಿದೆ. 20ಕ್ಕೂ ಹೆಚ್ಚು ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನಾಟಕೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ರಂಗಾಸಕ್ತಿಯನ್ನು ಪ್ರದರ್ಶಿಸಿದೆ. ಇದೀಗ ಮೈಸೂರಲ್ಲಿ ಎರಡು ನಾಟಕ ಪ್ರದರ್ಶನ ಏರ್ಪಡಿಸಿದೆ.

ಜು.15ರಂದು ಸಂಜೆ 6.30ಕ್ಕೆ 'ಮಾರ್ಗರಿಯ': ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜು.15ರಂದು ಸಂಜೆ 6.30ಕ್ಕೆ 'ಮಾರ್ಗರಿಯ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಇಂಗ್ಲಿಷ್ ಭಾಷೆಯ ಈ ನಾಟಕ 1.30 ಗಂಟೆ ಅವಧಿಯದ್ದಾಗಿದೆ. ಭರತನಾಟ್ಯ ಕಲಾವಿದೆಯ ಜೀವನ ಹಾಗೂ ಶೋಷಣೆಯ ಸಂಸ್ಕೃತಿಯನ್ನು ಈ ನಾಟಕ ಬಿಂಬಿಸಲಿದೆ. ಪ್ರತಿಭೆ ಹಾಗೂ ಅರ್ಹತೆ ಇದ್ದರೂ ಅವಕಾಶದಿಂದ ವಂಚಿತರಾಗಿ ನೇಪಥ್ಯಕ್ಕೆ ಸರಿಯುವ ಭರತನಾಟ್ಯ ಕಲಾವಿದರ ಪರ ಶೋಷಣೆಗೆ ಗುರಿಯಾಗುವ ಕಲಾವಿದರೊಬ್ಬರು ಹೋರಾಟ ಮಾಡುವ ಸಂದೇಶ ಹೊಂದಿದೆ. ವಿಭಿನ್ನವಾದ ಕಥಾಹಂದರವನ್ನು 'ಮಾರ್ಗರಿಯ' ಹೊಂದಿದೆ.

ಜು.16ರಂದು ಸಂಜೆ 6.30ಕ್ಕೆ 'ಸಾರ್ಡಿಡ್': ಮೈಸೂರಿನ ನಟನ ರಂಗಶಾಲೆಯಲ್ಲಿ ಜು.16ರಂದು ಸಂಜೆ 6.30ಕ್ಕೆ 'ದಿ ಹಿಂದು ಪ್ಲೇರೈಟ್ ಅವಾರ್ಡ್–2019 ವಿಜೇತ ಇಂಗ್ಲಿಷ್ ನಾಟಕ 'ಸಾರ್ಡಿಡ್' ಪ್ರದರ್ಶನ ಏರ್ಪಡಿಸಲಾಗಿದೆ. 1.15 ಗಂಟೆ ಅವಧಿಯ ಈ ನಾಟಕ ವಿಭಿನ್ನ ಕಥೆ ಹೊಂದಿದೆ. ಕುಡಿಯುವ ನೀರು ತರಲೆಂದೇ ದೇಶದ ಕೆಲವೆಡೆ ಪುರುಷರು ಬಹುಪತ್ನಿಯರನ್ನು ಹೊಂದಿರುವ ನಾಟಕವಾಗಿದೆ. ರೈತನೊಬ್ಬ ಮೂವರು ಪತ್ನಿಯರನ್ನು ಹೊಂದಿರುವ ಸನ್ನಿವೇಶ ಈ ನಾಟಕದಲ್ಲಿ ಮನಮೋಹಕವಾಗಿ ಮೂಡಿ ಬರಲಿದ್ದು, ಮೂವರು ಪತ್ನಿಯರು ವಿಭಿನ್ನ ಜವಾಬ್ದಾರಿ ನಿಭಾಯಿಸುವ ಹಾಗೂ ದೂರದ ಪ್ರದೇಶದಿಂದ ಕುಡಿಯುವ ನೀರು ತರುವ ಸನ್ನಿವೇಶ ನಾಟಕದಲ್ಲಿ ಮೂಡಿಬರಲಿದೆ.

ಎರಡೂ ನಾಟಕಕ್ಕೆ ಬುಕ್ ಮೈ ಶೋದಲ್ಲಿ ಟಿಕೆಟ್ ಬುಕ್ ಮಾಡಬಹುದಾಗಿದೆ.

ಕೆ.ಹೆಚ್.ರಾಮಯ್ಯನವರ 144ನೇ ಜಯಂತಿ ಆಚರಣೆ

ಶ್ರೀಯುತರ ಹೆಸರು ಚಿರಸ್ಥಾಯಿಯಾಗಿಸಲು ಸಿಪಿಕೆ ಸಲಹೆ



ಮೈಸೂರು, ಜು.13(ಎಂಕೆ)– ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಕೆ.ಹೆಚ್.ರಾಮಯ್ಯನವರ ಸಮಾಧಿ ಬಳಿ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ 'ಕೆ.ಹೆಚ್.ರಾಮಯ್ಯನವರ 144ನೇ ಜಯಂತಿ' ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕೆ.ಎಸ್.ರಾಮಯ್ಯನವರು ಜಾತ್ಯಾತೀತ ಸಂತರಾಗಿದ್ದರು. ದೊಡ್ಡಬಳ್ಳಾಪುರದ ಕಲ್ಲುದೇವರಹಳ್ಳಿಯಲ್ಲಿ ಹುಟ್ಟಿದ್ದರೂ ಮೈಸೂರು ರಾಜ ಸಂಸ್ಥಾನದ ಉನ್ನತ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದವರು. ಹಿಂದುಳಿದ ವರ್ಗಗಳಿಗೆ ಆ ಕಾಲದಲ್ಲಿ ಸರ್ಕಾರದ ಉನ್ನತ ಹುದ್ದೆಗಳು ದೊರೆಯುತ್ತಿರಲಿಲ್ಲ. ಇದರ ವಿರುದ್ಧ ಧ್ವನಿ ಎತ್ತಿ ಚಳುವಳಿಯೊಂದನ್ನು ರೂಪಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಈ ಬಗ್ಗೆ ಚಿಂತಿಸುವಂತೆ ಪ್ರಭಾವ ಬೀರಿದ್ದರು. ಸ್ವಾತಂತ್ರ್ಯ ನಂತರದಲ್ಲಿ ಡಾ.ಅಂಬೇಡ್ಕರ್ ಅವರು ಮೀಸಲಾತಿ ಪರಿಕಲ್ಪನೆ ತಂದರೆ ಸ್ವಾತಂತ್ರ್ಯಪೂರ್ವದಲ್ಲೆ ಮೀಸಲಾತಿ ತಂದವರು ನಾಲ್ವಡಿಯವರಾದರೂ ಅವರ ಸಂಕಲ್ಪಕ್ಕೆ ಒತ್ತಾಸೆಯಾದವರು ರಾಮಯ್ಯನವರು ಎಂಬುದು ಸತ್ಯ ಸಂಗತಿಯಾಗಿದೆ ಎಂದರು.

ಆಗ್ರಹ: ಕೆ.ಹೆಚ್,ರಾಮಯ್ಯ ಅವರನ್ನು ಜೀವಂತವಾಗಿರಿಸುವ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆ.ಹೆಚ್.ರಾಮಯ್ಯ ಅಧ್ಯಯನ ಪೀಠ ಸ್ಥಾಪಿಸುವುದು, ಪುರಭವನದ ಎದುರು ಪುತ್ಥಳಿ ನಿರ್ಮಾಣ, ನಗರದ ಪ್ರಮುಖ ರಸ್ತೆಗೆ ಅವರ ಹೆಸರನ್ನು ನಾಮಕರಣ ಮಾಡುವ ಮೂಲಕ ಅವರ ಆದರ್ಶಗಳು ಮುಂದಿನ ತಲೆಮಾರಿಗೆ ದಾರಿದೀಪವಾಗಲಿ ಎಂದು ಆಗ್ರಹಿಸಿದರು

ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ವಿದ್ಯಾ ವಿಕಾಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕವೀಶ್‌ಗೌಡ, ಮಹದೇವ್, ಬಸವಗೌಡ, ನಾರಾಯಣ್, ಮುಡಾ ಮಾಜಿ ಸದಸ್ಯೆ ಲಕ್ಷ್ಮಿದೇವಿ, ಕುಮಾರ್‌ಗೌಡ, ರವಿ ರಾಜಕೀಯ, ಕೃಷ್ಣಪ್ಪ ಮತ್ತಿತರರಿದ್ದರು.

ಇಂದು ಚಂದಿರನ ಅಂಗಳಕ್ಕೆ ಲಗ್ಗೆ ಚಂದ್ರಯಾನ–3



ಶ್ರೀಹರಿಕೋಟಾ: ಚಂದಿರನ ಅಂಗಳಕ್ಕೆ ಲಗ್ಗೆ ಇಡಲು ಇಸ್ರೋ ಅಭೂತ ಪೂರ್ವ ತಯಾರಿ ನಡೆಸಿದೆ. ನಾಳೆ (ಶುಕ್ರವಾರ) ಮಧ್ಯಾಹ್ನ 2.35ಕ್ಕೆ ಶ್ರೀಹರಿ ಕೋಟಾದ ಸತೀಶ್ ಧವನ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಗೊಳ್ಳಲಿದೆ.

ಭಾರತವೇ ಕಾತರದಿಂದ ಕಾಯುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'ಯ ಚಂದ್ರಯಾನ 3 ಮಿಷನ್ ಉಡಾವಣೆಗೆ ಕೌಂಟ್‌ಡೌನ್ ಆರಂಭವಾಗಿದೆ.

ಮೂರು ಹಂತದ ವಿಶೇಷ ಸಾಮರ್ಥ್ಯ ಹೊಂದಿರುವ ಬಾಹ್ಯಾಕಾಶ ನೌಕೆಯು ಚಂದ್ರನ ದಕ್ಷಿಣ ಭಾಗದ ಮೇಲ್ಮೈನಲ್ಲಿ ಸುಸೂತ್ರವಾಗಿ ಲ್ಯಾಂಡ್ ಆಗಬೇಕಿದೆ. ಇದನ್ನು ಇಸ್ರೋ ನೇರ ಪ್ರಸಾರ ಮಾಡಲಿದೆ. ಇನ್ನೂ 2019ರಲ್ಲಿ ಚಂದ್ರಯಾನ–2 ಲ್ಯಾಂಡಿಂಗ್ ವೇಳೆ ಪತನಗೊಂಡಿತ್ತು.

ರಾಕೆಟ್ ಉಡಾವಣೆಯನ್ನು ಮನೆಯಲ್ಲಿಯೇ ಕುಳಿತು ನೇರಪ್ರಸಾರ ವೀಕ್ಷಣೆಗೆ ಇಸ್ರೊ ಅವಕಾಶ ನೀಡಿದೆ ಇಸ್ರೊದ ಅಧಿಕೃತ ವೆಬ್‌ಸೈಟ್, ಫೇಸ್‌ಬುಕ್, ಯುಟ್ಯೂಬ್ ಚಾನೆಲ್‌ನಲ್ಲಿ ಹಾಗೂ ಡಿಡಿ ನ್ಯಾಷನಲ್ ವಾಹಿನಿಯಲ್ಲಿ ನಾಳೆ ಮಧ್ಯಾಹ್ನ 2ರಿಂದ ನೇರಪ್ರಸಾರವನ್ನು ವೀಕ್ಷಿಸಬಹುದಾಗಿದೆ. ಈ ಬಗ್ಗೆ ಇಸ್ರೊ ಅಧಿಕೃತ ಟ್ವಿಟರ್ ಖಾತೆಯಲ್ಲಿ ಲಿಂಕ್ ಸಹಿತ ಮಾಹಿತಿ ಹಂಚಿಕೊಂಡಿದೆ. ಚಂದ್ರನ ದಕ್ಷಿಣ ಧ್ರುವದ ಬಳಿಯ ನಾಲ್ಕು ಕಿ.ಮೀ ಉದ್ದದ ಮತ್ತು 2.5 ಕಿ.ಮೀ ಅಗಲದ ಪ್ರದೇಶವು ಆಗಸ್ಟ್ ಮೂರನೇ ವಾರದಲ್ಲಿ 'ಚಂದ್ರಯಾನ–3' ಇಳಿಯುವ ಜಾಗವಾಗಿರಲಿದೆ. ಇಸ್ರೊ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಈ ಬಾರಿಯ ಕಾರ್ಯಾಚರಣೆಯಲ್ಲಿ ಹಲವು ಸುರಕ್ಷಾ ಕ್ರಮ ಕೈಗೊಂಡಿದ್ದಾರೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಎಸ್ ಸೋಮನಾಥ್ ತಿಳಿಸಿದ್ದಾರೆ.

ಎಎಪಿ ರಾಜ್ಯಾಧ್ಯಕ್ಷರಾಗಿ ಮುಖ್ಯಮಂತ್ರಿ ಚಂದ್ರು



ಬೆಂಗಳೂರು: ಕರ್ನಾಟಕದಲ್ಲಿ ನೆಲೆ ಕಂಡುಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿರುವ ಆಮ್ ಆದ್ಮಿ ಪಕ್ಷದಲ್ಲಿ ಮಹತ್ವದ ಬೆಳವಣಿಗೆಗಳು ನಡೆದಿದೆ.

ಲೋಕಸಭಾ ಚುನಾವಣೆಗೆ ಕೆಲವು ತಿಂಗಳುಗಳ ಮೊದಲೇ ಎಎಪಿ ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ನಡೆದಿದೆ. ಆಮ್ ಆದ್ಮಿ ಪಕ್ಷದ ಕರ್ನಾಟಕ ಘಟಕದ ನೂತನ ರಾಜ್ಯಾಧ್ಯಕ್ಷರಾಗಿ ಹೆಸರಾಂತ ರಂಗಭೂಮಿ ಮತ್ತು ಚಲನಚಿತ್ರ ಕಲಾವಿದ, ಮಾಜಿ ಶಾಸಕರಾದ ಮುಖ್ಯಮಂತ್ರಿ ಚಂದ್ರು ಅವರನ್ನು ನೇಮಕ ಮಾಡಲಾಗಿದೆ.

ಈ ಕುರಿತು ಎಎಪಿ ಪಕ್ಷದ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂದೀಪ್ ಪಾಠಕ್ ದೆಹಲಿಯಲ್ಲಿ ಬುಧವಾರ ರಾತ್ರಿ ಘೋಷಣೆ ಮಾಡಿದ್ದಾರೆ.

ರಾಜ್ಯಾಧ್ಯಕ್ಷರ ಜೊತೆಗೆ ರಾಜ್ಯ ಸಂಘಟನಾ ಕಾರ್ಯದರ್ಶಿಗಳನ್ನಾಗಿ ಬಿ.ಟಿ. ನಾಗಣ್ಣ ಹಾಗೂ ಅರ್ಜುನ್ ಪರಪ್ಪ ಹಲಗಿಗೌಡರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷ ಅಧಿಕೃತವಾಗಿ ತಿಳಿಸಿದೆ. ಈ ಹಿಂದೆ ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷರಾಗಿ ಪೃಥ್ವಿ ರೆಡ್ಡಿ ಅವರು ಕಾರ್ಯನಿರ್ವಹಿಸುತ್ತಿದ್ದರು, ಇದೀಗ ಅವರನ್ನು ಪಕ್ಷದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿ ಪಕ್ಷ ಪ್ರಕಟಣೆ ಹೊರಡಿಸಿದೆ.

ಎಎಪಿ ರಾಜ್ಯಾಧ್ಯಕ್ಷರು, ಕಳೆದ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ತಾವು ಸ್ಪರ್ಧಿಸದೇ ಅವರು ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರದಲ್ಲಿ ತೊಡಗಿದರು. ಪಕ್ಷ ಸಂಘಟನೆಗಾಗಿ ತೊಡಗಿಕೊಳ್ಳುವುದಾಗಿ ಹೇಳಿದ್ದರು. ಇದೀಗ ಅವರನ್ನು ಎಎಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದೆ.

ವಿದ್ಯುತ್ ಜನಸಂಪರ್ಕ ಸಭೆ

ಮೈಸೂರು,ಜು.13– ನರಸಿಂಹರಾಜ ಮೊಹಲ್ಲಾ ವಿಭಾಗಗಳಾದ ಕೇಂದ್ರ, ಜ್ಯೋತಿನಗರ, ಚಾಮುಂಡಿಪುರಂ, ನ.ರಾ. ಮೊಹಲ್ಲಾ ಹಾಗೂ ವರುಣ ಉಪವಿಭಾಗ ಕಚೇರಿಗಳಲ್ಲಿ ಜು.15 ರಂದು ಬೆಳಗ್ಗೆ 11 ಗಂಟೆಗೆ ಜನಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಜನ ಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ತಿ.ನರಸೀಪುರ ಹತ್ಯೆ ಪ್ರಕರಣ ; ಸುನೀಲ್ ಬೋಸ್ ಹೆಸರು ಪ್ರಸ್ತಾಪದ ಹಿಂದೆ

ರಾಜಕೀಯ ಪಿತೂರಿ ಆರೋಪ



ಮೈಸೂರು,ಜು.13(ಪಿಎಂ)–ತಿ.ನರಸೀಪುರದಲ್ಲಿ ನಡೆದ ಹತ್ಯೆ ಪ್ರಕರಣ ಬಳಸಿಕೊಂಡು ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಅವರ ರಾಜಕೀಯ ಬೆಳವಣಿಗೆ ಹತ್ತಿಕ್ಕಲು ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಪಿತೂರಿ ನಡೆಸಿದ್ದಾರೆ ಎಂದು ಗಾಂಧಿನಗರ ದಲಿತ ಮಹಾಸಭಾದ ಅಧ್ಯಕ್ಷ ಎಸ್.ರಾಜೇಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರದಲ್ಲಿ ನಡೆದ ಯುವ ಬ್ರಿಗೇಡ್ ಸಂಘಟನೆಯ ತಾಲೂಕು ಸಂಚಾಲಕ ವೇಣುಗೋಪಾಲ್ ಹತ್ಯೆಗೂ, ಸುನೀಲ್ ಬೋಸ್ ಅವರಿಗೂ ಯಾವುದೇ ಸಂಬಂಧವಿಲ್ಲ ಆದರೂ ಪ್ರಕರಣದಲ್ಲಿ ಸುನೀಲ್ ಬೋಸ್ ಅವರ ಹೆಸರು ಹೇಳುವ ಮೂಲಕ ಚಕ್ರವರ್ತಿ ಸೂಲಿಬೆಲೆ ಷಡ್ಯಂತ್ರ ನಡೆಸಿದ್ದಾರೆ ಎಂದು ದೂರಿದರು.

ಸುನಿಲ್ ಬೋಸ್ ದಲಿತ ಯುವ ನಾಯಕರಾಗಿ ಬೆಳೆಯುತ್ತಿದ್ದು, ಹೀಗಾಗಿ ಅವರಿಗೆ ಧಕ್ಕೆ ತರಲು ಹೊರಟಿದ್ದಾರೆ. ಹತ್ಯೆಯಾದ ವೇಣುಗೋಪಾಲ್ ಜೊತೆಗೆ ಆರೋಪಿಗಳು ಹಲವು ವರ್ಷಗಳ ಸ್ನೇಹ ಸಂಬಂಧ ಹೊಂದಿದ್ದಾರೆ. ವೈಯಕ್ತಿಕ ವಿಚಾರದ ಗಲಾಟೆ ಕೊಲೆಯಲ್ಲಿ ಅಂತ್ಯವಾಗಿದೆ ಎಂದು ಹೇಳಿದರು.

ಮೈಸೂರು ದಲಿತ ಸಂಘಟನೆಗಳ ಒಕ್ಕೂಟದ ಸಂಚಾಲಕ ಪಿ.ರಾಜು ಮಾತನಾಡಿ, ಹತ್ಯೆ ಪ್ರಕರಣ ಸಂಬಂಧ ಸರ್ಕಾರ ಕಾನೂನಾತ್ಮಕವಾಗಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.ಮುಖಂಡರಾದ ಎನ್.ಎ.ರಹೀಂ, ಕುರುಬಾರಹಳ್ಳಿ ಪ್ರಕಾಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಭಾರತಕ್ಕೆ ಮುನ್ನಡೆ

ಡೊಮಿನಿಕಾ (ವೆಸ್ಟ್ ಇಂಡೀಸ್) ಜು. 13 (ಸಿಎನ್)– ಯುವ ಆಟಗಾರ ಯಶಸ್ವಿ ಜೈಸ್ವಾಲ್ ಹಾಗೂ ನಾಯಕ ರೋಹಿತ್ ಶರ್ಮಾ ಭರ್ಜರಿ ಶತಕಗಳ ನೆರವಿನಿಂದಾಗಿ ವಿಂಡೀಸ್ ವಿರುದ್ಧ ಭಾರತ ಬೃಹತ್ ಮೊತ್ತ ಪೇರಿಸುವತ್ತ ದಾಪುಗಾಲಿಟ್ಟಿದೆ.

ಮೊದಲ ದಿನದ ಪಂದ್ಯದಲ್ಲಿ ಭಾರತದ ಸಂಘಟಿತ ಬಿಗಿ ಬೌಲಿಂಗ್ ದಾಳಿಗೆ ತತ್ತರಿಸಿದ ವೆಸ್ಟ್ ಇಂಡೀಸ್ ತಂಡ 150 ರನ್ ಗಳಿಗೆ ಆಲೌಟ್ ಆಯಿತು. ಎರಡನೇ ದಿನದ ಪಂದ್ಯದಲ್ಲಿ ಭಾರತದ ಆರಂಭಿಕ ಆಟಗಾರರು ಭರ್ಜರಿ ಆಟ ಪ್ರದರ್ಶಿಸಿದರು. ಚಹಾ ವಿರಾಮದ ವೇಳೆಗೆ ಭಾರತ ತಂಡ 2 ವಿಕೆಟ್ ನಷ್ಟಕ್ಕೆ 245 ರನ್‌ಗಳಿಸಿದೆ. ಚೊಚ್ಚಲ ಪಂದ್ಯವನ್ನಾಡುತ್ತಿರುವ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅದ್ಭುತ ಶತಕ ಬಾರಿಸುವ ಮೂಲಕ ವಿಶೇಷ ದಾಖಲೆಗೆ ಪಾತ್ರರಾದರು. ಯಶಸ್ವಿ ಜೈಸ್ವಾಲ್ 242 ಎಸೆತಗಳಲ್ಲಿ 12 ಬೌಂಡರಿ ಒಳಗೊಂಡ ಅಜೇಯ 116 ರನ್ ಸಿಡಿಸಿದ್ದಾರೆ. ನಾಯಕ ರೋಹಿತ್ ಶರ್ಮಾ 221 ಎಸೆತಗಳನ್ನು ಎದುರಿಸಿ ಎರಡು ಸಿಕ್ಸರ್ ಹಾಗೂ 10 ಬೌಂಡರಿ ಒಳಗೊಂಡ 103 ರನ್ ಗಳಿಸುವ ಮೂಲಕ ತಮ್ಮ ವೈಯಕ್ತಿಕ ಶತಕಗಳ ಸಂಖ್ಯೆ 10ಕ್ಕೆ ಏರಿಸಿಕೊಂಡರು. ವೆಸ್ಟ್ ಇಂಡೀಸ್ ಪರ ಜೊಮೆಲ್ ವಾರಿಕನ್, ಅಲಿಕ್ ಅಥಾನಾಜೆ ತಲಾ ಒಂದು ವಿಕೆಟ್ ಪಡೆದರು.

ಜ್ಞಾನ, ಉತ್ತಮ ನಡವಳಿಕೆ ಇದ್ದರೆ ಎಲ್ಲವೂ ದೊರೆಯುತ್ತದೆ: ಪ್ರೊ. ಕೃಷ್ಣೇಗೌಡ



ಮೈಸೂರು, ಜು.13(ಜಿಎ)– ಪ್ರಸ್ತುತ ಶಿಕ್ಷಣ ದೊಡ್ಡ ಶಕ್ತಿಯಾಗಿದ್ದು, ಮುಂದಿನ ದಿನಗಳಲ್ಲಿ ಜ್ಞಾನ ಬಹುದೊಡ್ಡ ಶಕ್ತಿಯಾಗಲಿದೆ ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ನಗರದ ಕಲಾಮಂದಿರದಲ್ಲಿ ಮರಿಮಲ್ಲಪ್ಪನವರ ಪ್ರೌಢಶಾಲೆ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶವು ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ ಅನೇಕ ಅದ್ಭುತಗಳನ್ನು ಕಂಡಿದ್ದು, 60ರ ದಶಕದಲ್ಲಿ ಭಾರತದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂದೇಟು ಹಾಕುತ್ತಿದ್ದರು. ನಂತರದ ದಶಕದಲ್ಲಿ ಶಿಕ್ಷಕರು ಮನೆಗಳಿಗೆ ಹೋಗಿ ಮಕ್ಕಳನ್ನು ಶಾಲೆಗೆ ಕರೆತರಲು ಮುಂದಾದರು. ಆದರೆ, ಪ್ರಸ್ತುತ ಪೋಷಕರು ರಾತ್ರಿಯಿಂದಲೇ ಶಾಲೆ ಮುಂದೆ ಕಾದು ಮಕ್ಕಳ ದಾಖಲಾತಿ ಮಾಡುತ್ತಿದ್ದು, ಈ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯೇ ಸೃಷ್ಟಿಯಾಗಿದೆ ಎಂದರು.

ಮೊದಲು ದೈಹಿಕ ಶಕ್ತಿ ಮತ್ತು ಆಸ್ತಿ ಅಂತಸ್ತಿನ ಮೂಲಕ ವ್ಯಕ್ತಿಯ ಶಕ್ತಿಯನ್ನು ಅಳೆಯುತ್ತಿದ್ದರು. ಆದರೆ, ಇಂದು ಶಿಕ್ಷಣ ದೊಡ್ಡ ಶಕ್ತಿಯಾಗಿದೆ. ಮುಂದಿನ ದಿನಗಳಲ್ಲಿ ಜ್ಞಾನದ ಮುಂದೆ ಯಾವುದೇ ಡಿಗ್ರಿಗಳು ಲೆಕ್ಕಕ್ಕೆ ಬರುವುದಿಲ್ಲ. ಜ್ಞಾನ ಇದ್ದರೆ ಎಲ್ಲವೂ ದೊರೆಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಜ್ಞಾನ ಮತ್ತು ಉತ್ತಮ ನಡವಳಿಕೆ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಈ ವೇಳೆ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕ್ಷರ ಸ್ವಾಮಿ, ನಗರ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಶಾಲೆಯ ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಯುಜಿಡಿ ಕಾಮಗಾರಿ ಪೂರ್ಣಗೊಂಡರೂ ರಸ್ತೆಗಿಲ್ಲ ದುರಸ್ತಿ ಭಾಗ್ಯ; ಸವಾರರಿಗೆ ಫಜೀತಿ



ಮೈಸೂರು, ಜು.13(ಜಿಎ)–ಯುಜಿಡಿ ಕಾಮಗಾರಿಗಾಗಿ ಮಿರ್ಜಾ ರಸ್ತೆಯನ್ನು ಅಗೆದಿದ್ದು, ಕಾಮಗಾರಿ ಪೂರ್ಣಗೊಂಡಿದೆ. ಆದರೆ, ಅಗೆದ ರಸ್ತೆ ದುರಸ್ತಿ ಮಾಡದ ಕಾರಣ ನಿತ್ಯವೂ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿ ಅಪಘಾತಗಳು ಸಂಭವಿಸುತ್ತಿವೆ.

ನಗರದ ಎಫ್.ಕೆ.ಇರಾನಿ ವೃತ್ತದಿಂದ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯವರೆಗೂ ಇರುವ ಏಕಮುಖ ರಸ್ತೆಯಲ್ಲಿ ಹಲವು ತಿಂಗಳ ಹಿಂದೆ ಈ ಭಾಗದಲ್ಲಿ ಯುಜಿಡಿ ಸಮಸ್ಯೆ ಆಗುತ್ತಿದೆ ಎಂದು ಯುಜಿಡಿ ಕಾಮಗಾರಿ ಮಾಡಲು ರಸ್ತೆಯ ಒಂದು ಭಾಗದಲ್ಲಿ ಅಗೆದಿದ್ದರು. ನಂತರ ಕಾಮಗಾರಿಯೂ ಪೂರ್ಣಗೊಂಡಿತು. ಆದರೂ ರಸ್ತೆ ದುರಸ್ತಿ ಮಾಡದ ಹಿನ್ನೆಲೆಯಲ್ಲಿ ನಿತ್ಯವೂ ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ.

ಈ ಮಾರ್ಗದಲ್ಲಿ ನಗರ ಪೊಲೀಸ್ ಆಯುಕ್ತರ ಕಚೇರಿ, ನಗರ ಸೆನ್ ಪೊಲೀಸ್ ಠಾಣೆ, ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಮತ್ತು ನೂತನ ಜಿಲ್ಲಾಧಿಕಾರಿಗಳ ಕಚೇರಿಗೂ ಸಂಪರ್ಕ ಕಲ್ಪಿಸುವ ರಸ್ತೆಯಾಗಿರುವುದರಿಂದ ಸಾವಿರಾರು ವಾಹನ ಸವಾರರು ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ಏಕಮುಖ ರಸ್ತೆ ಆಗಿರುವುದರಿಂದ ವಾಹನದ ವೇಗವು ಸಾಮಾನ್ಯವಾಗಿ ಹೆಚ್ಚಿರುತ್ತದೆ.

ವೇಗವಾಗಿ ಬರುವ ವಾಹನ ಸವಾರರು ಗುಂಡಿಯನ್ನು ಗಮನಿಸದೇ ಬಿದ್ದು, ಅನೇಕ ಅಪಘಾತಗಳು ಸಂಭವಿಸುತ್ತಿವೆ. ಇದಕ್ಕೆ ಪುಷ್ಟಿ ನೀಡುವಂತೆ ಕೆಲವು ತಿಂಗಳ ಹಿಂದೆ ಬಸ್‌ವೊಂದು ಎಫ್.ಕೆ.ಇರಾನಿ ವೃತ್ತದಲ್ಲಿರುವ ಗುಂಡಿಗೆ ಸಿಲುಕಿಕೊಂಡಿತು. ಮುಂದಿನ ದಿನಗಳಲ್ಲಿ ರಸ್ತೆ ದುರಸ್ತಿ ಅಥವಾ ಮರು ಡಾಂಬರೀಕರಣವಾಗದಿದ್ದರೆ ಮತ್ತಷ್ಟು ಅಪಘಾತಗಳು ಸಂಭವಿಸಲಿವೆ.

15 ದಿನದೊಳಗೆ ಮರು ಡಾಂಬರ್: ಈ ರಸ್ತೆಯಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಸೇರಿದಂತೆ ಅಕ್ಕಪಕ್ಕದ ಮನೆಗಳಲ್ಲಿ ಯುಜಿಡಿ ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಸಮಸ್ಯೆಯನ್ನು ಬಗೆಹರಿಸಲು ಕಾಮಗಾರಿ ಮಾಡಲಾಯಿತು. ಕಾಮಗಾರಿ ಪೂರ್ಣಗೊಂಡಿದ್ದು, ಮಳೆ ಕಾರಣದಿಂದ ರಸ್ತೆಗೆ ಡಾಂಬರೀಕರಣ ಮಾಡಲು ಸಾಧ್ಯವಾಗಲಿಲ್ಲ. ಮರು ಡಾಂಬರೀಕರಣಕ್ಕೆ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, 15 ದಿನದೊಳಗೆ ಡಾಂಬರೀಕರಣ ಮಾಡಲಾಗುತ್ತದೆ ಎಂದು ಪಾಲಿಕೆ ಸದಸ್ಯೆ ಛಾಯಾದೇವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಅನ್ನಭಾಗ್ಯ ಯೋಜನೆ ಲಾಭ ಪಡೆಯಲು ಪೋಸ್ಟ್ ಆಫೀಸ್‌ನಲ್ಲಿ ಖಾತೆ ತೆರೆಯಿರಿ



ಪಿರಿಯಾಪಟ್ಟಣ, ಜು.13– ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯದ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ನೇರವಾಗಿ ಅವರವರ ಖಾತೆಗಳಿಗೆ 170 ರೂ.ಗಳನ್ನು ಹಾಕಲಾಗುತ್ತಿದ್ದು ಬ್ಯಾಂಕ್ ಖಾತೆಗೆ ನೇರ ಆಧಾರ್ ಲಿಂಕ್ ಮಾಡಿಸದೆ ಇದ್ದವರು ಈಗ ತಮ್ಮ ಡಿಬಿಟಿ ಖಾತೆಯನ್ನು ಪೋಸ್ಟ್ ಆಫೀಸ್‌ನಲ್ಲಿ ತೆರೆಯಬಹುದು ಎಂದು ತಾಲೂಕು ಆಹಾರ ನಿರೀಕ್ಷಕ ಸಣ್ಣಸ್ವಾಮಿ ತಿಳಿಸಿದರು.

ತಾಲೂಕು ಆಡಳಿತ ಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ತಾಲೂಕಿನಲ್ಲಿ ಒಟ್ಟು 8,975 ಅಂತ್ಯೋದಯ ಯೋಜನೆಯ ಪಡಿತರ ಚೀಟಿಗಳಿದ್ದು, ಅದರಲ್ಲಿ 33,493 ಸದಸ್ಯರುಗಳು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಅದೇ ರೀತಿ 58,567 ಬಿಪಿಎಲ್ ಚೀಟಿಗಳಿದ್ದು ಇದರಲ್ಲಿ ಒಟ್ಟು 1,75,695 ಮಂದಿ ಫಲಾನುಭವಿಗಳಿದ್ದಾರೆ. ಅಂದರೆ ಅಂತ್ಯೋದಯ ಹಾಗೂ ಬಿಪಿಎಲ್ ಕುಟುಂಬಗಳ 67,542 ಪಡಿತರ ಚೀಟಿಗಳಿದ್ದು ಒಟ್ಟು ಸದಸ್ಯರ ಸಂಖ್ಯೆ 2,09,188 ಇದೆ ಎಂದರು.

ಅಂತ್ಯೋದಯ ಕುಟುಂಬ ಒಟ್ಟು 8,975 ಪಡಿತರ ಚೀಟಿಗಳ ಪೈಕಿ 5,528 ಪಡಿತರ ಚೀಟಿಗಳ 25,926 ಸದಸ್ಯರು ಮಾತ್ರ ಈ ನೇರ ನಗದು ಸೌಲಭ್ಯ ಹೊಂದಿರುತ್ತಾರೆ. ಉಳಿದ 3,447 ರೂ. ಪಡಿತರ ಚೀಟಿಗಳ 7,441 ಸದಸ್ಯರುಗಳಿಗೆ ಈ ಸೌಲಭ್ಯ ಇರುವುದಿಲ್ಲ. ಅದೇ ರೀತಿ ಬಿಪಿಎಲ್‌ನ ಒಟ್ಟು 58627 ಪಡಿತರ ಚೀಟಿಗಳ 175,695 ಸದಸ್ಯರು ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ ಎಂದರು.

ಅದೇ ರೀತಿ ಬ್ಯಾಂಕ್ ಖಾತೆ ನಿಷ್ಕ್ರಿಯವಾಗಿರುವ ಪಡಿತರ ಚೀಟಿಯ ಕುಟುಂಬಗಳು ಒಟ್ಟು 1,430. ಹಾಗೆಯೇ ಬ್ಯಾಂಕ್ ಖಾತೆಯನ್ನು ತೆರೆದಿಲ್ಲದೆ ಇರುವ ಪಡಿತರ ಚೀಟಿಯ ಕುಟುಂಬಗಳು 2,990 ಇದ್ದು, ಆಧಾರ್ ಸಂಖ್ಯೆ ಮಾನ್ಯವಾಗಿರದೆ ಇರುವ ಪಡಿತರ ಕುಟುಂಬಗಳು ಸಂಖ್ಯೆ 12 ಇದ್ದು ಒಟ್ಟು 4,432 ಪಡಿತರ ಚೀಟಿಗಳು ಈ ನೇರ ನಗದು ಹಣ ವರ್ಗಾವಣೆ ಸೌಲಭ್ಯಕ್ಕೆ ಸದ್ಯಕ್ಕೆ ಒಳಪಡದೆ ಇರುವುದರಿಂದ ಈ ಮೇಲ್ಕಂಡ ಕುಟುಂಬಗಳು ಖಾತೆ ಇರುವ ಬ್ಯಾಂಕಿಗೆ ತೆರಳಿ ಆಧಾರ್ ಜೋಡಣೆ ಮಾಡಿಸಿ ಖಾತೆಯನ್ನು ಸಕ್ರಿಯಗೊಳಿಸಬೇಕು ಎಂದು ಅವರು ವಿವರಿಸಿದರು.

ಬ್ಯಾಂಕ್ ಖಾತೆ ಹೊಂದಿಲ್ಲದೆ ಇರುವ ಕುಟುಂಬಗಳು ಅಂಚೆ ಕಚೇರಿ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯುವುದರ ಮೂಲಕ ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾಯ ವ್ಯಾಪ್ತಿಯ ಪಡಿತರ ನ್ಯಾಯಬೆಲೆ ಅಂಗಡಿಗಳನ್ನು ಸಂಪರ್ಕಿಸುವಂತೆ ಅವರು ಕೋರಿದ್ದಾರೆ.

ಯುವ ಬ್ರಿಗೇಡ್‌ನ ವೇಣುಗೋಪಾಲ್ ಹತ್ಯೆ ಪ್ರಕರಣ


ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿರುವ ಸಿ.ಟಿ.ರವಿ, ಸೂಲಿಬೆಲೆ ವಿರುದ್ಧ ಸ್ವಯಂ ಪ್ರಕರಣ ದಾಖಲಿಸಿ

ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಸೋಸಲೆ ಶಶಿಕಾಂತ್ ಸರ್ಕಾರಕ್ಕೆ ಆಗ್ರಹ

ತಿ.ನರಸೀಪುರ, ಜು.13–ಸ್ನೇಹಿತರ ನಡುವೆ ವೈಯಕ್ತಿಕ ದ್ವೇಷಕ್ಕಾಗಿ ನಡೆದಿರುವ ಕೊಲೆಯನ್ನು ಧರ್ಮದ ಆಧಾರದ ಮೇಲೆ ಬಿಂಬಿಸಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಿ ಯುವಕರ ಮನಸ್ಸಿನಲ್ಲಿ ವಿಷ ಬೀಜ ಬಿತ್ತುತ್ತಿರುವ ಯುವ ಬ್ರಿಗೇಡ್‌ನ ಚಕ್ರವರ್ತಿ ಸೂಲಿಬೆಲೆ ಹಾಗೂ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ವಿರುದ್ಧ ಸರ್ಕಾರ ಸ್ವಯಂಪ್ರೇರಿತ ದೂರು ದಾಖಲಿಸಿ ಬಂಧಿಸಬೇಕೆಂದು ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಸೋಸಲೆ ಎಸ್.ಆರ್. ಶಶಿಕಾಂತ್ ಒತ್ತಾಯಿಸಿದ್ದಾರೆ.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಭಾನುವಾರ ಯುವ ಬ್ರಿಗ್ರೇಡ್‌ನ ಸಂಚಾಲಕ ವೇಣುಗೋಪಾಲ್ ಅವರನ್ನು ಸ್ನೇಹಿತರ ಗುಂಪೇ ವೈಯಕ್ತಿಕ ದ್ವೇಷಕ್ಕಾಗಿ ಕೊಲೆ ಮಾಡಿದೆ. ಕೊಲೆ ಆಗಬಾರದಿತ್ತು. ಆದರೆ ದುರದೃಷ್ಟವಶಾತ್ ಆಗಿದೆ. ಸಂಘಟನೆಯು ಕುಟುಂಬಕ್ಕೆ ಸಾಂತ್ವನ ಹೇಳುತ್ತದೆ ಎಂದರು.

ಮೃತನ ಕುಟುಂಬಕ್ಕೆ ಬದುಕುವ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕಿದೆ.



ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಸೋಸಲೆ ಶಶಿಕಾಂತ್ ಮಾತನಾಡಿದರು.

ಆದರೆ ಘಟನೆಯನ್ನು ಧರ್ಮದ ಆಧಾರದ ಮೇಲೆ ನೋಡುವಂತಹ ವ್ಯವಸ್ಥಿತ ಪಿತೂರಿ ಬಿಜೆಪಿ ಮುಖಂಡರು ಹಾಗೂ ಯುವ ಬ್ರಿಗೇಡ್‌ನ ಚಕ್ರವರ್ತಿ ಸೂಲಿಬೆಲೆ ಮಾಡುತ್ತಿದ್ದಾರೆ ಎಂದು ದೂರಿದರು.

ಮೃತನ ಕುಟುಂಬಕ್ಕೆ ಸಾಂತ್ವನ ಹೇಳುವ ನೆಪದಲ್ಲಿ ಕ್ಷೇತ್ರಕ್ಕೆ ಬಂದ ಚಕ್ರವರ್ತಿ ಸೂಲಿಬೆಲೆ, ಸಿ.ಟಿ.ರವಿ, ಅಶ್ವಥ್ ನಾರಾಯಣ್, ಎನ್.ಮಹೇಶ್ ಹಾಗೂ ಬಿಜೆಪಿಯ ಮಾಜಿ ಶಾಸಕರುಗಳು ವೇಣುಗೋಪಾಲ್ ಕೊಲೆಯನ್ನು ಹಿಂದೂ ಕಾರ್ಯಕರ್ತನ ಕೊಲೆ ಎಂದು ಬಿಂಬಿಸಿದ್ದಾರೆ. ಧರ್ಮ–ಧರ್ಮಗಳ ನಡುವೆ ಕೋಮುಭಾವನೆ ಕೆರಳಿಸಿ ಯುವಕರ ಮನಸ್ಸಲ್ಲಿ ವಿಷ ಬೀಜ ಬಿತ್ತುವ ಮೂಲಕ ಮುಂದಿನ ಸಂಸತ್ ಚುನಾವಣೆಗೆ ಅಸ್ತ್ರವನ್ನಾಗಿ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಆಲಗೂಡು ಶಿವಣ್ಣ, ಸೋಸಲೆ ಎಸ್.ನಂಜುಂಡಯ್ಯ, ಕೊಳತ್ತೂರು ಮಹದೇವಸ್ವಾಮಿ, ಮಂಜು, ನಾಗರಾಜು, ಹ್ಯಾಕನೂರು ಮಹದೇವಸ್ವಾಮಿ, ತೊಟ್ಟವಾಡಿ ರವಿ, ತ್ರಿವೇಣಿನಗರ ಉಮೇಶ್, ಕೆಬ್ಬೇಹುಂಡಿ ಮಹದೇವ, ರಾಜಪ್ಪ, ಶೇಷಣ್ಣ, ರಾಜು ಮುಂತಾದವರು ಹಾಜರಿದ್ದರು.

ಚಿಕ್ಕವಡ್ಡರಗುಡಿ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಭೇರ್ಯ, ಜು.13– ಕೆ.ಆರ್.ನಗರ ತಾಲೂಕಿನ ಚಿಕ್ಕವಡ್ಡರಗುಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಎಸ್.ಕೃಷ್ಣಪ್ಪ ಉಪಾಧ್ಯಕ್ಷರಾಗಿ ಶ್ರೀನಿವಾಸ ಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

5 ವರ್ಷದ ಅವದಿಗೆ ಕಳೆದ ವಾರವಷ್ಟೆ ನೂತನ ಆಡಳಿದ ಮಂಡಳಿಯ ನಿರ್ದೇಶಕ ಸ್ಥಾನದ ಚುನಾವಣೆ ನಡೆದು 12 ಮಹಿಳೆಯರು ಸೇರಿದಂತೆ ಆಡಳಿತ ಮಂಡಳಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಇಂದು ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿ.ಎಸ್.ಕೃಷ್ಣಪ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀನಿವಾಸ ಶೆಟ್ಟಿ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಎಸ್.ರವಿ ಘೋಷಣೆ ಮಾಡಿದರು. ಸಂಘದ ಕಾರ್ಯದರ್ಶಿ ಸಿ.ಜೆ.ನಿರಂಜನ್ ಕಾರ್ಯ ನಿರ್ವಹಿಸಿದರು.

ಬಳಿಕ ನೂತನ ಅಧ್ಯಕ್ಷ ಸಿ.ಎಸ್.ಕೃಷ್ಣಪ್ಪ ಮಾತನಾಡಿ, ಹಾಲು ಉತ್ಪಾದಕರು ಸಹಕಾರ ನೀಡಿ ಉತ್ತಮ ಗುಣಮಟ್ಟದ ಹಾಲನ್ನು ಸಂಘಕ್ಕೆ ಸರಬರಾಜು ಮಾಡಿದರೆ ಸಂಘವು ಅಭಿವೃದ್ಧಿ ಹೊಂದಲಿದೆ. ಸಂಘದಲ್ಲಿ ದೊರೆಯುವ ಪಶು ಆಹಾರ, ವಿಮಾ ಸೌಲಭ್ಯವಿದ್ದು ಸಕಾಲದಲ್ಲಿ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.

ನೂತನ ಆಡಳಿತ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕರಾದ ಸಿ.ಎಂ. ದಿಲೀಪ್, ಸಿ.ಎಸ್. ಪ್ರೇಮ್‌ಕುಮಾರ್, ಸಿ.ಬಿ.ಮಂಜುನಾಥ್, ಸಿದ್ದೇಗೌಡ, ಸಿ.ಕೆ. ಚಂದ್ರಹಾಸ, ಸಿ.ಸಿ.ಕುಮಾರ್, ಇಂದ್ರಮ್ಮ, ಎಂ.ಆರ್.ಮಂಜುಳ, ಸಿ.ಪಿ.ವಿಜಯ, ರಾಜಯ್ಯ ಎಲ್ಲರಿಗೂ ಹಾರ ಹಾಕಿ ಸಂಘದಿಂದ ಅಭಿನಂದಿಸಲಾಯಿತು. ಸಂಘದ ಹಾಲು ಪರೀಕ್ಷಕ ಬಿ.ಕೆ.ಮಂಜುನಾಥ್, ಸಹಾಯಕ ಸಚಿನ್ ಮತ್ತು ಗ್ರಾಮದ ಮುಖಂಡರು ಹಾಜರಿದ್ದರು.

ಚಾ.ನಗರ ಲೋಕಸಭಾ ಕ್ಷೇತ್ರಕ್ಕೆ ನಾನು ಬಿಜೆಪಿ ಟಿಕೆಟ್ ಆಕಾಂಕ್ಷಿ

ಹೆಚ್.ಡಿ.ಕೋಟೆ, ಜು.13– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರದಿಂದ ನಾನು ಸಹ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಬಿಜೆಪಿ ಮುಖಂಡರು ಮತ್ತು ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ತಿಳಿಸಿದ್ದಾರೆ.



ಚಾ.ನಗರ ಲೋಕಸಭಾ ಕ್ಷೇತ್ರದಲ್ಲಿ 4 ಲಕ್ಷ ಪರಿಶಿಷ್ಟ ಜಾತಿಯ ಮತದಾರರಿದ್ದಾರೆ. ಆದ್ದರಿಂದ ಈ ಮತಗಳನ್ನು ಸೆಳೆಯಲು ಅದೇ ಸಮುದಾಯದ ನನಗೆ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಪಕ್ಷದಲ್ಲಿ ಟಿಕೇಟ್ ನೀಡಬೇಕು ಎಂದು ಅವರು ತಿಳಿಸಿದರು.

ಪಟ್ಟಣದ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಹತ್ತು ವರ್ಷಗಳಿಂದ ಪಕ್ಷ ಸಂಘಟನೆಯನ್ನು ಮಾಡುತ್ತಾ ಬಂದಿದ್ದೇನೆ, ಕಳೆದ ಬಾರಿಯೂ ಸಹ ನಾನು ಚಾಮರಾಜನಗರ ಕ್ಷೇತ್ರಕ್ಕೆ ಟಿಕೆಟ್ ಆಕಾಂಕ್ಷಿಯಾಗಿದ್ದೆ. ನನಗೆ ಆಗ ಪಕ್ಷ ಸಂಘಟನೆ ಮಾಡುವಂತೆ ಸೂಚಿಸಿತ್ತು. ಅದರಂತೆ ನಾನು ಪಕ್ಷ ಸಂಘಟನೆಯಲ್ಲಿ ತೊಡಗಿದ್ದು, ನನಗೆ ಈ ಬಾರಿ ಚಾಮರಾಜನಗರ ಕ್ಷೇತ್ರದಿಂದ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ದೇಶದಲ್ಲಿ ಮೋದಿಯವರ ಆಡಳಿತದಿಂದ ನಾನು ಪ್ರಭಾವಿತನಾಗಿದ್ದು, ಅವರ ಆದರ್ಶಗಳೇ ನಾನು ಟಿಕೆಟ್ ಕೇಳಲು ಕಾರಣ ಎಂದರು.

ನಾನು ಒಬ್ಬ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿರುವುದರಿಂದ ಹೇಗೆ ಅಭಿವೃದ್ಧಿ ಕೆಲಸಗಳನ್ನು ಮಾಡಿಸಬಹುದು ಎಂಬುದರ ಅರಿವಿದೆ, ನನಗೆ ಟಿಕೆಟ್ ನೀಡಿ ಗೆದ್ದರೆ ಉತ್ತಮ ಅಭಿವೃದ್ಧಿ ಕೆಲಸಗಳಾಗಲಿವೆ ಎಂದರು. ಇದೇ ವೇಳೆ ಚಲವಾದಿ ಜಿಲ್ಲಾ ಅಧ್ಯಕ್ಷ ಹಂಸರಾಜ್, ತಾಲೂಕು ಅಧ್ಯಕ್ಷ ಸ್ವಾಮಿ, ಸುಂದರ್, ಚೌಡಳ್ಳಿ ಜವರಯ್ಯ, ಗೋವಿಂದ, ಮೋಹನ್ ರಾಜ್, ಮಹೇಶ್ ಇನ್ನು ಮುಂತಾದವರು ಹಾಜರಿದ್ದರು.



ತಿ.ನರಸೀಪುರದ ಮಾಜಿ ವಸತಿ ಯೋಜನಾ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಸುನಿಲ್ ಬೋಸ್ ಅವರು ನೀಡಿದ ಕ್ರಿಕೆಟ್ ಹಾಗೂ ಆಟದ ಸಾಮಗ್ರಿಗಳನ್ನು ಕಾಂಗ್ರೆಸ್ ಕಚೇರಿಯಲ್ಲಿ ತಾಲೂಕಿನ ಮಾವಿನಹಳ್ಳಿ ಯುವಕರಿಗೆ ಆಪ್ತ ಸಹಾಯಕ ಬಸವರಾಜು ವಿತರಿಸಿದರು. ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಉಕ್ಕಲಗೆರೆ ರಾಜು, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಅನುಪ್ ಗೌಡ, ಮುಖಂಡ ನಾಗೇಶ್, ಮಹೇಶ್, ಸೋಮಣ್ಣ ಮತ್ತಿತರಿದ್ದರು.

ಕೊನೆ ಆಷಾಢ ಶುಕ್ರವಾರದ ಪೂಜೆ

ಹುಣಸೂರು, ಜು.13– ಕೊನೆ ಆಷಾಢ ಶುಕ್ರವಾರ (ಜು.14) ನಗರದ ಮಾರಿಗುಡಿ ಬೀದಿಯಲ್ಲಿರುವ ಮುತ್ತೂ ಮಾರಮ್ಮ ದೇವಸ್ಥಾನದಲ್ಲಿ ದೇವಿಯ ಅಲಂಕಾರ ಮತ್ತು ವಿಶೇಷ ಪೂಜಾ ಕಾರ್ಯಕ್ರಮ ಬೆಳಗ್ಗೆಯಿಂದ ರಾತ್ರಿಯವರೆಗೆ ನಡೆಯಲಿದೆ.

ಸಂಜೆ ನಗರದ ಪ್ರಮುಖ ಬೀದಿಗಳಲ್ಲಿ ಮಂಗಳ ವಾದ್ಯ, ಚಂಡೆ ವಾದ್ಯ, ಪೂಜಾ ಕುಣಿತಗಳೊಂದಿಗೆ ಶ್ರೀ ಮುತ್ತೂ ಮಾರಮ್ಮ ದೇವಿಯ ಉತ್ಸವ ಅದ್ಧೂರಿಯಾಗಿ ನಡೆಯಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಪ್ರಕಟಣೆ ಕೋರಿದೆ.

ಶಾಲೆಯಲ್ಲಿ ಸಿಸಿ ಟಿವಿ, ಡಿವಿಆರ್ ಕದ್ದ ಕಳ್ಳರು

ನಂಜನಗೂಡು, ಜು.13– ತಾಲೂಕಿನ ಹೆಗ್ಗಡಹಳ್ಳಿ ಪ್ರೌಢಶಾಲೆಯ ಕಿಟಿಕಿಯ ಸರಳು ಮುರಿದು ಶಾಲೆಯ ಸಿ.ಸಿ. ಕ್ಯಾಮೆರಾ, ಸಿಸಿಟಿವಿಯ ಡಿವಿಆರ್ ಮತ್ತು 15 ಸಾವಿರ ನಗದು ಕದ್ದು ಪರಾರಿಯಾಗಿರುವ ಘಟನೆ ಬುಧವಾರ ರಾತ್ರಿ ಜರುಗಿದೆ.



ಶಾಲೆಯ ಸರಳನ್ನು ಮುರಿದು ಒಳಗೆ ಪ್ರವೇಶಿಸಿರುವ ಕಳ್ಳರು ಶಾಲೆಯಲ್ಲಿದ್ದ ಬೀರುವಿನ ಬಾಗಿಲು ಮುರಿದು 15,000 ರೂಪಾಯಿಗಳನ್ನು ಜೊತೆಗೆ ಸಿಸಿ ಕ್ಯಾಮೆರಾ ಹಾಗೂ ಡಿವಿಆರ್ ಕದ್ದು ಪರಾರಿಯಾಗಿದ್ದಾರೆ. ಗುರುವಾರ ಬೆಳಗ್ಗೆ ಶಾಲೆಯ ಬಾಗಿಲು ತೆರೆದಾಗ ಕಳ್ಳತನ ನಡೆದಿರುವುದು ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶಿವನಂಜಶೆಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿ ಕಳ್ಳರನ್ನು ಹಿಡಿಯಲು ತಂತ್ರ ರೂಪಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಜಯಪುರದ ಎಸ್.ಆರ್. ವೈನ್ಸ್ ಮತ್ತು ತಳೂರು ವೃತ್ತದ ಎಸ್.ಡಿ. ವೈನ್ಸ್ ಮಾಲೀಕ ಎಸ್.ಶ್ರೀಕಾಂತ್, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರನ್ನು ಬೆಂಗಳೂರಿನ ಡಾಲರ್ಸ್ ಕಾಲೋನಿಯ ಅವರ ನಿವಾಸದಲ್ಲಿ ಭೇಟಿ ಮಾಡಿ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಶಿವಕುಮಾರ್ ಉಪಸ್ಥಿತರಿದ್ದರು.

ಸೇವಾ ಭಾರತಿ ಟ್ರಸ್ಟ್‌ನಿಂದ ನೋಟ್ ಬುಕ್ ವಿತರಣೆ

ತಿ.ನರಸೀಪುರ, ಜು.13–ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಶಾಲೆಯ ಮಕ್ಕಳಿಗೆ ಮೈಸೂರಿನ ಸೇವಾ ಭಾರತಿ ಟ್ರಸ್ಟ್ ವತಿಯಿಂದ ನೋಟ್ ಬುಕ್ ವಿತರಿಸಲಾಯಿತು.

ಗ್ರಾಮದ ಶಾಲಾವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ 160 ಮಕ್ಕಳಿಗೆ ನೋಟ್ ಬುಕ್, ಪೆನ್ಸಿಲ್, ಪೆನ್ ನೀಡಲಾಯಿತು. ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಡಿಎಸ್ ರಾಜ್ಯ ಮಾಧ್ಯಮ ವಕ್ತಾರ ತಾಯೂರು ಪ್ರಕಾಶ್ ಸೇವಾಭಾರತಿ ಸೇವಾ ಟ್ರಸ್ಟ್‌ನವರು ಶಾಲಾ ಮಕ್ಕಳಿಗೆ ನೋಟ್ ಬುಕ್ ಹಾಗೂ ಪಠ್ಯ ಪುಸ್ತಕ ನೀಡುವ ಮೂಲಕ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಹಸ್ತ ಚಾಚುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮೈಸೂರು, ಮಂಡ್ಯ ಜಿಲ್ಲೆಯಲ್ಲಿ 176 ಶಾಲೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಪುಸ್ತಕಗಳನ್ನು ವಿತರಿಸಿದೆ ಎಂದರು.




ಸರ್ಕಾರ ಮಾಡದ ಕೆಲಸವನ್ನು ಟ್ರಸ್ಟ್ ಮಾಡುವ ಮೂಲಕ ವಿದ್ಯಾರ್ಥಿಗಳ ನೆರವಿಗೆ ನಿಂತಿರುವುದು ಶ್ಲಾಘನೀಯ, ಇಂದು ಗ್ರಾಮಾಂತರ ಪ್ರದೇಶಗಳ ಎಷ್ಟೋ ಬಡ ಮಕ್ಕಳು ಪಠ್ಯಪುಸ್ತಕ ಹಾಗೂ ನೋಟ್ ಬುಕ್‌ಗಳನ್ನು ಕೊಳ್ಳಲು ಸಾಧ್ಯವಾಗದೇ ಶಿಕ್ಷಣದಿಂದಲೇ ವಂಚಿತರಾಗಿದ್ದಾರೆ. ಹಾಗಾಗಿ ಅಂಬೇಡ್ಕರ್ ಅವರ ಆಶಯಕ್ಕೆ ತಕ್ಕಂತೆ ಟ್ರಸ್ಟ್ ಕಾರ್ಯ ನಿರ್ವಹಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕಾಂತಾರ ಚಲನ ಚಿತ್ರ ಸಹ ನಿರ್ದೇಶಕಿ ಶ್ರೇಯಾ, ಕಿರುತೆರೆ ನಟ ವಿಶಾಲ್ ಹೆಗಡೆ, ಜರ್ಮನ್ ಅಂತರ ರಾಷ್ಟ್ರೀಯ ಐಟಿ ಸೆಲ್ ವ್ಯವಸ್ಥಾಪಕಿ ಪ್ರೀತಿ, ರಾಷ್ಟ್ರೀಯ ಸಮೃದ್ಧಿ ಬ್ಯಾಂಕ್ ಅಧ್ಯಕ್ಷ ಬಳ್ಳಾರಿ ವೀರೇಶ್, ಕನ್ನಡ ರಾಷ್ಟ್ರೀಯ ಶಿಕ್ಷಾ ಒಕ್ಕೂಟದ ರಾಜ್ಯಾಧ್ಯಕ್ಷ ತಗಡೂರು ಗುರು, ಟಿಎಸ್ ಸುಬ್ಬಣ್ಣ ಶಾಲೆಯ ಟ್ರಸ್ಟಿ ಹಾಗೂ ಸೇವಾಭಾರತಿ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಚಂದ್ರಶೇಖರ್, ಡಾ.ಎಚ್.ಪಿ.ಹರೀಶ್, ಮುಖ್ಯಶಿಕ್ಷಕ ಜಯಪ್ಪ ಜಯಶಂಕರ್, ರಮೇಶ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಅಧ್ಯಕ್ಷ ಯಡದೊರೆ ಮಹೇಶ್ ಸೇರಿದಂತೆ ಮತ್ತಿತರರಿದ್ದರು.

ಹುರ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಮಲ್ಕುಂಡಿ, ಜು.13– ಸಮೀಪದ ಹುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಲ್ಕುಂಡಿ ಸಣ್ಣ ಮಾದಪ್ಪ ಉಪಾಧ್ಯಕ್ಷರಾಗಿ ಎಂ.ಪುಟ್ಟಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಅಧ್ಯಕ್ಷರಾಗಿದ್ದ ಗುರುಮಲ್ಲಪ್ಪ, ಉಪಾಧ್ಯಕ್ಷ ಮಹದೇವನಾಯಕ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಸಂಘದ ಕಚೇರಿಯಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಲ್ಕುಂಡಿ ಗ್ರಾಮದ ಸಣ್ಣ ಮಾದಪ್ಪ, ಉಪಾಧ್ಯಕ್ಷ ಸ್ಥಾನಕ್ಕೆ ಎಂ.ಪುಟ್ಟಸ್ವಾಮಿ ಇವರಿಬ್ಬರೆ ನಾಮಪತ್ರ ಸಲ್ಲಿಸಿದ್ದು, ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಸರ್ವಮಂಗಳ ಘೋಷಣೆ ಮಾಡಿದರು.

ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ಮಾತನಾಡಿ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ರೈತರಿಗೆ ತಲುಪಿಸುವ ಕೆಲಸವನ್ನು ನೂತನ ಆಡಳಿತ ಮಂಡಳಿ ಶ್ರಮಿಸಬೇಕು. ರೈತರು ಸಕಾಲಕ್ಕೆ ಸಾಲ ಮರುಪಾವತಿ ಮಾಡಿ ಸರ್ಕಾರದ ಸೌಲದ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ನಿರ್ದೇಶಕರಾದ ಚಂದ್ರು, ಎಂ.ವಿ.ಶಿವಕುಮಾರ್, ತ್ಯಾಗರಾಜ್, ಪಿಣ್ಣಪ್ಪ, ರತ್ನಮ್ಮ, ಪ್ರೇಮಕುಮಾರಿ, ಸಿಇಓ ನಾರಾಜಮೂರ್ತಿ, ಗುಮಸ್ತ ಮಹದೇವಸ್ವಾಮಿ, ಮುಖಂಡರಾದ ಎಂ.ಸಿ.ರಮೇಶ್, ದಸಂಸ ಮುಖಂಡ ಕೃಷ್ಣ, ಶಿವರುದ್ರ, ಕೆಂಡಪ್ಪ, ರವಿ ಸೇರಿದಂತೆ ಪ್ರಮುಖರು ಹಾಜರಿದ್ದರು.



ಸೇವೆಯಿಂದ ನಿವೃತ್ತಿಯಾದ ಅಧಿಕಾರಿಗೆ ಪರಿಹಾರದ ಚೆಕ್ ನೀಡಿ ಬೀಳ್ಕೊಡುಗೆ



ಸರಗೂರು, ಜು.13– ಹಾಲು ಉತ್ಪಾದಕರ ಸಂಘದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಸುಮಿತ್ರ ಅವರನ್ನು ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಮೈಮುಲ್ ರೈತ ಕಲ್ಯಾಣ ಟ್ರಸ್ಟ್ ವತಿಯಿಂದ ಬೀಳ್ಕೊಡಲಾಯಿತು.


ಸರಗೂರು ತಾಲೂಕಿನ ಬಿ.ಮಟಕೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ 17 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಮಿತ್ರ ಅವರಿಗೆ ವಯೋನಿವೃತ್ತಿ ಪರಿಹಾರ ಮೂರು ಲಕ್ಷ ರೂಗಳ ಚೆಕ್ಕನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಹಾಗೂ ನಿರ್ದೇಶಕಿ ದ್ರಾಕ್ಷಾಯಿಣಿ ಬಸವರಾಜಪ್ಪ ನೀಡಿ ಬೀಳ್ಕೊಟ್ಟರು. ಈ ವೇಳೆ ಈರೇಗೌಡರು ಮಾತನಾಡಿ, ಪ್ರತಿಯೊಬ್ಬರು ವಯೋನಿವೃತ್ತಿ ಹೊಂದಲೇ ಬೇಕು, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ನಿಮ್ಮ ಕರ್ತವ್ಯ ಎಂದಿಗೂ ಶಾಶ್ವತವಾಗಿರುತ್ತದೆ. ಕುಟುಂಬದ ಸದಸ್ಯರ ಜೊತೆಯಲ್ಲಿ ಹೆಚ್ಚು ಸಮಯ ಕಳೆಯಬಹುದು. ವಯೋ ನಿವೃತ್ತಿಯಾದರೂ ಮುಂದೆ ಕರ್ತವ್ಯ ಮಾಡುವವರಿಗೆ ಮಾರ್ಗದರ್ಶಕರಾಗಿರಿ ಎಂದರು.

ಕಾರ್ಯಕ್ರಮದಲ್ಲಿ ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಯೋಗೀಶ್, ಅವಿನಾಶ್ ಎಂ, ಪರಮೇಶ್, ಭಾವಾನೀಶ್, ಮಹದೇವಸ್ವಾಮಿ, ಪ್ರಕಾಶ್, ರೇಖಾ, ಶುಶೀಲಮ್ಮ ಇನ್ನಿತರರು ಉಪಸ್ಥಿತರಿದ್ದರು.

ಕೊನೆ ಆಷಾಢ ಶುಕ್ರವಾರ: ಇಂದು ಅನ್ನ ಸಂತರ್ಪಣೆ

ಟಿ.ನರಸೀಪುರ,ಜು.13– ಕೊನೆಯ ಆಷಾಢ ಶುಕ್ರವಾರ(ಜು.14) ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ವಸತಿ ಯೋಜನಾ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಸುನಿಲ್‌ಬೋಸ್ ಅವರು ಚಾಮುಂಡಿ ತಾಯಿಗೆ ಪೂಜೆ ನೆರವೇರಿಸಿ ಅನ್ನ ಸಂತರ್ಪಣೆಯನ್ನು ಏರ್ಪಡಿಸಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಿ ಪ್ರಸಾದವನ್ನು ಸ್ವೀಕರಿಸಬೇಕೆಂದು ಆಪ್ತ ಸಹಾಯಕ ಬಸವರಾಜು ಮನವಿ ಮಾಡಿದ್ದಾರೆ.

ಮಹದೇವಮ್ಮ ನಿಧನ



ಹೆಚ್.ಡಿ.ಕೋಟೆ, ಜು.13– ತಂಬಾಕು ಮಂಡಳಿ ಮಾಜಿ ನಿರ್ದೇಶಕ ವೈ.ಟಿ. ಮಹೇಶ್ ಅವರ ತಾಯಿ ಮಹದೇವಮ್ಮ(90) ಗುರುವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶುಕ್ರವಾರ ಮಧ್ಯಾಹ್ನ ಎರಡು ಗಂಟೆಗೆ ಪಟ್ಟಣದ ಹೆಚ್.ಬಿ. ರಸ್ತೆಯಲ್ಲಿರುವ ಅವರ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬವರ್ಗ ತಿಳಿಸಿದೆ.

ಮಾಸಾಶನ ಪಡೆಯಲು ಕಲಾವಿದರ ಸಂಕಷ್ಟ

ಮೈಸೂರು, ಜು.13(ಜಿಎ)– ಸರ್ಕಾರದ ವತಿಯಿಂದ ಕಲಾವಿದರು ಮತ್ತು ಸಾಹಿತಿಗಳಿಗೆ ನೀಡುವ ಮಾಸಾಶನ ಎರಡು ಸಾವಿರ ರೂ. ಆದರೆ, ಅದನ್ನು ಪಡೆಯಲು ಮಾತ್ರ ಅನೇಕ ಪರೀಕ್ಷೆಗಳನ್ನು ಎದುರಿಸಬೇಕಿದೆ.

ಮೈಸೂರು ಜಿಲ್ಲೆಯಲ್ಲಿ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ ಮತ್ತು ಯಕ್ಷಗಾನ, ಲಲಿತಕಲೆ, ಶಿಲ್ಪಕಲೆಗಳಲ್ಲಿ ಅನೇಕ ಸಾಧಕರು ಗಣನೀಯ ಸೇವೆ ಸಲ್ಲಿಸಿದ್ದಾರೆ. ಆದರೆ, ಸರ್ಕಾರದ ವತಿಯಿಂದ 2 ಸಾವಿರ ರೂ. ನಂತೆ 333 ಮಂದಿ ಮಾಸಾಶನ ಪಡೆದು ಕೊಳ್ಳುತ್ತಿದ್ದು, ಕಲಾವಿದರು ನಿಧನ ಹೊಂದಿದ ನಂತರ ಅವರ ಪತ್ನಿಗೆ ಮಾಸಾಶನ ನೀಡಲಾಗುತ್ತಿದೆ. ಅದರಂತೆ ಜಿಲ್ಲೆಯಲ್ಲಿ 21 ಮಂದಿಗೆ ನೀಡಲಾಗುತ್ತಿದೆ.

ಈ ಹಿಂದೆ ಕಲಾವಿದರ ಮಾಸಾಶನ 1,500 ರೂ ನಿಗದಿ ಮಾಡಲಾಗಿತು. ಆದರೆ, 2019ರ ಡಿಸೆಂಬರ್‌ನಲ್ಲಿ 500 ರೂ.ಗಳನ್ನು ಹೆಚ್ಚಿಸಲಾಯಿತು. ಅನೇಕ ಕಲಾವಿದರ ಪ್ರಕಾರ ಸರ್ಕಾರ ನೀಡುವ ಮಾಸಾಶನ ಯಾವುದಕ್ಕೂ ಸಾಲುವುದಿಲ್ಲ. ಕನ್ನಡ ನಾಡು–ನುಡಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ, ಯಕ್ಷಗಾನ, ಲಲಿತಕಲೆ, ಶಿಲ್ಪಕಲೆಗಳ ಮೂಲಕ ಪ್ರಚಾರಗೊಳಿಸುತ್ತಿದ್ದು, ಪ್ರತಿ ವರ್ಷವೂ ಮಾಸಾಶನವನ್ನು ಹೆಚ್ಚಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದು, ಯಾವುದೇ ಪ್ರಯೋಜನವಾಗಿಲ್ಲ ಎಂದು ಕೆಲ ಕಲಾವಿದರು ಬೇಸರ ವ್ಯಕ್ತಪಡಿಸಿದ್ದಾರೆ.

ಸರ್ಕಾರ ಮಾಸಾಶನ ನಿಗದಿಪಡಿಸಿದ್ದು, ಅದನ್ನು ಪಡೆದುಕೊಳ್ಳಲು ಕಲಾವಿದರು, ಸಾಹಿತಿಗಳು ವಿವಿಧ ಕ್ಷೇತ್ರದ ಸಾಧಕರು ಅನೇಕ ಸವಾಲುಗಳನ್ನು ಎದುರಿಸಬೇಕಿದೆ. ನಿಗದಿತ ಮಾಸಾಶನ ಅರ್ಜಿಯನ್ನು ಆಯಾ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಮೂಲಕ ಸಲ್ಲಿಸಬೇಕು. ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಜಾನಪದ ಮತ್ತು ಯಕ್ಷಗಾನ, ಲಲಿತಕಲೆ, ಶಿಲ್ಪಕಲೆಗಳಲ್ಲಿ 25 ವರ್ಷಗಳ ಕಾಲ ಗಣನೀಯ ಸೇವೆಸಲ್ಲಿಸಿ ಕಷ್ಟ ಪರಿಸ್ಥಿತಿಯಲ್ಲಿರುವವರು ಮಾಸಾಶನ ಪಡೆಯಲು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು 58 ವರ್ಷಗಳಾಗಿರಬೇಕು. ವಯಸ್ಸಿನ ಬಗ್ಗೆ ಶಿಕ್ಷಣ ಸಂಸ್ಥೆ ನೀಡಿದ ಅಥವಾ ಕೋರ್ಟ್‌ನಿಂದ ಪಡೆದ ಅಫಿಡವಿಟ್ ಅನ್ನು ಸಲ್ಲಿಸಬೇಕು.

ಕಲಾವಿದರು ತಹಶೀಲ್ದಾರರಿಂದ ಪಡೆದ ವಾರ್ಷಿಕ ಆದಾಯ ಪ್ರಮಾಣ ಪತ್ರ ನೀಡಬೇಕು. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಿಗೆ ರೂ.40.000–00 ಹಾಗೂ ಪಟ್ಟಣ ಪ್ರದೇಶಗಳಿಗೆ ರೂ.50,000–00 ಅಥವಾ ಅದಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರಬೇಕು. ಅಂಗವಿಕಲ ಕಲಾವಿದರಿಗೆ ವಯಸ್ಸು 40 ವರ್ಷಗಳಾಗಿದ್ದರೆ ಅಥವಾ 20 ವರ್ಷಗಳ ಸೇವೆ ಸಲ್ಲಿಸಿದ್ದರೆ, ಮಾಸಾಶನ ಮಂಜೂರಾತಿಗೆ ಅರ್ಜಿಯನ್ನು ಪರಿಗಣಿಸಲಾಗುವುದು. ಇಂತಹ ಕಲಾವಿದರು ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಅಧಿಕೃತ ದಾಖಲೆಗಳನ್ನು ಸಲ್ಲಿಸಬೇಕು.



> ಈ ಹಿಂದೆ ಉಮಾಶ್ರೀ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದಾಗ ಕಲಾವಿದರ ಮಾಸಾಶನವನ್ನು 5 ಸಾವಿರ ರೂ.ಗೆ ಹೆಚ್ಚಿಸಬೇಕೆಂದು ಮನವಿ ಸಲ್ಲಿಸಲಾಗಿತ್ತು. ಆದರೆ, ಅದು ಈವರೆಗೂ ಅನುಷ್ಠಾನಗೊಂಡಿಲ್ಲ. ಮಾಸಾಶನ ಪಡೆಯಲು ಸರ್ಕಾರ ರೂಪಿಸಿರುವ ಮಾರ್ಗಸೂಚಿ ಸರಿ ಇದೆ. ಆದರೆ, ಮಾಸಾಶನ ಹೆಚ್ಚಿಸಬೇಕು.
> –ಮಳವಳ್ಳಿ ಮಹದೇವಸ್ವಾಮಿ, ಜಾನಪದ ಕಲಾವಿದ

ಅರ್ಜಿದಾರರು ಮೂರು ಪ್ರತಿಯ ಮಾಸಾಶನ ಅರ್ಜಿಯನ್ನು ಅವರ ಸಹಿ ಮತ್ತು ಸರಿಯಾದ ವಿಳಾಸದೊಂದಿಗೆ ಭರ್ತಿಮಾಡಿ ಅವಶ್ಯ ದಾಖಲೆಗಳೊಂದಿಗೆ, ಅವರ ಕಲಾಸೇವೆಯ ಸಾಧನೆಗಳ ಮೂಲ ಪ್ರಮಾಣ ಪತ್ರಗಳನ್ನು, ಇಲ್ಲವೇ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಲ್ಪಟ್ಟ ದಾಖಲೆಗಳನ್ನು ಆಯಾ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕು. ಅರ್ಜಿಯೊಂದಿಗೆ ಇತ್ತೀಚಿನ ಎರಡು ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಭಾವಚಿತ್ರಗಳಿಗೆ ಗೆಜೆಟೆಡ್ ಅಧಿಕಾರಿಯ ದೃಢೀಕರಣವಿರಬೇಕು.

ಕಲಾವಿದರು ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಸಲ್ಲಿಸಿದ ಮೂರು ಅರ್ಜಿಯಲ್ಲಿ ಒಂದು ಅರ್ಜಿಯನ್ನು ತಮ್ಮಲ್ಲಿ ಉಳಿಸಿಕೊಂಡು ಮತ್ತೆರಡನ್ನು ಕಲಾವಿದರಿಗೆ ಸಂಬಂಧಪಟ್ಟ ಇಲಾಖೆಗೆ ಕಳುಹಿಸುತ್ತಾರೆ. ಅಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯ ಕಚೇರಿಗೆ ಕಳುಹಿಸುತ್ತಾರೆ. ಅಲ್ಲಿ ಅರ್ಜಿದಾರ ಕಲಾವಿದರಿಗೆ ವಿಶೇಷ ಸಂದರ್ಶನ ಏರ್ಪಡಿಸಿ, ಅರ್ಜಿ ಸಲ್ಲಿಸಿರುವ ಕಲಾವಿದರಿಗೆ ವಿವಿಧ ಆಯಾಮಗಳಲ್ಲಿ ಪ್ರಶ್ನಿಸಿ, ನಂತರ ತೀರ್ಪುಗಾರರು ಮಾಸಾಶನ ದೃಢೀಕರಣಗೊಳಿಸುತ್ತಾರೆ. ಮೈಸೂರು ಜಿಲ್ಲೆಯಿಂದ ಈಗಾಗಲೇ 17 ಕಲಾವಿದರ ಅರ್ಜಿ ಕಳುಹಿಸಲಾಗಿದ್ದು, ಅವರಿಗೆ ಮಾಸಾಶನ ಮಂಜೂರಾಗಿಲ್ಲ.

> ಮಾಸಾಶನ ಪಡೆಯಲು ಯಾವಾಗ ಬೇಕಿದ್ದರೂ ಅರ್ಜಿ ಸಲ್ಲಿಸಬಹುದು, ಅದಕ್ಕೆ ಯಾವುದೇ ಗಡುವು ಇಲ್ಲ. ಆದರೆ, ಸರ್ಕಾರದ ಮಾರ್ಗಸೂಚಿಯಂತಿರಬೇಕು. ಮಾಸಾಶನ ಹೆಚ್ಚಿಸಬೇಕೆಂದು ಅನೇಕ ಅರ್ಜಿಗಳು ನಿರಂತರವಾಗಿ ಬರುತ್ತವೆ. ಅದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ಅಂತಿಮವಾಗಿ ಸರ್ಕಾರವೇ ನಿರ್ಧಾರ ತೆಗೆದುಕೊಳ್ಳುತ್ತದೆ.
> – ಡಾ.ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಪೂರ್ಣ ಮಾಹಿತಿ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ವೃದ್ಧಾಪ್ಯ ವೇತನ, ವಿಧವಾವೇತನ, ಅಂಗವಿಕಲರ ಮಾಸಾಶನ, ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಪಿಂಚಣಿ ಇತ್ಯಾದಿಗಳನ್ನು ಪಡೆಯುತ್ತಿದ್ದು, ನಿಗದಿತ ಮಾಸಾಶನ ಹಣವೂ ಸೇರಿದಂತೆ ಆದಾಯ ಮಿತಿಯನ್ನು ಮೀರಬಾರದು ಎಂಬ ಅನೇಕ ನಿಯಮಗಳನ್ನು ಒಳಗೊಂಡಿದ್ದು, ಇಷ್ಟೆಲ್ಲ ನಿಯಮಗಳ ನಂತರ ಅವರಿಗೆ ಮಾಸಾಶನ ಮಂಜೂರಾಗಲಿದೆ.

ವರಕೋಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸಚಿವ ಹೆಚ್.ಸಿ.ಮಹದೇವಪ್ಪ ದಿಢೀರ್ ಭೇಟಿ; ಮಕ್ಕಳಿಗೆ ಪಾಠ



ಮೈಸೂರು,ಜು.13(ಎಂಟಿವೈ)– ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ ಗುರುವಾರ ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಯಲ್ಲಿರುವ ವರಕೋಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಅನಿರೀಕ್ಷಿತ ಭೇಟಿ ನೀಡಿ, ಶಾಲೆಯ ಪರಿಸ್ಥಿತಿ ಅವಲೋಕಿಸಿದರಲ್ಲದೆ ಮಕ್ಕಳಿಗೆ ಪಾಠ ಮಾಡುವ ಮೂಲಕ ಗಮನ ಸೆಳೆದರು.

ಮೈಸೂರಿಂದ ತವರು ಕ್ಷೇತ್ರ ತಿ.ನರಸೀಪುರಕ್ಕೆ ಪ್ರಯಾಣಿಸುತ್ತಿದ್ದ ವೇಳೆ ಮೊರಾರ್ಜಿ ದೇಸಾಯಿ ಶಾಲೆಯನ್ನು ಕಂಡರು. ಎಂದಿನಂತೆ ತರಗತಿ ನಡೆಯುತ್ತಿದ್ದ ವೇಳೆ ಸಚಿವರ ಕಾರು ಅನಿರೀಕ್ಷಿತವಾಗಿ ಶಾಲೆ ಗೇಟ್ ಮುಂದೆ ಬಂದು ನಿಲ್ಲುತ್ತಿದ್ದಂತೆ ಗಾಬರಿಗೊಂಡ ಭದ್ರತಾ ಸಿಬ್ಬಂದಿ ಗೇಟ್ ತೆರೆದರು. ಕಾರಿನಿಂದ ಕೆಳಗಿಳಿಯುತ್ತಿದ್ದಂತೆಯೇ ನೇರವಾಗಿ ಶಾಲಾ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ ಹಾಗೂ ಅಡುಗೆ ಮನೆಗೆ ತೆರಳಿ ಪರಿಶೀಲಿಸಿ, ಶುಚಿತ್ವ ಕಾಪಾಡಲು ಇನ್ನಷ್ಟು ಗಮನ ಹರಿಸಬೇಕು. ಅಡುಗೆ ತಯಾರಿಸುವ ಸಿಬ್ಬಂದಿಗಳು ಸ್ವಚ್ಛವಾಗಿರಬೇಕು. ಅಡುಗೆ ಮನೆ ಶುಚಿಯಾಗಿ ಇಟ್ಟುಕೊಳ್ಳಬೇಕು ಎಂದು ಸೂಚಿಸಿ, ವಿದ್ಯಾರ್ಥಿಗಳಿಗಾಗಿ ತಯಾರು ಮಾಡಲಾಗಿದ್ದ ಹುರುಳಿಕಾಳಿನ ಪಲ್ಯ ಸೇವಿಸಿದರು.

ತರಗತಿಯಲ್ಲಿ ಪಾಠ: ಶಾಲೆಯ ಪರಿಸ್ಥಿತಿಯನ್ನು ಅವಲೋಕಿಸಿದ ಬಳಿಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕೆಲಕಾಲ ಪಾಠ ಮಾಡಿದರು. ಜನಸಂಖ್ಯೆ ಸ್ಫೋಟದಿಂದ ಆಗುತ್ತಿರುವ ಸಮಸ್ಯೆಯನ್ನು ಎಳೆ ಎಳೆಯಾಗಿ ವಿವರಿಸಿದರು. ಆರೋಗ್ಯ, ಶಿಕ್ಷಣ, ಔದ್ಯೋಗಿಕ ಕ್ಷೇತ್ರದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮದ ಬಗ್ಗೆ ವಿವರಿಸಿದರು. ಎಲ್ಲಾ ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ, ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲೆಯ ಪ್ರಾಂಶುಪಾಲರು ಮತ್ತು ಶಿಕ್ಷಕರೊಂದಿಗೆ ಚರ್ಚಿಸಿ, ವಿದ್ಯಾರ್ಥಿಗಳಿಗೆ ಕಲಿಕೆಯ ಜೊತೆಗೆ ಬದುಕನ್ನು ಕಟ್ಟಿಕೊಳ್ಳುವ ಕೌಶಲ್ಯವನ್ನು ಕಲಿಸಬೇಕು. ಕಳೆದ ಬಾರಿಗಿಂತ ಈ ಸಾಲಿನಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸಬೇಕು. ಶಾಲೆಯ ಆವರಣದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೈತೋಟ ನಿರ್ಮಿಸಿ, ವಿದ್ಯಾರ್ಥಿನಿಲಯಕ್ಕೆ ಅಗತ್ಯವಿರುವ ಸೊಪ್ಪು, ತರಕಾರಿಗಳನ್ನು ಬೆಳೆಯಬೇಕು. ಈ ಮೂಲಕ ಮಕ್ಕಳಿಗೆ ಪ್ರತಿದಿನ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಲು ಕ್ರಮವಹಿಸಬೇಕು ಎಂದರು.

ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾಗಿರುವ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದ ಒದಗಿಸಲಾಗುವುದು. ಕಲಿಕೆಯಿಂದ ಯಾವುದೇ ಮಕ್ಕಳು ವಂಚಿತರಾಗಬಾರದು. ಪ್ರತಿಯೊಬ್ಬರೂ ಶಿಕ್ಷಣದಿಂದ ಜ್ಞಾನವಂತರಾಗಿ ಸಮಾಜದಲ್ಲಿ ಉತ್ತಮವಾದ ಜೀವನ ನಡೆಸಬೇಕು ಎಂದು ತಿಳಿಸಿದರು.

ಹಳೇ ಪಿಂಚಣಿ ಯೋಜನೆ ಜಾರಿ ಇಲ್ಲ

ಬೆಂಗಳೂರು, ಜು.13– ರಾಜ್ಯ ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೇ ರಾಜ್ಯ ಸರ್ಕಾರಿ ನೌಕರರ ಬಹುದಿನದ ಬೇಡಿಕೆ ಹೊಸ ಪಿಂಚಣಿ ಯೋಜನೆ ರದ್ದುಗೊಳಿಸಿ, ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು.

ಇದೀಗ ರಾಜ್ಯ ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಯೋಜನೆಯನ್ನು ಜಾರಿ ಮಾಡಲು ನಿರ್ಧರಿಸಿಲ್ಲ ಎಂದು ತಿಳಿಸಿದೆ. ಈ ಮೂಲಕ ಹಳೆ ಪಿಂಚಣಿ ಜಾರಿ ನಿರೀಕ್ಷೆಯಲ್ಲಿದ್ದ ರಾಜ್ಯ ಸರ್ಕಾರಿ ನೌಕರರಿಗೆ ಬಿಗ್ ಶಾಕ್ ನೀಡಲಾಗಿದೆ. ಈ ಬಗ್ಗೆ ವಿಧಾನಪರಿಷತ್‌ನಲ್ಲಿ ಸದಸ್ಯ ಕೋಟಾ ಶ್ರೀನಿವಾಸ ಪೂಜಾರಿ ಅವರು ಕೇಳಿದಂತಹ ಚುಕ್ಕೆ ಗುರಿತಿನ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರಿಸಿದ್ದಾರೆ.

ರಾಜ್ಯದಲ್ಲಿ NPS ಯೋಜನೆಯಡಿ ಇರುವ ಸರ್ಕಾರಿ ನೌಕರರು ಎಷ್ಟು ಎಂಬುದಕ್ಕೆ ಉತ್ತರಿಸಿದ ಸಿಎಂ, 24–06–2023ಕ್ಕೆ ಇದ್ದಂತೆ ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ 3,04,511. ಇದು ಸ್ವಾಯತ್ತ ಸಂಸ್ಥೆಯ ನೌಕರರು ಒಳಗೊಂಡಂತಹ ಸಂಖ್ಯೆ ಆಗಿದೆ ಎಂಬುದಾಗಿ ತಿಳಿಸಿದ್ದಾರೆ. ಇನ್ನೂ ರಾಜ್ಯ ಸರ್ಕಾರಿ ನೌಕರರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿ ಮಾಡಲು ಸರ್ಕಾರ ನಿರ್ಧರಿಸಿದೆಯೇ ಎಂಬ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದ್ದಾರೆ. ಹಾಗಿದ್ದಲ್ಲಿ ಎನ್ ಪಿಎಸ್ ಯೋಜನೆಯನ್ನು ರದ್ದುಪಡಿಸಿ, ಹಳೆಯ ಪಿಂಚಣಿ ಯೋಜನೆಯನ್ನು ಯಾವಾಗ ಜಾರಿ ಮಾಡಲಾಗುವುದು ಎಂಬ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 01–03–2023ರಲ್ಲಿ ರಾಜ್ಯದಲ್ಲಿ ಜಾರಿ ಇರುವ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ರದ್ದುಪಡಿಸುವ ಸಂಬಂಧ ಈಗಾಗಲೇ ಹಳೆಯ ಪಿಂಚಣಿ ಯೋಜನೆಯನ್ನು ಮರು ಜಾರಿ ಮಾಡಿರುವ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಆದೇಶಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ಸಾರ್ವಜನಿಕ ತಿಳುವಳಿಕೆಗಾಗಿ

ನಮ್ಮ ಕಕ್ಷಿದಾರರ ಉತ್ತರ ಪ್ರದೇಶ. ಲಕ್ನೌ, ಗೌಮತಿನಗರ, ಎಕ್ಸ್‌ಟೆನ್‌ಸನ್ ಸೆಕ್ಟರ್–6, ಶಾಹಿದ್ ಪಾತ್ ಹತ್ತಿರ, ಶಾಲಿಮರ್ ಒನ್ ವರ್ಲ್ಡ್, ವಿಸ್ಟ. ಟವರ್ ಸಿ–2, ಇಲ್ಲಿ ವಾಸವಾಗಿರುವ ಶ್ರೀಯುತ ಹರೀಶ್ ಕುಮಾರ್ ಲಾಲ್ ಚಾಂದಿನಿ ಮತ್ತು ಇವರ ಧರ್ಮಪತ್ನಿಯಾದ ಶ್ರೀಮತಿ ರೇಣು ಲಾಲ್‌ಚಂದನಿ ರವರುಗಳು.

1 ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಹೋಬಳಿ, ಶಿವಪುರ ಗ್ರಾಮದಲ್ಲಿ ವಾಸವಾಗಿರುವ ಶ್ರೀಯುತ, ಲೇ.ಬಸಪ್ಪ ರವರ ಪ್ರಾಪ್ತ ವಯಸ್ಸಿನ ಮಕ್ಕಳಾದ ಶ್ರೀಯುತ. ಭೋಗಪ್ಪ ಮತ್ತು ಶ್ರೀಯುತ ನಾಗಪ್ಪ ಮತ್ತು ಇವರ ಕುಟುಂಬದ ಇತರ ಎಲ್ಲಾ ಸದಸ್ಯರಿಂದ, ಇವರುಗಳ ಮಾಲೀಕತ್ವಕ್ಕೆ ಸೇರಿದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಹೋಬಳಿ, ಶಿವಪುರ ಗ್ರಾಮದ ಸರ್ವೆ ನಂ. 17/1 ರಲ್ಲಿ 2 ಎಕರೆ 22 ಗುಂಟೆ ಮತ್ತು ಸರ್ವೆ ನಂ. 17/2 ರಲ್ಲಿ 3 ಎಕರೆ ಜಮೀನುಗಳನ್ನು ಮತ್ತು 2.ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಕಸಬಾ ಹೋಬಳಿ, ಕಂದೇಗಾಲ ಗ್ರಾಮದಲ್ಲಿ ವಾಸವಾಗಿರುವ ಶ್ರೀಯುತ, ಸುಬ್ಬಪ್ಪ.ಎಸ್. ರವರ ಮಗನಾದ ಶ್ರೀಯುತ. ದಿನೇಶ್ ಕುಮಾರ್.ಎಸ್.ಎಸ್. ಮತ್ತು ಇವರ ಕುಟುಂಬದ ಇತರ ಎಲ್ಲಾ ಸದಸ್ಯರಿಂದ, ಇವರುಗಳ ಮಾಲೀಕತ್ವಕ್ಕೆ ಸೇರಿದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಹೋಬಳಿ ಶಿವಪುರ ಗ್ರಾಮದ ಸರ್ವೆ ನಂ. 18 ರಲ್ಲಿ 3 ಎಕರೆ 32 ಗುಂಟೆ, ಸರ್ವೆ ನಂ. 30/3 ರಲ್ಲಿ 1 ಎಕರೆ ಮತ್ತು ಸರ್ವೆ ನಂ. 30/1 ರಲ್ಲಿ 2 ಎಕರೆ 23 ಗುಂಟೆ ಜಮೀನುಗಳನ್ನು ಮತ್ತು

3. ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು. ಹಂಗಳ ಹೋಬಳಿ, ಹುಂಡಿಪುರ ಗ್ರಾಮದಲ್ಲಿ ವಾಸವಾಗಿರುವ ಶ್ರೀಯುತ ಲೇ.ಚಿಕ್ಕಮಲ್ಲೇಗೌಡ ರವರ ಧರ್ಮಪತ್ನಿಯಾದ ಶ್ರೀಮತಿ ಚಿನ್ನಮುತ್ತಮ್ಮ ಮತ್ತು ಇವರ ಕುಟುಂಬದ ಇತರ ಎಲ್ಲಾ ಸದಸ್ಯರಿಂದ, ಇವರುಗಳ ಮಾಲೀಕತ್ವಕ್ಕೆ ಸೇರಿದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು. ಹಂಗಳ ಹೋಬಳಿ. ಹುಂಡಿಪುರ ಗ್ರಾಮದ ಸರ್ವೆ ನಂ 100/1 ರಲ್ಲಿ 3 ಎಕರೆ 37 ಗುಂಟೆ ಜಮೀನು. ಈ ಮೇಲ್ಕಂಡ ಜಮೀನುಗಳು ಈ ಮೇಲೆ ಹೇಳಿದ ಆಯಯಾ ವ್ಯಕ್ತಿಗಳ ಪ್ರತ್ಯೇಕ ಹಕ್ಕು, ಹಿತಾಶಕ್ತಿ, ಮಾಲೀಕತ್ವ, ಸ್ವಾಧೀನಾನುಭವಕ್ಕೆ ಸೇರಿದ ಪ್ರತ್ಯೇಕ ಸ್ವತ್ತುಗಳಾಗಿದ್ದು, ಸದರಿ ಜಮೀನುಗಳನ್ನು ಈ ಮೇಲೆ ಹೇಳಿದ ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಒಂದು ಪಕ್ಷ ಸದರಿ ಜಮೀನುಗಳ ಮೇಲೆ ಬೇರೆ ಯಾವುದೇ ವ್ಯಕ್ತಿಗಳ ಹಕ್ಕು, ಹಿತಾಶಕ್ತಿ, ಮಾಲೀಕತ್ವ, ಸ್ವಾಧೀನಾನುಭವ ಅಥವಾ ಬೇರೆ ರೀತಿಯ ತಕರಾರು ಇದ್ದಲ್ಲಿ ಈ ಪತ್ರಿಕೆ ಪ್ರಕಟಣೆಗೊಂಡ 10 ದಿನಗಳ ಒಳಗಾಗಿ ಖುದ್ದಾಗಿ ತಕರಾರನ್ನು ಕಕ್ಷಿದಾರರ ವಕೀಲರಾದ ನಮ್ಮ ಕಛೇರಿಯಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸುವುದು. ಆಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ ಅವಧಿಯ ಒಳಗಾಗಿ ತಲುಪದಿದ್ದ ಪಕ್ಷದಲ್ಲಿ ಮೇಲೆ ಹೇಳಿದ ಸ್ವತ್ತುಗಳನ್ನು ನಮ್ಮ ಕಕ್ಷಿದಾರರು ಶುದ್ಧ ಕ್ರಯ ನೋಂದಣಿ ಮಾಡಿಕೊಳ್ಳುತ್ತಾರೆಂದು ತಿಳಸುತ್ತೇನೆ.

ಅರ್ಜಿದಾರರ ಪರ ವಕೀಲರು ಸಹಿ/– ಸತ್ಯನಾರಾಯಣ, ಬಿ.ಎಸ್ಸಿ.,ಎಂ.ಎ.,ಎಲ್‌ಎಲ್‌ಬಿ, ವಕೀಲರು & ನೋಟರಿ, ಕಛೇರಿ ನಂ, ಮೊದಲಂತಸ್ತು ಬೆಂಗಳೂರು– ಊಟಿ ರಾಷ್ಟ್ರೀಯ ಹೆದ್ದಾರಿ, ಗುಂಡ್ಲುಪೇಟೆ ಟೌನ್, ಚಾಮರಾಜನಗರ ಜಿಲ್ಲೆ ಮೊ.ನಂ 9448247608

ಉಪ ನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ

ಸಂಖ್ಯೆ:ಸಶಿಕ/ಲೆ.ಪ.1./ಕೆ.ಜಿ.ಬಿ.ವಿ–4/ಅ.ಟೆಂ./26/2023–24 ದಿನಾಂಕ:11.07.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಕೆ.ಜಿ.ಬಿ.ವಿ.(Type-4) ವಸತಿ ನಿಲಯ ಹಳ್ಳಿಮೈಸೂರು ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಸೇವೆ ಹಾಗೂ ಆಹಾರ ಪೂರೈಕೆ ಮಾಡುವ ಸಂಬಂಧ ಅರ್ಹ ಸಂಸ್ಥೆ/ಏಜೇನ್ಸಿಯವರಿಂದ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಿದ್ದು, https://kppp.karanataka.gov.in ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಎರಡು ಪ್ರತ್ಯೇಕ ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತ ರೂ.20,00,000/– ಪ್ರಾರಂಭದ ದಿನಾಂಕ: 12–07–2023, ಕೊನೆಯ ದಿನಾಂಕ: 26–07–2023 ರ 5.00.PM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28–07–2023 ರ 11.00.AM, ಆರ್ಥಿಕ ಬಿಡ್ ತೆರೆಯುವ ದಿನಾಂಕ: 31–07–2023 ರ 11.00.AM. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :08172–295020 ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಉಪನಿರ್ದೇಶಕರು, ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.

ವಾಸಾಸಂಇ/ಹಿಸನಿ/ಹಾಸನ/129/ಕೆಎಸ್‌ಎಂಸಿಎ/132/2023–24

ಕರ್ನಾಟಕ ಸರ್ಕಾರ
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು – 570001
ದೂರವಾಣಿ ಸಂಖ್ಯೆ: +91–0821–2520512 (ಕಛೇರಿ). 2520803(ಫ್ಯಾಕ್ಸ್)
ವೆಬ್‌ಸೈಟ್: www.mmcri/karnataka.gov.in
ಇ–ಮೇಲ್ : mmcrimysore@yahoo.com
ಸಂ.ಸರಬ/ವಿವ/91/2023–24 ದಿನಾಂಕ : 04.07.2023

ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಕೆ.ಆರ್.ಆಸ್ಪತ್ರೆಯ ರಕ್ತನಿಧಿ ಕೇಂದ್ರಕ್ಕೆ ವೈದ್ಯಕೀಯ ಉಪಕರಣವನ್ನು ಖರೀದಿಸಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ವಿದ್ಯುನ್ಮಾನ ವೇದಿಕೆ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ **ದಿನಾಂಕ:10.07.2023** ರಿಂದ ಪಡೆಯಬಹುದಾಗಿದ್ದು, **ದಿನಾಂಕ:14.08.2023** ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು, ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

DIPR/DDMYS/KSMCA/109/2023-24

ಕರ್ನಾಟಕ ಸರ್ಕಾರ
ಮೈಸೂರು ಅರಮನೆ ಮಂಡಳಿ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮೈಸೂರು
Phone: 0821-2421051, Fax: 2434425,
E-mail : ddmysorepalace@gmail.com, GST :29AAAGM0484M1ZX
ಟೆಂಡರ್ ಸಂಖ್ಯೆ : ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–01–2ನೇಕರೆ/2023–24, ದಿನಾಂಕ:06/07/2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಸಿವಿಲ್ ವಿಭಾಗದಿಂದ ಕ್ರಸಂ 01 ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು **ರೂ.40.00/–** ಲಕ್ಷಗಳ ಕೆಲಸಕ್ಕೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಹಾಗೂ ಮೈಸೂರು ಅರಮನೆ ಮಂಡಳಿ ಅಥವಾ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ ಕೇಂದ್ರ ಪ್ರಾಚ್ಯವಸ್ತು ಇಲಾಖೆಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ಏಜೆನ್ಸಿ/ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು (1) ವಿದ್ಯುನ್ಮಾನ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು **ಸಮಯ: 20.07.2023 11:00** ಗಂಟೆಯವರೆಗೆ. **(2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **21.07.2023 11:15 ಗಂಟೆಗೆ.** ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು

DIPR/DDMYS/KSMCA/116/2023-24